ಬಹುತೇಕವಾಗಿ ಸಂಪುಟದ ತೀರ್ಮಾನವಾಗಿದೆ. ಅದಷ್ಟು ಜಾಗ್ರತೆಯಾಗಿ ಇವರನ್ನು ಕೆಲಸಕ್ಕೆ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(V) ನಿರುದ್ಯೋಗಿ ಪಶುವೀಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು

ಶ್ರೀ ಬಾಬುರೆಡ್ಡಿ ವೆಂಕಪ್ಪ ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೇ ೧೯೮೫ರ ನವೆಂಬರ್ ತಿಂಗಳಲ್ಲಿ ಒಂದು ವರ್ಷದ ಅವಧಿಯ ಪಶುವೀಕ್ಷಕರ ತರಬೇತಿಯನ್ನು ಪೂರ್ಣಗೊಳಿಸಿ ಜೂನ್ ೧೯೮೬ರಲ್ಲಿ ಈ ರೀತಿ ತರಬೇತಿ ಪಡೆದವರ ಸಂದರ್ಶನ ನಡೆದು ಅಂಥವರನ್ನೆಲ್ಲಾ ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ಪಶುವೀಕ್ಷಕರ ಹುದ್ದೆಗೆ ಆಯ್ಕೆ ಮಾಡಲಾಯಿತು.

ಹಲವಾರು ಜನರು ತರಬೇತಿ ಪಡೆದು ಆಯ್ಕೆಗಾಗಿ ಅರ್ಹರಿದ್ದರೂ ಮತ್ತು ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದರೂ ಅಂಥವರು ಆಯ್ಕೆಯಾಗಿಲ್ಲ. ಈ ಜನರ ಆಯ್ಕೆಯ ಬಗ್ಗೆ ಸರಕಾರ ಈವರೆಗೆ ಯಾವುದೇ ಸೂಚನೆ ಅಥವಾ ಆದೇಶವನ್ನು ನೀಡಿಲ್ಲದಿರುವುದು ದುರ್ದೈವದ ಸಂಗತಿ.

ತರಬೇತಿ ಮುಗಿದು ಒಂದೂವರೆ ವರ್ಷ ಕಳೆದಿದ್ದರೂ ತರಬೇತಿ ಪಡೆದವರು ನಿರುದ್ಯೋಗಿಗಳಾಗಿ ಕಾಲ ಕಳೆಯುವುದು ಇಂದಿನ ದಿನಗಳಲ್ಲಿ ಬಹಳ ಕಷ್ಟ ಎಂಬುದು ತಮಗೂ ಗೊತ್ತು. ಕಾರಣ ಅವರ ತೊಂದರೆಗಳನ್ನು ಗಮನಿಸಿ ತರಬೇತಿ ಪಡೆದ ಪಶುವೀಕ್ಷಕರಿಗೆ ನೇಮಕಾತಿ ಆಜ್ಞೆಗಳನ್ನು ಈ ಕೂಡಲೇ ಮಾಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

೧೯೮೫ರ ನವಂಬರ್ ತಿಂಗಳಲ್ಲಿ ಒಂದು ವರ್ಷದ ಪಶು ಪರೀಕ್ಷಕರ ತರಬೇತಿ ಪೂರ್ತಿಗೊಳಿಸಿದ ಅಭ್ಯರ್ಥಿಗಳ ಪೈಕಿ ಇಲಾಖಾ ನೇಮಕಾತಿ ಸಮಿತಿಯು ೩೬೫ ಅಭ್ಯರ್ಥಿಗಳನ್ನು ಪಶು ಪರೀಕ್ಷಕರ ಹುದ್ದೆಗಳಿಗೆ ಆಯ್ಕೆ ಮಾಡಿತ್ತು. ಈ ರೀತಿ ಆಯ್ಕೆ ಮಾಡಲಾದ ೩೬೫ ಅಭ್ಯರ್ಥಿಗಳ ಪೈಕಿ ಒಟ್ಟು ೩೨೦ ಅಭ್ಯರ್ಥಿಗಳನ್ನು ದಿನಾಂಕ ೧೦-೭-೮೭ರಂದು ಮತ್ತು ೨೨-೮-೮೭ರಂದು ಖಾಲಿ ಇದ್ದ ಹುದ್ದೆಗಳಿಗೆ ನೇಮಿಸಿಕೊಳ್ಳಲಾಯಿತು. ಸಧ್ಯದಲ್ಲಿ ಇಲಾಖೆಯಲ್ಲಿ ಕೇವಲ ೧೬ ಸದರಿ ಹುದ್ದೆಗಳು ಮಾತ್ರ ಖಾಲಿ ಇದ್ದು ಇಲಾಖೆಯು ಕೆಲವು ಯೋಜನೇತರ ಕಾರ್ಯಕ್ರಮಗಳನ್ನು ಕೈಬಿಡುವುದರಿಂದ ಆ ಸಿಬ್ಬಂದಿಯವರನ್ನು ಈ ಖಾಲಿ ಹುದ್ದೆಗಳಿಗೆ ವರ್ಗಾಯಿಸಲು ಮೀಸಲಿಡಲಾಗಿದೆ.

ಉಪಾಧ್ಯಕ್ಷರು.—ಈಗ ೩೩೦ರ ನಿಯಮದ ಮೇಲೆ ವಿಷಯ ಮುಕ್ತಾಯವಾಯಿತು. ಈಗ ಆಯವ್ಯಯದ ಮೇಲೆ ಚರ್ಚೆ. ಶ್ರೀಮತಿ ನಾಗರತ್ನಮ್ಮನವರು ಪ್ರಾರಂಭ ಮಾಡಬೇಕು.

೧೯೮೭-೮೮ರ ಆಯವ್ಯಯದ ಮೇಲಿನ ಚರ್ಚೆ

ವಿತ್ತೀಯ ಕಾರ್ಯಕಲಾಪಗಳು

† **ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).**—ಮಾನ್ಯ ಉಪಾಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಮತ್ತು ಫೈನಾನ್ಸ್ ಮಿನಿಸ್ಟರ್ ಆದ ಶ್ರೀ ರಾಮಕೃಷ್ಣ ಹೆಗಡೆಯವರು ೧೯೮೭-೮೮ನೇ ಸಾಲಿನ ಈ ಬಜೆಟ್ ಇಟ್ಟಾಗ ಅವರು ಒಂದು ವಾಕ್ಯವನ್ನು ಹೇಳಿದ್ದಾರೆ. ''ನಾವು ಈ ಪಂಚಾಯತ್ ರಾಜ್ಯ ಮೆಂಬರ್ಸ್‌ಗಳನ್ನೆಲ್ಲಾ ನೋಡಿದೆವು, ಅವರನ್ನು ನೋಡಿ ಬಹಳ ಸಂತೋಷವಾಯಿತು. ಅವರ ಕಣ್ಣಲ್ಲಿ ಮೆರಗು ಮಿಂಚುತ್ತಿತ್ತು, ಅವರನ್ನು ನೋಡಿದ ತಕ್ಷಣ ನನಗೆ ಬಹಳ ಉಲ್ಲಾಸವಾಯಿತು'' ಹಾಗೆ ನಾನಾ ತರವಾಗಿ ವಿವರಿಸಿಕೊಂಡಿದ್ದಾರೆ. ಆ ಜನಗಳನ್ನು ನೋಡುವಂಥ ಭಾಗ್ಯ ನನಗೂ ಬಂದಿತ್ತು. ಆ ಜನಗಳನ್ನು ಎಂದರೆ, ಆ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್‌ಗಳನ್ನು ನೋಡಿದಾಗ ನನಗೆ ಹೇಗಾಯಿತು ಎಂದರೆ, ಅವರ ಕಣ್ಣಲ್ಲಿ ಯಾವ ತರದ ಕಾಂತಿಯೂ ಇರಲಿಲ್ಲ. ಅವರ ಕಣ್ಣಲ್ಲಿ ಬರೀ ಸುಸ್ತು ಕಾಣು

ತ್ತಿತ್ತು. ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್‌ಗಳು ಬಹಳ ದೂರದಿಂದ ಬಸ್‌ನಲ್ಲಿ ವಾಂತಿ ಮಾಡಿಕೊಂಡು ಬಂದು ಸುಸ್ತಾಗಿದ್ದರು. ಅವರು ಸುಸ್ತಾಗಿ ಬಂದಾಗ ಇವರು ಭಾಷಣ ಪ್ರಾರಂಭ ಮಾಡಿದ್ದರು. ಮಾನ್ಯ ಎಸ್. ಕೆ. ಡೇ ಅವರು ಮತ್ತೆ ಮುಖ್ಯಮಂತ್ರಿಗಳು ಹಾಗೂ ಮಾನ್ಯ ನಜೀರ್‌ಸಾಬ್‌ರವರು ಭಾಷಣ ಮಾಡಿದರು. ಇವರು ಮಾಡಿದ ಭಾಷಣಗಳಿಂದ ಅವರಿಗೆ ಇನ್ನೂ ಸುಸ್ತಾಯಿತು. ಬಿಜಾಪುರ, ಗುಲ್ಬರ್ಗಾ ಮುಂತಾದ ದೂರದ ಕಡೆಗಳಲ್ಲಿ ಕೆಲವು ಹೆಣ್ಣು ಮಕ್ಕಳು ಸಣ್ಣ ಸಣ್ಣ ಮಕ್ಕಳನ್ನು ಸಹ ಕೈಯಲ್ಲಿ ಎತ್ತಿಕೊಂಡು ಬಂದಿದ್ದರು. ಈ ಹೆಂಗಸರುಗಳು ಉರಿ ಬಿಸಿಲಿನಲ್ಲಿ ಇವರ ಭಾಷಣಗಳನ್ನು ಕುಳಿತುಕೊಂಡು ಕೇಳಿದರು. ಆಮೇಲೆ ಹೊಟ್ಟೆ ಹಸಿವಿನಿಂದ, ಅಲ್ಲಿ ಹೋಗಿ ನೋಡಿದರೆ ಇವರು ಕೊಡುವ ಊಟ ಹಳಸಿ ಹೋಗಿತ್ತು, ಊಟ ಇಲ್ಲದೆ ಅವರು ಬಹಳ ಕಷ್ಟಪಟ್ಟರು. ಆಮೇಲೆ, ಅವರನ್ನು ಬಸ್ ಹತ್ತಿಸಿ ಕುರಿ ಮಂದೆಯನ್ನು ಮತ್ತು ದನಗಳನ್ನು ಸಾಗಿಸುವ ಹಾಗೆ ಅವರನ್ನು ಸಾಗಿಸಿಬಿಟ್ಟರು. ಇಂಥ ಚರಿತ್ರೆ ಯಾವಾಗಲೂ ಆಗಿರಲಿಲ್ಲ ಇದನ್ನು ಏತಕ್ಕೋಸ್ಕರ ಮಾಡಿದರೋ ಅವರಿಗೇ ಇದೆಲ್ಲಾ ಅರ್ಥವಾಗಬೇಕು, ನನಗಂತೂ ಇದರ ಬಗ್ಗೆ ಅರ್ಥವಾಗಿಲ್ಲ. ಆಮೇಲೆ ಇನ್ನೂ ಇವರು ಹೇಳಿದ್ದಾರೆ. ಇದು ಒಂದು ಚರಿತಾರ್ಹವಾದ ವಿಷಯ, ಇದನ್ನು ಯಾರೂ ಹಿಂದೆ ಮಾಡಿರಲಿಲ್ಲ. ಆ ಕೆಲಸವನ್ನು ನಾವು ಮಾಡಿದ್ದೇವೆ. ಯಾರು ಕೊಡದೇ ಇದ್ದ ಪವರ್ಸ್‌ನ್ನು ಅವರಿಗೆ ಟ್ರಾನ್ಸ್‌ಫರ್ ಮಾಡಿದ್ದೇವೆ. ಈ ತರಹ ಕೆಲಸವನ್ನು ಯಾರು ಹಿಂದೆ ಮಾಡಿರಲಿಲ್ಲವೆಂದು ಹೇಳಿದ್ದಾರೆ. ನಾನು ಇದನ್ನು ಬಹಳ ಸಾರಿ ಹೇಳಿದ್ದೇನೆ. ಬ್ರಿಟಿಷರು ಇದ್ದಂಥ ದಿನಗಳಲ್ಲೂ ಮತ್ತು ಇಂಡಿಪೆಂಡೆನ್ಸ್ ಬಂದ ಮೇಲೂ ಕೂಡ ಡಿಸ್ಟ್ರಿಕ್ಟ್ ಬೋರ್ಡ್‌ಗಳು ಇದ್ದವು. ಗ್ರೂಪ್ ಪಂಚಾಯಿತಿಗಳು ಇದ್ದವು. ಆಮೇಲೆ ತಾಲ್ಲೂಕು ಬೋರ್ಡ್ ಪಂಚಾಯಿತಿಗಳು ಬಂದವು ವಿಲೇಜ್ ಪಂಚಾಯಿತಿಗಳು ಬಂದವು. ಇವಕ್ಕೆಲ್ಲಾ ಏನೂ ಪವರ್ಸ್ ಇರಲಿಲ್ಲವೇ ಎಂದು ನಾವು ಯೋಚನೆ ಮಾಡಬೇಕಾಗಿದೆ. ಅವರಿಗೆ ಮೊದಲು ಇಲ್ಲದೆ ಇದ್ದ ಪವರ್ಸ್‌ನ್ನು ಇವರು ಹೊಸದಾಗಿ ಏನಾದರೂ ಕೊಡುತ್ತಿದ್ದಾರೆಯೇ?

೧-೦೦ ಪಿ. ಎಂ.

ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳು ಕೆಲಸ ಮಾಡುತ್ತಿರಲಿಲ್ಲವೇ ? ಹೊಸದಾಗಿ ಅವಕ್ಕಿಲ್ಲದ ಪವರನ್ನು ಇವಕ್ಕೇನೂ ಕೊಟ್ಟಿಲ್ಲ. ಇದಂತೂ ಅರ್ಥವಾಗದ ಸಂಗತಿ, ಹಾಲಿ ಇದ್ದ ಕಾನೂನಿಗೆ ಕೆಲವು ಅಮೆಂಡ್‌ಮೆಂಟ್‌ಗಳನ್ನು ಮಾಡಿ ಹೊಸದಾಗಿ ದೊಡ್ಡ ಕಾನೂನು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದರಿಂದ ಕಾನೂನಿನ ಕಡತಕ್ಕೆ ಇನ್ನೊಂದು ಸೇರಿದಂತಾಯಿತೇ ವಿನಾ ಬೇರೆ ಯಾವ ದೊಡ್ಡ ಕೆಲಸವನ್ನು ಮಾಡಿದಂತಾಗಲಿಲ್ಲ.

ಇನ್ನು ಚುನಾವಣೆಗಳ ಬಗ್ಗೆ ಹೇಳಿದ್ದಾರೆ. ಈ ಚುನಾವಣೆಗಳನ್ನು ಇವರು ಹೇಗೆ ನಡೆಸಿದರು ಎನ್ನುವುದು ಚುನಾವಣೆಯಲ್ಲಿ ಭಾಗವಹಿಸಿದವರಿಗೆಲ್ಲ ಚೆನ್ನಾಗಿ ಗೊತ್ತು ಇವನ್ನೆಲ್ಲಾ every-thing is fair in love and war ಎಂಬ ಒಂದೇ ಒಂದು ಥಿಯರಿಯಲ್ಲಿ ಹೇಳಿದಂತೆ ಮಾಡಿದ್ದಾರೆ. ಅದರಂತೆ ವಾರೋ ಲವ್ವೋ ಹೇಗೆ ಎಂಬುದು ಎರಡೂ ಗೊತ್ತಿಲ್ಲ. ಹೀಗೆ ಚುನಾವಣೆ ನಡೆಸಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಜಾರಿಗೆ ತಂದಿದ್ದಾರೆ. ಅವುಗಳು ೧೯೮೭ರ ಏಪ್ರಿಲ್‌ನಿಂದ ಕೆಲಸ ಮಾಡುತ್ತವೆ. ಅವು ಹೇಗೆ ಕೆಲಸ ಮಾಡುತ್ತವೆಂಬುದನ್ನು ಕಾದು ನೋಡಬೇಕಾಗಿದೆ. ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಎಲೆಕ್ಷನ್ ಮಾಡಿ ಆಮೇಲೆ ಕೋಟಿಗಟ್ಟಲೆ ಖರ್ಚು ಮಾಡಿ ಈ ಜಾತ್ರೆ ಮಾಡಿಸಿ, ಇದನ್ನೆಲ್ಲಾ ಮಾಡಿಸಿ ಅಡ್ಮಿನಿಸ್ಟ್ರೇಟರ್‌ಗಳಿಗೆ ಒಂದೊಂದು ವಾರ ರಜಾ ಕೊಟ್ಟು ಇವರು ಪಡೆದಿರುವ ಪುರುಷಾರ್ಥ ನನಗಂತೂ ಏನೂ ಎಂದು ಗೊತ್ತಿಲ್ಲ. ಸರ್ಕಾರದ ಪಬ್ಲಿಸಿಟಿ ಮಾತ್ರ ಇದು ಹೊರತು ಮುಗ್ಧ ಜನರನ್ನು ಉಪಯೋಗಿಸಿಕೊಂಡು ಮನೆ ಮನೆ ಒಡೆದು ಅವರನ್ನು ಹಾಳು ಮಾಡುವುದರಿಂದ ಆಗಿರುವ ಪುರುಷಾರ್ಥ ಅವರ ಮನಸ್ಸಿಗೇ ಅರ್ಥವಾಗಿರಬಹುದು.

ಇನ್ನು ಈ ಜಿಲ್ಲಾಪರಿಷತ್ತುಗಳು ಕೆಲಸ ಮಾಡುವ ಬಗ್ಗೆ ಫೈನಾನ್ಸ್ ಬಗ್ಗೆ ಏನೂ ಹೇಳಿಲ್ಲ. ಫೈನಾನ್‌ಶಿಯಲ್ ರಿಸೋರ್ಸಸ್ ಬಗ್ಗೆ ಏನೂ ಹೇಳಿಲ್ಲ. ಯಾವುದನ್ನೂ ಫೈನಲೈಸ್ ಮಾಡಿಲ್ಲ ಸಿಟಿ ಹೆಡ್‌ಕ್ವಾರ್ಟರ್ಸ್‌ನಿಂದ ಡಿಸ್ಟ್ರಿಕ್ಟ್‌ಗಳಿಗೆ ಅಧಿಕಾರವನ್ನು ಟ್ರಾನ್ಸ್‌ಫರ್ ಮಾಡುವುದರಿಂದ ಇವರು ಹೇಳುವ ಗ್ರಾಸ್‌ರೂಟ್ ಲೆವಲ್‌ನಲ್ಲಿ ಡೆಮಾಕ್ರಸಿ ಹೇಗೆ ಯಶಸ್ವಿಯಾಗುತ್ತದೆ, ಹೇಗೆ ಸಾಧ್ಯವಾಗುತ್ತದೆ ಎಂದು ಕಾಣುತ್ತಿಲ್ಲ. ಫೈನಾನ್ಸಿಯಲ್ ಆಟಾನಮಿ ಕೊಟ್ಟ ಮೇಲೆ ಇವು ಹೇಗೆ ಕೆಲಸ ಮಾಡುತ್ತವೆಂಬುದನ್ನು ನೋಡಬೇಕು. ಪಟೇಲರು ಶ್ಯಾನುಭೋಗರನ್ನು ಮನೆಗೆ ಕಳಿಸಿ ಇವರು ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ ಅದೇ ರೀತಿ ಇವೂ ಪೇಚಿಗೆ ಸಿಕ್ಕಿದರೆ ಕಷ್ಟವಾಗುತ್ತದೆ.

ಬರಗಾಲದ ಬಗ್ಗೆ ಕೆಲವರು ಮಾತನಾಡಿದ್ದಾರೆ. ಕೆಲವು ಕಡೆ ಎಂಟೊಂಭತ್ತು ವರ್ಷಗಳಿಂದ ಮತ್ತೆ ಕೆಲವು ಕಡೆ ದನಗಳಿಗೆ ಮೇವೇ ನೀರೇ ಇಲ್ಲದಂತಾಗಿತ್ತು. ಆದ್ದರಿಂದ ಬೇಸಿಗೆ ಶುರುವಾಗುವ ಮುಂಚೆಯೇ ಈಗಾಗಲೇ ಮನುಷ್ಯರಿಗಿರಲಿ, ದನಗಳಿಗೆ ನೀರು ಇಲ್ಲದಂತಾಗಿದೆ. ಬೋರ್ ಮಾಡಿರುವ ಬಾವಿಗಳಲ್ಲೂ ನೀರು ಆಳಕ್ಕೆ ಇಳಿದುಹೋಗಿದೆ. ಇನ್ನು ಕೆಲವು ಬಾವಿಗಳಿಗೆ ಬೋರ್ ಹಾಕುವುದಕ್ಕೆ ಆಗಿಲ್ಲ. ಏಕೆಂದರೆ ಅಲ್ಲಿಗೆ electrical ಮೆಟೀರಿಯಲ್ಸ್ ಟ್ರಾನ್ಸ್‌ಫಾರ್ಮರ್‌ಗಳು conductors and poles ಹೋಗಿಲ್ಲ ಅದರಲ್ಲೂ ಎಲೆಕ್ಷನ್ಸ್ ಆದ ಮೇಲೆ ಅನೇಕ ಕಡೆ ಹುಲ್ಲು ಬಣವೆಗಳನ್ನು ಸುಟ್ಟುಹಾಕಿದ್ದಾರೆ, ಆದ್ದರಿಂದ ದಯವಿಟ್ಟು ಈಗಲೇ ಜನಗಳಿಗೆ ಊಟದ ದನಗಳಿಗೆ ಮೇವು ನೀರುಗಳನ್ನು ಒದಗಿಸಲು ಸರ್ಕಾರ ಜವಾಬ್ದಾರಿ ಹೊಂದಿರುತ್ತದೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಇನ್‌ಫ್ಲೇಷನ್ ವಿಚಾರದಲ್ಲಿ ಮಾತನಾಡಿದ್ದಾರೆ, ಕರ್ನಾಟಕದ ಹಣದುಬ್ಬರವನ್ನು ರಾಷ್ಟ್ರಕ್ಕೆ ಹೋಲಿಸಿಕೊಂಡು ಇದು ಬಹಳ ಕಡಿಮೆಯೆಂದು ಹೇಳಿದ್ದಾರೆ. ಪ್ರೈಸ್ ಇಂಡೆಕ್ಸ್ ಕಾಂಪ್ಯೂಟ್ ಮಾಡುವಾಗ ಬೇರೆ ದೇಶಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾರೆ ಎನ್ನುವುದನ್ನು ಯಾರೂ ಕೂಡ ಮರೆಯಬಾರದು, ನಮ್ಮ ಕರ್ನಾಟಕದಲ್ಲಿ ೧೯೫೨–೫೩ರಲ್ಲಿ ಮಾಡಿದ ಬೇಸ್ ಅನ್ನು ಇಟ್ಟುಕೊಂಡಿದ್ದಾರೆ, ಎಕಾನಾಮಿಕ್ ಸರ್ವೆ ಬಗ್ಗೆ ೨೪ನೇ ಪೇಜ್‌ನಲ್ಲಿ ಹೇಳಿದ್ದಾರೆ. ೧೯೬೦–೬೧ರಲ್ಲಿ ಆದ ಬೇಸ್‌ನಲ್ಲಿ ಅಗ್ರಿಕಲ್ಚರ್ ಕಮಾಡಿಟಿ ಜೊತೆಗೆ ರಾ ಮೆಟೀರಿಯಲ್ಸ್, ಮ್ಯಾನುಫ್ಯಾಕ್ಚರ್ ಆರ್ಟಿಕಲ್ಸ್ ಎಲ್ಲಾ ಸೇರುತ್ತದೆ. ಯಾವುದೋ ಕಾಲದ ಬೇಸ್ ಅನ್ನು ಇಟ್ಟುಕೊಂಡು ನಮ್ಮ ಇನ್‌ಫ್ಲೇಷನ್ ಜಾಸ್ತಿಯಾಗಿಲ್ಲವೆಂದು ಹೇಳಿದರೆ ಜನಗಳಿಗೆ ಶುದ್ಧ ಮೋಸ ಮಾಡಿದ ಹಾಗಾಗುತ್ತದೆ. ನೀವು ಹೇಳುತ್ತಿರುವುದು ೧೯೫೨–೫೩ರ ಪ್ರೈಸ್ ಇಂಡೆಕ್ಸ್ ಬೇಸ್ ಫಿಗರ್ಸ್ ಮೇಲೆ, ಕೇಂದ್ರ ಸರಕಾರ ಇಟ್ಟುಕೊಂಡಿರುವುದು ೧೯೬೦–೬೧ರ ಬೇಸ್ ಮೇಲೆ, ಅವರು ಆಗಲೇ ಎರಡು ಸಾರಿ ಜಾಸ್ತಿ ಮಾಡಿದ್ದಾರೆ ನಮ್ಮದು ಜಾಸ್ತಿಯಾಗಿಲ್ಲವೆಂದು ಹೇಳಿ ಜನರಿಗೆ ಮೋಸ ಮಾಡುವುದು ಶುದ್ಧ ತಪ್ಪು.

ಇನ್ನು ನೀರಾವರಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ ಇರಿಗೇಷನ್ ಪೊಟೆನ್‌ಷಿಯಲ್‌ನಲ್ಲಿ ೨೦೦೦ ಇಸವಿಯೊಳಗೆ ನಮ್ಮ ಪಾಲಿನ ಎಲ್ಲಾ ನೀರಾವರಿಯನ್ನು ಉಪಯೋಗ ಮಾಡಿಕೊಳ್ಳುತ್ತೇವೆಂದು ಆಗಿನಿಂದ ಭರವಸೆ ಕೊಡುತ್ತಲೇ ಬಂದಿದ್ದಾರೆ. ಬಜೆಟ್‌ನ ಭಾಷಣದಲ್ಲಾಗಲೀ, ಡಾಕ್ಯುಮೆಂಟ್‌ನಲ್ಲಾಗಲೀ ಇದರ ಇಂಡಿಕೇಷನ್ ಎಲ್ಲಿಯೂ ಇಲ್ಲ ಇದಕ್ಕೆ ಒಟ್ಟು ಎಷ್ಟು ಹಣ ಖರ್ಚಾಗುತ್ತದೆ ಇದರ ರಿಸೋರ್ಸಸ್ ಹೇಗೆ, ಇದನ್ನು ಹೇಗೆ ಫೇಸ್ ಮಾಡುತ್ತೇವೆ ಎಂಬ ಬಗ್ಗೆ ಯಾವ ಡಾಕ್ಯುಮೆಂಟ್‌ನಲ್ಲೂ ಇಲ್ಲ. ಪ್ಲಾನ್ ಔಟ್‌ಲೇ ಇರಿಗೇಷನ್, ಪರ್ಸಂಟೇಜ್ ಟರ್ಮ್ಸ್ ನೋಡಬೇಕಾದರೆ ಅನೆಕ್ಸ್‌ಚರ್ ೮ರಲ್ಲಿ ಇದೆ. ೧೯೮೬–೮೭ರಲ್ಲಿ ೨೧.೫೬ ಇದ್ದು ಈಗ ಅಂದರೆ ೧೯೮೭–೮೮ರಲ್ಲಿ ೨೨,೦೧ ಆಗಿದೆ, ಇದು ಮಾರ್ಜಿನಲ್ ಇನ್‌ಕ್ರೀಸ್ ಆಗಿದೆ ಆದರೂ ಇದೇನೂ ಅಂತಹ ದೊಡ್ಡ ಇನ್‌ಕ್ರೀಸ್ ಅಲ್ಲ. ಇರಿಗೇಷನ್ ಪೊಟೆನ್‌ಷಿಯಲ್ ಅನ್ನು ೨೦೦೦ ಇಸವಿಯೊಳಗೆ ಮುಗಿಸುತ್ತೇವೆಂದು ಹೇಳಿದ್ದಾರೆ, ಇವೆಲ್ಲಾ ಹೇಗೆ ಮುಗಿಯುತ್ತದೆ ಎಂಬ ಬಗ್ಗೆ ಆಲೋಚನೆ ಮಾಡಬೇಕು. ಈ ಸಾರಿಯ ಬಜೆಟ್ ಸ್ಪೀಚ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ೧೯೮೬–೮೭ರಲ್ಲಿ ೯೦,೦೦೦ ಹೆಕ್ಟೇರ್ಸ್ ಇರಿಗೇಷನ್ ಪೊಟೆನ್‌ಷಿಯಲ್ ವಿಲ್‌ಬಿ ಆಡೆಡ್ ಎಂದು ಹೇಳಿದ್ದಾರೆ, ಇದರಲ್ಲಿ ೬೧೦೦೦ ಹೆಕ್ಟೇರ್ಸ್ ವಿಲ್‌ಬಿ ಅಂಡರ್‌ಮೇಜರ್ ಅಂಡ್ ಮೀಡಿಯಂ ಇರಿಗೇಷನ್ ಎಂದು ಹೇಳಿದ್ದಾರೆ ಆದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ೭೦,೦೦೦ ಹೆಕ್ಟೇರ್ಸ್ ವಿಲ್‌ಬಿ ಆಡೆಡ್ ಎಂದು ಹೇಳಿದ್ದಾರೆ ಮತ್ತು ೬೫,೦೦೦ ಹೆಕ್ಟೇರ್ಸ್ ವಿಲ್‌ಬಿ ಅಂಡರ್ ಮೇಜರ್ ಅಂಡ್ ಮಿಡಿಯಮ್ ಇರಿಗೇಷನ್ ಸ್ಕೀಮ್ಸ್ ಎಂದು ಹೇಳಿದ್ದಾರೆ, ಇದರಲ್ಲಿ ಯಾವುದು ಸರಿ ಯಾವುದು ತಪ್ಪು, ಮಾನ್ಯ ರಾಜ್ಯಪಾಲರು ಹೇಳಿದ್ದುದು ಸರಿಯೋ ಇಲ್ಲವೇ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುವುದು ಸರಿಯೋ. ನಿಮ್ಮಗಳಿಗೆ ಈ ಬಗ್ಗೆ ಏನೂ ಗೊತ್ತಿಲ್ಲವೇ, ಒಂದಕ್ಕೊಂದಕ್ಕೆ ತಾಳೆ ಹಾಕುವುದು ಬೇಡವೇ ? ಮಾನ್ಯ ರಾಜ್ಯಪಾಲರ ಬಾಯಲ್ಲಿ ಒಂದು ಹೇಳಿಸುವುದು, ತಾವು ಒಂದು ಹೇಳುವುದು. ನೀರು ಇಲ್ಲದೇ ಇರತಕ್ಕಂತಹವರ ಕಷ್ಟ ಇವರಿಗೆ ಹೇಗೆ ಗೊತ್ತಾಗುತ್ತದೆ. ನೀರಿಲ್ಲದೇ ಒಣಗಿ ಹೋಗತಕ್ಕಂತಹವರ ಬಗ್ಗೆ ಇವರಿಗೆ ಸೀರಿಯಸ್‌ನೆಸ್ ಇಲ್ಲವೇ ಇಲ್ಲ. ಅವರಿಗೆ ಯಾವುದರಲ್ಲಿ ಸೀರಿಯಸ್‌ನೆಸ್ ಇದೆಯೆಂದರೆ ತಾವುಗಳು ರಸವಾಗಿರುವ ಹಾಗೆ ನೋಡಿಕೊಳ್ಳುತಾರೇ ಹೊರತು ಒಣಗಿ ಹೋಗತಕ್ಕಂತಹವರ ಬಗ್ಗೆ ಏನೂ ಕಳಕಳಿ ಇಲ್ಲ ಎಂಬುದು ನಿಮ್ಮ ಮಾತಿನಿಂದ ಚೆನ್ನಾಗಿ ಗೊತ್ತಾಯಿತು.

ಇನ್ನು ಐದನೆಯ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ಹೆಮ್ಮೆಯಿಂದ, ಎದೆ ತಟ್ಟಿಕೊಂಡು ಇಟ್ಟಿದ್ದಾರೆ. ೧೯೮೩ ರಿಂದ ಇದನ್ನು ಇಡುತ್ತಿದ್ದಾರೆ, ನಾವು ನೋಡಿಕೊಂಡು ಬರುತ್ತಿದ್ದೇವೆ. ಅವರು ೮೬ನೇ ಬಜೆಟ್‌ನಲ್ಲಿ ಬಹಳ ಮುಖ್ಯವಾದ ಅನೌನ್ಸ್‌ಮೆಂಟನ್ನು ಮಾಡಿದ್ದಾರೆ ಅದು ಅನೆಕ್ಸ್ ಒನ್‌ನಲ್ಲಿ ಇದೆ. ಅವುಗಳ ಮೇಲೆ ಏನು ಆಕ್ಷನ್ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ನೀವು ಸ್ವಲ್ಪ ಹತ್ತಿರವಾಗಿ ಅದನ್ನು ನೋಡಿ. Let us take a closer look at it. ೮೬-೮೭ನೇ ಬಜೆಟ್‌ನಲ್ಲಿ ೩೪ ನ್ಯೂ ಪ್ರಪೋಸಲ್ ಅನ್ನು ಇಟ್ಟಿದ್ದಾರೆ, ಇದರಲ್ಲಿ ೧೦ ಪ್ರಪೋಸಲ್‌ಗೆ ಏನು ಆಕ್ಷನ್ ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಮೆಜಾರಿಟಿ ಕೇಸ್‌ಗಳು ರೀಸೆಂಟ್ ಆಗಿ ಇನಿಷಿಯೇಟ್ ಆಗಿವೆ. ಇನ್ನೂ ಕೆಲಸ ಮಾಡಬೇಕಾದದ್ದು ಬಹಳ ಇದೆ. ಈ ಸರ್ಕಾರ ೨೪ ಪ್ರಪೋಸಲ್ ಮೇಲೆ ಏತಕ್ಕೆ ಮೌನವಾಗಿದೆ ಎಂದು ನಾವು ಕೇಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳೋಣವೆಂದರೆ ಅವರು ಇಲ್ಲಿ ಇಲ್ಲ. ನೀವಾದರೂ ಹೇಳಿ, ಈ ಮಾತನ್ನು ತಿರುಗಿ ರಿಪೀಟ್ ಮಾಡಿದ್ದಾರೆ. ಹೋದ ವರ್ಷ ಏನು ಹೇಳಿದ್ದಾರೆ ಎಂದರೆ Commencement of Center for Higher Learning for Kannada at Hampi, Establishment of Primary Health Centres, Expansion activities of Karnataka Milk Federation in Northern Karnataka, Establishment of Training Centre in Social Forestry, Openinig of Sahyadhri University Starting of 100 Hostels for SCs and STs for PUC Students...... ಅಷ್ಟೇ ಅಲ್ಲ ಹಾಗೆಯೇ ನಾಲ್ಕು ಬಾಕಿ ಬಜೆಟ್ ಸ್ಪೀಚನ್ನು ಕಂಪೇರ್ ಮಾಡಿದರೆ ಇವರು ಏನೂ ಮಾಡಿಲ್ಲ ಎನ್ನುವುದು ಗೊತ್ತಾಗುತ್ತದೆ. ಭರವಸೆ ನಂತರ ಭರವಸೆ ಕೊಡುವುದು ಮಾಮೂಲು ಆಗಿದೆ. ಹೀಗೇ ಇವರು ಭರವಸೆಗಳ ಸರಮಾಲೆಯನ್ನು ಕೊಡುತ್ತಿದ್ದಾರೆ. ಒಂದೊಂದು ಬಜೆಟ್ ಸ್ಪೀಚ್‌ನಲ್ಲಿ ಹೇಳಿರುವ ಭರವಸೆಗಳನ್ನು ಈ ಸರ್ಕಾರ ಗಾಳಿಗೆ ತೂರಿದೆ. ತಮ್ಮ ತಪ್ಪಿಗೆ ಬೇರೆಯವರನ್ನು ಬ್ಲೇಮ್ ಮಾಡಿಕೊಂಡು ಕಾಲ ಕಳೆಯುವುದನ್ನು ಬಿಟ್ಟು ಸ್ವಲ್ಪ ಅರಿತು ಕೆಲಸ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಡಿಸ್ಕ್ರಿಮಿನೇಟರಿ ಗ್ರ್ಯಾಂಟ್‌ಗಳ ವಿಚಾರದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಸೋರ್ ಆಗಿದ್ದಾರೆ. ಅವರು, ಸೆಂಟ್ರಲ್‌ನವರು ನಮಗೆ ಬಹಳ ಮೋಸ ಮಾಡಿದ್ದಾರೆ, ಅನ್ಯಾಯ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಸರ್ಕಾರ ಏನೂ ಡಿಸ್ಕ್ರಿಮಿ-ನೇಟ್ ಮಾಡಿರುವುದು ಕಾಣುತ್ತಾ ಇಲ್ಲ. ಅನೆಕ್ಸ್ ೪, ಪೇಜ್ ೪೫ರಲ್ಲಿ ನೋಡಿ. ನಮ್ಮ ಸ್ಟೇಟ್ 'ಬಿ' ಗ್ರೂಪಿಗೆ ಸೇರಿದೆ. ಅವರು ಪರ್ ಕ್ಯಾಪಿಟಾ ಅಸಿಸ್ಟೆಂಟ್ಸ್ ಕೊಟ್ಟಿರುವುದು ೫೨೩ ಆಗುತ್ತದೆ. ಆದರೆ ಅದನ್ನು ನಮ್ಮ ಕರ್ನಾಟಕಕ್ಕೆ ಕೊಟ್ಟಿರುವುದು ೫೧೯. ಇದರಲ್ಲಿ ಏನು ಡಿಸ್ಕ್ರಿಮಿನೇಟ್ ಆಗುತ್ತದೆ, ಏಕೆ ಆಗುತ್ತದೆ ? ನಿಮ್ಮ ಅಂಕಿ ಅಂಶಗಳನ್ನು ನೋಡಿದರೂ ಕೂಡ ಡಿಸ್ಕ್ರಿಮಿನೇಟ್ ಮಾಡಿಲ್ಲ ಎನ್ನುವುದು ಗೊತ್ತಾಗುತ್ತದೆ. ನಮ್ಮ ತಲೆ ಮೇಲೆ ಹೊಡೆದು ಬಿಟ್ಟರು ಹಾಗೆ, ಹೀಗೆ ಎಂದು ಹೇಳುತ್ತಿದ್ದಾರೆ. 'ಬಿ' ಗ್ರೂಪಿಗೆ ೫೨೩ ಇದೆ, ೫೧೯ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಕತ್ತಿ ತೆಗೆದುಕೊಂಡು ಹೊಡೆಯುತ್ತಾರೆ ಎಂಬ ರೀತಿಯಲ್ಲಿ ಅವರು ಮಾತನಾಡುತ್ತಾ, ಹಾಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಬಹಳ ಮಿಸ್‌ಲೀಡಿಂಗ್ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಇಷ್ಟು ದೊಡ್ಡ ದೇಶದ ಸಮಸ್ಯೆ, ಈ ಡೆವಲಪ್‌ಮೆಂಟ್ ನೀಡ್ಸ್ ಬಗ್ಗೆ ಚೆನ್ನಾಗಿ ತಿಳಿದುಕೊಂಡವರು ಈ ರೀತಿ ಮಾತನಾಡುತ್ತಿದ್ದಾರೆ. ಡಿಸ್ಕ್ರಿಮಿನೇಟರಿ ಗ್ರ್ಯಾಂಟ್ ಒಂದೊಂದು ಸ್ಟೇಟ್‌ಗೂ ವ್ಯತ್ಯಾಸ ಇರುತ್ತದೆ. ನಿಮ್ಮ ಸ್ಟೇಟ್‌ನಲ್ಲಿ ಈ ರೀತಿಯ ವ್ಯತ್ಯಾಸ ಇಲ್ಲವೇ ? ಆದರೆ ಈ ಡಿಸ್ಕ್ರಿಮಿನೇಟರಿ ಗ್ರ್ಯಾಂಟ್‌ಗಳನ್ನು ಕೊಡಬೇಕಾದದ್ದು ಅನಿವಾರ್ಯ ಆಗಿದೆ. ನಿಮ್ಮ ಸ್ಟೇಟ್‌ನಲ್ಲೂ ಕೂಡ ಒಂದು ಡಿಸ್ಟ್ರಿಕ್ಟ್‌ಗೂ ಮತ್ತೊಂದು ಡಿಸ್ಟ್ರಿಕ್ಟ್‌ಗೂ ವ್ಯತ್ಯಾಸ ಇಲ್ಲವೇ ? ಕೊಡುವಾಗ ಹೆಚ್ಚು ಕಡಿಮೆ ಇರಬಹುದು. ಏಕೆಂದರೆ ಒಂದು ಕಡೆ ಕ್ಷಾಮ ಬರಬಹುದು, ಒಂದು ಕಡೆ ಪ್ರವಾಹ ಇರಬಹುದು. ಈ ಸರ್ಕಾರ ತಮ್ಮ ಕೈಯಲ್ಲಿ ಆಗದೇ ಇರುವ ಕೆಲಸಕ್ಕೆ ಇನ್ನೊಬ್ಬರನ್ನು ಅವಹೇಳನ ಮಾಡುವುದನ್ನು ಬಿಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹಗಲೂ-ರಾತ್ರಿ ಕೇಂದ್ರ ಸರ್ಕಾರದ ನಿಂದನೆ ಮಾಡುತ್ತಿದ್ದಾರೆ. ಅವರು ಉಪದೇಶ ಮಾಡುವ ಹವ್ಯಾಸವನ್ನು ಬಿಟ್ಟು ಹೌಸ್ ಅನ್ನು

ಆರ್ಡರ್‌ನಲ್ಲಿ ಇಟ್ಟುಕೊಂಡು ಕೆಲಸ ಮಾಡಿಕೊಂಡು ಹೋಗುವುದು ಬಹಳ ಒಳ್ಳೆಯದು ಇದು ನನ್ನ ಬಹಳ ಸಮ್ಮತಿಯ ಸಲಹೆಯಾಗಿದೆ.

ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಜನತೆಗೆ ಈ ಸ್ಟೇಟ್‌ನಲ್ಲಿ ಅಡ್ಮಿನಿಸ್ಟ್ರೇಷನ್ ಇದೆಯೆ ಅಥವಾ ಇಲ್ಲವೇ ಎಂಬ ಅನುಮಾನ ಬಂದಿದೆ. ಇದು ಎಲ್ಲಿ ಓಡಿ ಹೋಗಿದೆ ಅಥವಾ ಬಚ್ಚಿಟ್ಟುಕೊಂಡಿದೆ ಎಂಬ ಸಂಶಯ ಬಂದಿದೆ. ಈಗ ನಮ್ಮ ಮಾನ್ಯ ಸಚಿವರಾದ ಶ್ರೀ ಚಾಲಪ್ಪನವರು ಇಲ್ಲ. ಪೇಪರ್‌ನಲ್ಲಿ ಬಂದ ವಿಚಾರವನ್ನು ಹೇಳುತ್ತಿದ್ದೇನೆ. ಅವರು ನಗರದ ವಿಶ್ವೇಶ್ವರಯ್ಯ ಸೆಂಟರ್‌ನ ಒಂದು ಆಫೀಸಿಗೆ ಇನ್ಸ್‌ಪೆಕ್ಷನ್‌ಗಾಗಿ ಹೋದರು. ಕಚೇರಿ ಪ್ರಾರಂಭ ಆಗಿ ೧೦ ನಿಮಿಷ ಕಳೆದಿದ್ದರೂ ಒಬ್ಬ ಆಫೀಸರ್ ಸಹ ಬಂದಿರಲಿಲ್ಲ. ಒಂದೂವರೆ ಆಫೀಸ್ ಹವರ್‌ನಲ್ಲಿ ವೇಟ್ ಮಾಡಿದ ಮೇಲೂ ಒಬ್ಬರೂ ಬರಲಿಲ್ಲ. ಇದಾದ ಮೇಲೆ ಯಾರಿಗಾದರೂ ಪನಿಷ್‌ಮೆಂಟ್ ಆಯಿತೇ ? ಪೇಪರ್‌ನಲ್ಲಿ ಬಂದ ಈ ವಿಷಯದ ಬಗ್ಗೆ ಏನಾದರೂ ವಿಚಾರ ಮಾಡಿದ್ದೀರಾ ? ಅವರುಗಳ ಬಗ್ಗೆ ನಿಮಗೆ ಬಹಳ ಕನಿಕರ ಇದೆ. ಏಕೆಂದರೆ ಅವರು ಎಲ್ಲಾ ರೀತಿಯಿಂದ ನಿಮಗೆ ಸಹಾಯ ಮಾಡುತ್ತಾರೆ. ಇದು ಒಂದೇ ಕೇಸ್ ಅಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಎಲ್ಲಿ ಹೋಗುತ್ತಾರೆ ? ಹಾಗೆಯೇ ಸ್ಕೂಲ್‌ಗಳಲ್ಲಿ ಟೀಚರ್ಸ್‌ಗಳು ಎಲ್ಲಿ ಹೋಗುತ್ತಾರೆ ? ವಿಲೇಜ್ ಅಕೌಂಟ್‌ಟೆಂಟ್‌ಗಳು ಹಳ್ಳಿಗಳಲ್ಲಿ ಎಲ್ಲಿಗೆ ಹೋಗುತ್ತಾರೆ ? ನೀವು ಯಾವ ಹಳ್ಳಿಗೆ ಹೋಗಿ ನೋಡಿದರೂ ಇದು ಗೊತ್ತಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಹೋಗಿ ನೋಡಿ. ವಾರ–ವಾರ ಸ್ಕೂಲ್‌ಗಳಿಗೆ ಬೀಗ ಹಾಕಿಕೊಂಡು ಹೋಗಿರುವುದನ್ನು ನೋಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕಿಯವರು ಮಾತನಾಡುವಾಗ ನಾವು ಬಹಳ ಗಂಭೀರವಾಗಿ ಅವರ ಭಾಷಣವನ್ನು ಕೇಳುತ್ತಿರುತ್ತೇವೆ. ಅವರು ಮಾತನಾಡುತ್ತಿರುವ ಈ ಹೊತ್ತಿನಲ್ಲಿ ಮಾನ್ಯ ರಾಚಯ್ಯನವರನ್ನು ಹಾಗೂ ಇತರೆ ಮಂತ್ರಿಗಳನ್ನು ಬಿಟ್ಟರೆ ಉಳಿದ ಮಂತ್ರಿಗಳು ಎಲ್ಲಿ ಹೋಗಿದ್ದಾರೆ ? ಮಾನ್ಯ ಮುಖ್ಯಮಂತ್ರಿಗಳು ಬೇರೆ ರಾಷ್ಟ್ರದ ಅತಿಥಿಗಳು ಬಂದಿರುವುದರಿಂದ ಇಲ್ಲಿ ಇಲ್ಲದೇ ಇರಬಹುದು. ಆದರೆ ಉಳಿದ ಮಂತ್ರಿಗಳು ಎಲ್ಲಿ ಹೋದರು ? ಅವರು ಇಲ್ಲಿ ಇರಬೇಕಾಗಿತ್ತು. ಎಲ್ಲಾ ಮಂತ್ರಿಗಳು ಇಲ್ಲಿ ಹಾಜರಿದ್ದು ನಮ್ಮ ಪಕ್ಷದ ಸಭಾಧ್ಯಕ್ಷಿಣಿ ಅವರು ಏನೇನು ಮಾತನಾಡುತ್ತಾರೆ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ. ಫೈನಾನ್ಸ್ ಕಮೀಷನ್‌ರವರೂ ಇಲ್ಲಿ ಇಲ್ಲ. ಆದ್ದರಿಂದ ತಾವು ತಮ್ಮ ಅಧಿಕಾರ ಉಪಯೋಗ ಮಾಡಿ ಅವರನ್ನೆಲ್ಲಾ ಕರೆಯಿಸುವುದಕ್ಕೆ ಆಜ್ಞೆ ಮಾಡಬೇಕು. ಅವರು ಯಾರೂ ಇಲ್ಲದಿದ್ದರೆ ನಾವು ಇಲ್ಲಿ ಭಾಷಣ ಮಾಡುವುದು ಹೇಗೆ ? ಶ್ರೀಮತಿ ನಾಗರತ್ನಮ್ಮ ಅವರು ಭಾಷಣ ಮಾಡುವುದನ್ನು ಬಿಟ್ಟು ಅವರ ಸ್ಟೆನೋಗೆ ಹೇಳಿ ಟೈಪ್ ಮಾಡಿಸಿದ್ದರೆ ಪುಸ್ತಕದಲ್ಲಿ ಪ್ರಿಂಟ್ ಆಗುತ್ತಿತ್ತು. ಆಗ ಅದನ್ನು ನಾವು ಓದ ಬಹುದಾಗಿತ್ತು. ನಾವೆಲ್ಲಾ ಗಂಭೀರವಾಗಿ ಇಲ್ಲಿ ಮಾತನಾಡಿದ್ದರೆ ಪತ್ರಿಕೆಗಳಲ್ಲಿ ಬರುತ್ತಿದ್ದುದು ಅಷ್ಟೇ ಸಾಕೆ ? ವಿರೋಧಪಕ್ಷದ ನಾಯಕಿಯವರು ಮಾತನಾಡುತ್ತಿರುವಾಗ ಸಚಿವರುಗಳು ಹಾಗೂ ಇತರೆ ಅಧಿಕಾರಿಗಳು ಇಲ್ಲಿ ಇಲ್ಲದೇ ಇರುವುದು ಬಹಳ ವಿಷಾದದ ಸಂಗತಿ ಆಗಿದೆ. ಈ ರೀತಿಯ ಘಟನೆ ಯಾವಾಗಲೂ ಯಾವ ರಾಜ್ಯದಲ್ಲಿ ಆಗಿರಲಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಹೊರ ದೇಶದ ಅತಿಥಿಗಳು ಬಂದಿರುವುದರಿಂದ ಅವರ ಜೊತೆಯಲ್ಲಿ ಇದ್ದಾರೆ. ಹಾಗೆಯೇ ಬೇರೆ ಬೇರೆ ಮಂತ್ರಿಗಳು ಕೂಡ ಕೌನ್ಸಿಲ್‌ನಲ್ಲಿ ಕೆಲವರು ಇದ್ದಾರೆ. ಶ್ರೀ ನಜೀರ್‌ಸಾಬ್‌ರವರು ಹಾಗೂ ಇನ್ನಿತರರು ಮಂತ್ರಿಗಳು ಪ್ರಶ್ನೋತ್ತರ ಕಾಲವಾದ್ದರಿಂದ ಅಲ್ಲಿ ಇದ್ದಾರೆ. ಇದರಿಂದ ಈ ಸದನಕ್ಕೆ ಅಗೌರವ ತೋರಿಸುವಂತಹ ಕೆಲಸವನ್ನು ಮಾಡಿದಂತೆ ಆಗುವುದಿಲ್ಲ. ಯಾರೂ ಕೂಡ ಮಾಡಿಲ್ಲ.

ಶ್ರೀ ಧರ್ಮಸಿಂಗ್.—ಫೈನಾನ್ಸ್ ಕಮೀಷನ್‌ರವರು, ಫೈನಾನ್ಸ್ ಸೆಕ್ರೆಟರಿಯವರು ಅವರು ಇಲ್ಲಿ ಇರಬೇಕಾಗಿತ್ತು. ಎಲ್ಲಿ ಹೋದರು ? ಅವರು ಏಕೆ ಇಲ್ಲಿಗೆ ಬಂದಿಲ್ಲ ?

ಒಬ್ಬ ಸದಸ್ಯರು.—ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬ ರೀತಿ ಇದೆ ಇವರ ವರ್ತನೆ.

ಶ್ರೀ ಕೆ. ಹೆಚ್. ಪಾಟೀಲ್.—ಶ್ರೀಮತಿ ನಾಗರತ್ನಮ್ಮ ಅವರು ಬಹಳ ಯೋಗ್ಯವಾದ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಾರೆ ಎಂದೆಲ್ಲಾ ಹೇಳಿದ್ದೀರಿ. ಆದರೆ ಅವರು ಭಾಷಣ ಮಾಡು

ವಾಗ ಇವರು ಯಾರೂ ಇಲ್ಲಿ ಇಲ್ಲ. ಸುಲಲಿತವಾಗಿ ಮಾತನಾಡತಕ್ಕವರು, ಗಂಭೀರವಾದ ವಾಣಿಯಿಂದ ಮಾತನಾಡುವ ಸೌಜನ್ಯಯುತರು. ಈ ರೀತಿಯಾಗಿ ಹೇಳಿದ್ದೀರಿ. ಈ ರೀತಿ ಹೇಳುವಂಥ ಜನ ಸೌಜನ್ಯಪರವಾದ ಈ ಮಾತುಗಳನ್ನು ಕೇಳುವ ಸೌಜನ್ಯ ಏತಕ್ಕೆ ಇಲ್ಲ ? ದಯಮಾಡಿ ನೀವೇ ವಿಚಾರ ಮಾಡಿ. ಮಾನ್ಯ ರಾಚಯ್ಯನವರೇ ನೀವು ಅಲ್ಲಿರಬಹುದು, ನಾಳೆ ಇಲ್ಲಿ ಬರಬಹುದು. ನೀವೇ ಇದರ ಬಗ್ಗೆ ವಿಚಾರ ಮಾಡಿ.

ಶ್ರೀ ಬಿ. ಎಂ. ಇದಿನಬ್ಬ —ಸಚಿವರು ಪಾವಗಡದ ತನಿಖೆಯನ್ನು ಮಾಡಲಿಕ್ಕೆ ಹೋಗಿದ್ದಾರೋ?

ಶ್ರೀ ಬಿ. ರಾಚಯ್ಯ.—ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೆ ಅಗೌರವ ಸೂಚಿಸಬೇಕೆಂಬ ಭಾವನೆ ನಮ್ಮಲ್ಲಿ ಯಾರಲ್ಲೂ ಇಲ್ಲ. ಕಾಲಿಂಗ್ ಅಟೆನ್‌ಷನ್ ಇದ್ದರೂ ಕೂಡಾ ಮಾನ್ಯ ಮುಖ್ಯ ಮಂತ್ರಿಗಳು ಇರಲಿಲ್ಲ, ನಾನೇ ಕುಳಿತುಕೊಂಡು ಗಮನಿಸುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಚೀಫ್ ಸೆಕ್ರೆಟರಿ ಎಲ್ಲಿ ಇದ್ದಾರೆ. ಬೇರೆಯವರನ್ನಾದರೂ ಕರೆಯಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ವಿರೋಧ ಪಕ್ಷದ ನಾಯಕರಾಗಿ ಅನೇಕ ಸಲ ದೇವೇಗೌಡರು ಇದ್ದರು, ಲಕ್ಷ್ಮೀಸಾಗರ್‌ರವರು ಇದ್ದರು, ಬೊಮ್ಮಾಯಿಯವರು ಸಹಾ ಇದ್ದರು. ನಾವು ಮಂತ್ರಿಗಳಾಗಿ ಸಂಬಂಧಪಟ್ಟ ವಿಷಯಗಳ ಬಗ್ಗೆ ಇವರು ಮಾತನಾಡುತ್ತಾರೆ ಎಂದು ಎಲ್ಲರೂ ಅಟೆನ್‌ಟೀವ್ ಆಗಿ ತಮ್ಮ ತಮ್ಮ ವಿಷಯದ ಬಗ್ಗೆ ಏನಾದರೂ ಮಾತನಾಡಬಹುದು ಮತ್ತು ಸಂಬಂಧಪಟ್ಟ ವಿಷಯಗಳನ್ನು ಎತ್ತಿ ಏನಾದರೂ ಲೋಪ ದೋಷಗಳು ಹೇಳಬಹುದು ಎಂದು ನಾವು ಕುಳಿತಿರುತ್ತಿದ್ದೆವು. ಇವತ್ತು ತಾವು ಏನೋ ಡ್ಯೂಟಿ ಬೌಂಡ್ ಎಂದು ಕೂಡಿಸಿದ್ದಾರೆ. ಇವತ್ತು ಒಬ್ಬ ಮಂತ್ರಿಗಳೂ ಸಹಾ ಜವಾಬ್ದಾರಿಯಿಂದ ಕೇಳತಕ್ಕಂಥವರು, ಹೇಳತಕ್ಕಂಥವರು ಇಲ್ಲ ಎಂದರೆ ಏನು ? ಈ ಸದನದಲ್ಲಿ ಏನೋ ಹೇಳಿಕೊಳ್ಳುತ್ತಾರೆ. ಹೇಳಿಕೊಳ್ಳಲಿ. ಉತ್ತರವನ್ನು ಕೊಡೋಣ. ಒಟ್ಟಿನಲ್ಲಿ ಉತ್ತರ ಕೊಟ್ಟರೆ ಆಯಿತು. ಹೀಗೆ ಆದರೆ ಈ ಸದನದಲ್ಲಿ ನಾವು ಏತಕ್ಕೆ ಇರಬೇಕು ?

ಶ್ರೀ ಬಿ. ರಾಚಯ್ಯ.—ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಇಲ್ಲಿಯೇ ಇದ್ದಾರೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಇಲ್ಲಿಯೇ ಇದ್ದಾರೆ. ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್‌ನವರು ಇಲ್ಲಿಯೇ ಇದ್ದಾರೆ. ಅವರು ಎಲ್ಲವನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ನಮ್ಮ ಪಕ್ಷದ ಪರವಾಗಿ ನಮ್ಮ ನಾಯಕರು ಮಾತನಾಡುವಾಗ...

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಯವರು ಬಂದರು. ಬಹಳ ಸಂತೋಷ. ಫೈನಾನ್ಸ್ ಸೆಕ್ರೆಟರಿಯವರು ನಿಮಗೆ ಗೌರವ ಕೊಟ್ಟಿಲ್ಲ. ಹೀಗೆ ಆದರೆ ಹೇಗೆ ? ಫೈನಾನ್ಸ್ ಕಮಿಷನರ್‌ರವರೇ ಬರಬೇಕು. ಸಲಹೆ ಕೊಡುತ್ತೇವೆ, ಅದನ್ನು ಕೇಳುವ ಸೌಜನ್ಯ ಫೈನಾನ್ಸ್ ಸೆಕ್ರೆಟರಿಯವರಿಗೆ ಇರಬೇಕು. ಮಾನ್ಯ ನಿಜಲಿಂಗಪ್ಪನವರು ಒಂದು ಮಾತನ್ನು ಹೇಳಿದ್ದರು. ಅದು ನಿಮಗೆ ಗೊತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಡೆಪ್ಯುಟಿ ಕಮಿಷನರ್ ಧಾರವಾಡ ಜಿಲ್ಲೆಯಲ್ಲಿದ್ದಾಗ "here is a wooden headed fellow" ಎಂದು ಹೇಳಿದ್ದಾರೆ. It has been proved now. ದಯವಿಟ್ಟು ಕರೆಸಿರಿ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಸ್ನೇಹಿತರು ಮಾತನಾಡಿದರು. ನಮ್ಮ ಪಕ್ಷದ ಪರವಾಗಿ ನಮ್ಮ ನಾಯಕರು ಮಾತನಾಡುತ್ತಾರೆ. ಮಾತನಾಡುವಾಗ ನೀವು ನಾವು ಎಷ್ಟು ಗಂಭೀರವಾಗಿ ಶ್ರದ್ಧೆಯಿಂದ ಕೇಳಿದ್ದೇವೆ, ಆ ರೀತಿಯಲ್ಲಿ ತಾವು ಕೇಳಬಾರದೆ. ದಯಮಾಡಿ ಹೇಳಿ. ನೀವು ಸರ್ಕಾರ ನಡೆಸತಕ್ಕಂಥವರು. ನಾವು ಕೂಡಾ ನಡೆಸಿದ್ದೇವೆ. ಸರ್ಕಾರ ನಡೆಸತಕ್ಕಂಥವರು, ಮಂತ್ರಿಗಳು ಸಭೆಯಲ್ಲಿ ಇರಬೇಕು. ಜನರಲ್ ಡಿಸ್ಕಷನ್ ಬಂದಾಗ ಎಲ್ಲಾ ಇಲಾಖೆಯ ಮೇಲೆ ಮಾತನಾಡತಕ್ಕಂಥವರು ಇದ್ದಾರೆ. ಅವರವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಏನು ಹೇಳುತ್ತಾರೋ, ಏನು ಬಿಡುತ್ತಾರೋ ಎನ್ನುವಂಥ ಮಾತನ್ನು ನೀವೇ ಕೇಳದೆ ಹೋದರೆ ನಮಗೆ ಗೌರವ ಕೊಟ್ಟ ಹಾಗೆ

ಆಗುತ್ತದೆಯೋ ? ಇವತ್ತು ಮುಖ್ಯಮಂತ್ರಿಗಳು ಇದ್ದಾರೆ, ನಾವು ಅವರು ಡೆಪ್ಯುಟಿ ಮಿನಿಸ್ಟರ್ ಆಗಿ ಸೇರಿದ್ದೆವು ನಾವು ಇದ್ದೇವೆ...

ಒಬ್ಬ ಮಾನ್ಯ ಸದಸ್ಯರು.—ಅವರಿಗೆ ಪ್ರಮೋಷನ್ ಸಿಕ್ಕಿತು, ನಿಮಗೆ ಇನ್ನೂ ಪ್ರಮೋಷನ್ ಸಿಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ಚೀಫ್ ಸೆಕ್ರೆಟರಿಗಳಿಗೆ ಏನು ಕೆಲಸ ಅಲ್ಲಿ. ಜನಗಳ ಪ್ರತಿನಿಧಿಗಳು, ಜನಗಳೇ ಮುಖ್ಯ ಎಂದು ಭಾಷಣ ಮಾಡುವುದು. ಇವತ್ತು ಈ ಅಧಿಕಾರಿಗಳೂ ಇಲ್ಲಿ ಇಲ್ಲ. ಮಂತ್ರಿಗಳೂ ಇಲ್ಲ. ದಯಮಾಡಿ ನೋಡಿ. ನಾವು ಹೇಳುತ್ತಿರುವುದು ತಮ್ಮ ಮನಸ್ಸಿಗೆ ಬಂದಿರ ಬಹುದು. ದಯಮಾಡಿ ಆ ಕೆಲಸ ಮಾಡಿ ಸ್ವಾಮಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ತಾವು ಬಂದಿದ್ದೀರಿ. ನಾನು ನಿಮಗೆ ಮೊದಲು ಹೇಳುತ್ತಾ ಇದ್ದೆ. ಏನೆಂದರೆ ನಿಮ್ಮ ಸರ್ಕಾರದಲ್ಲಿ ಏನಾದರು ಡಿಸಿಪ್ಲಿನ್ ಇದೆಯೋ ಎಂದು. ನಿಮ್ಮ ಸರ್ಕಾರದಲ್ಲಿ ಶಿಸ್ತು ಎನ್ನುವುದನ್ನು ಏನಾದರೂ ಉಳಿಸಿಕೊಂಡಿದ್ದೀರಾ ? ಏತಕ್ಕೆಂದರೆ ಅಡ್ಮಿನಿ- ಸ್ಟ್ರೇಷನ್ ವಿಚಾರದಲ್ಲಿ ಪತ್ರಿಕೆಯಲ್ಲೂ ಸಹ ಬಂದಿದೆ. ಮಾನ್ಯ ಜಾಲಪ್ಪನವರು ಒಂದು ಕಡೆ ಇನ್‌ಸ್ಪೆಕ್ಷನ್‌ಗೆ ಹೋದಾಗ ಅಲ್ಲಿ ಆಫೀಸರುಗಳು ಯಾರೂ ಇರಲೇ ಇಲ್ಲ, ಅವರು ಅಲ್ಲಿ $1-1\frac{1}{2}$ ಗಂಟೆ ಕಾಲ ಕಾದು ಕುಳಿತಿದ್ದರು. ಈ ತರಹ ಆದರೆ ಏನು ? ಅನಂತರ ಅವರಿಗೆ ಯಾವ ತರಹ ಪನಿಷಮೆಂಟ್ ಕೊಟ್ಟರು ಅನ್ನುವುದು ಮಾತ್ರ ಯಾವ ಪತ್ರಿಕೆಯಲ್ಲೂ ಬರಲಿಲ್ಲ. ನಾನು ಯಾವ ಪೇಪರ್‌ನಲ್ಲೂ ಇದರ ಬಗ್ಗೆ ಮುಂದೆ ಏನಾಯಿತು ಎನ್ನುವುದನ್ನು ನೋಡಲಿಲ್ಲ. ನಾನು ಹೇಳುವುದು ಇದು ಒಂದೇ ಕೇಸ್ ಅಲ್ಲ, ಆಸ್ಪತ್ರೆಗಳಿಗೆ ಹೋಗಿ ನೋಡಿದರೆ ಅಲ್ಲಿ ಡಾಕ್ಟರೇ ಸಿಕ್ಕುವುದಿಲ್ಲ, ಸ್ಕೂಲುಗಳಿಗೆ ಹೋದರೆ ಅಲ್ಲಿ ಉಪಾಧ್ಯಾಯರೇ ಇರುವುದಿಲ್ಲ. ವಿಲೇಜ್‌ಗಳಿಗೆ ಹೋದರೆ ಅಲ್ಲಿ ವಿಲೇಜ್ ಅಕೌಂಟೆಂಟ್‌ರೇ ಪತ್ತೆ ಇರುವುದಿಲ್ಲ. ಹೀಗಾಯಿತು ಎಂದರೆ ನಿಮ್ಮ ಶಿಸ್ತನ್ನು ಎಷ್ಟರಮಟ್ಟಿಗೆ ಕಾಪಾಡಿಕೊಂಡು ಬರುತ್ತಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ನಾನು ಕೇಳುತ್ತೇನೆ ಶಿಸ್ತು ಎನ್ನುವುದನ್ನು ಡಿಕ್ಷನರಿಯಿಂದ ಏನಾದರೂ ತೆಗೆದು ಹಾಕಿದ್ದೀರಾ ಶಿಸ್ತು ಎನ್ನುವುದು ಬೇಡವೇ ? ಅಥವಾ ಇದರ ಬಗ್ಗೆ ನೀವು ಏನು ಮಾಡಬೇಕು ಎಂದು ಯೋಚನೆ ಮಾಡಿದ್ದೀರಾ ?

ಇನ್ನು ಟ್ರಾನ್ಸ್‌ಫರ್ಸ್ ಬಗ್ಗೆ ಹೇಳುವುದಾದರೆ ಟ್ರಾನ್ಸ್‌ಫರ್ ಮಾಡುವುದು ಮತ್ತೆ ಅದನ್ನು ಕ್ಯಾನ್ಸಲ್ ಮಾಡುವುದು ಇದಕ್ಕೆ ಲೆಕ್ಕ ಮಿತಿಯೇ ಇಲ್ಲ. ನಾನು ಕೇಳುತ್ತೇನೆ ಜಿಲ್ಲಾ ಪರಿಷತ್ ಸೆಕ್ರೆಟರಿಗಳನ್ನು ಎಷ್ಟು ಸಾರಿ ಛೇಂಜ್ ಮಾಡಿದಿರಿ ? ಎಷ್ಟು ಸಾರಿ ಬದಲಾಯಿಸಿದಿರಿ. ಅವರನ್ನು ಅಲ್ಲಿಂದ ಇಲ್ಲಿಗೆ ಬದಲಾಯಿಸುವುದು ಮತ್ತೆ ಇಲ್ಲಿಂದ ಅಲ್ಲಿಗೆ ಬದಲಾಯಿಸುವುದು ಹೀಗೆ ಮಾಡಿದ್ದೀರಿ ? ನಾನು ಕೇಳುತ್ತೇನೆ ಇದನ್ನು ಮಾಡುವಾಗ ಅವರಿಗೆ ಸೆನ್ಸ್ ಆಫ್ ಪ್ರಮೋಷನ್ ಇರುವುದಿಲ್ಲವೇ ? ಅವರಿಗೆ ಅಡ್ಮಿನಿಸ್ಟ್ರೇಷನ್ ಅನ್ನು ಸರಿಯಾಗಿ ಮಾಡಬೇಕು ಎನ್ನುವುದು ಅರ್ಥವಾಗುವುದಿಲ್ಲವೇ ? ೧೯೮೩ ರಿಂದಲೂ ಇದು ಒಂದು ರೀತಿಯ ಗೋಳಾಗಿದೆ.

ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಜೀರೋ ಬಡ್ಜೆಟ್ ಬಗ್ಗೆ ಹೇಳಿದ್ದಾರೆ. ಅದು ಪ್ಯಾರಾ ೨೭ರಲ್ಲಿ ಇದೆ. ಇದರ ಬಗ್ಗೆ ಅವರು ಬಹಳ ಶ್ರಮಪಟ್ಟಿದ್ದೇವೆ ಎಂದು ಹೇಳಿದ್ದಾರೆ. ಅವರು ಯಾವ ರೀತಿ ಶ್ರಮಪಟ್ಟಿದ್ದಾರೋ ಏನೋ ಎನ್ನುವುದನ್ನು ಇದರಲ್ಲಿರುವ ಅನೆಗ್ಜರನ್ನು ನಾನು ನೋಡಿದಾಗ ನನಗೆ ಎಲ್ಲೂ ಗೊತ್ತಾಗಲಿಲ್ಲ. ಇವರು ಬರುವ ವರ್ಷಕ್ಕೆ ನಾವು ೩೦ ಕೋಟಿ ರೂಪಾಯಿ ಗಳಷ್ಟು ಮಿತವ್ಯಯವನ್ನು ಸಾಧಿಸುವ ನಿರೀಕ್ಷೆ ಇದೆಯೆಂದು ಹೇಳಿದ್ದಾರೆ. ಇಷ್ಟನ್ನು ಉಳಿಸುತ್ತೇವೆಂದು ಹೇಳಿದ್ದಾರೆ. ಇದನ್ನು ನೋಡಿದರೆ ಬೆಟ್ಟ ಅಗೆದು ಇಲಿ ತೆಗೆದ ಹಾಗೆ ಆಗಿದೆ ಅಂದರೆ ೧೦೦ ರೂಪಾಯಿಗೆ ೭ ಪೈಸೇ ಉಳಿಸಿದ ಹಾಗೆ ಆಯಿತು. ನಾನು ಹೇಳುತ್ತೇನೆ. ಇದು ಏನೂ ದೊಡ್ಡ ಉಳಿತಾಯವಾದಂತಾಗುವುದಿಲ್ಲ. ಈ ಜೀರೋ ಬಡ್ಜೆಟ್‌ನಲ್ಲಿ ಏನೋ ಉಳಿಸುತ್ತೇವೆಂದು ಹೇಳುವುದು ಅದು ಒಂದು ತಮಾಷೆ ಮಾತು ಎಂದು ನನಗೆ ಕಾಣುತ್ತದೆ.

ಇನ್ನು ಪ್ಯಾರಾ ೩೮ರಲ್ಲಿ ಹಿಂದಿನ ನನ್ನ ಬಡ್ಜೆಟ್ ಭಾಷಣದಲ್ಲಿ ರಾಜ್ಯದ ಗ್ರಾಮೀಣ ಸಾಲದ ಪೂರ್ಣ ಅಗತ್ಯತೆಯನ್ನು ಪೂರೈಸುವುದಕ್ಕಾಗಿ ೧೫ ವರ್ಷಗಳ ಸಮಗ್ರ ಯೋಜನೆಯೊಂದನ್ನು ನಾನು ರೂಪಿಸಿದ್ದೆ ಎಂದು ಹೇಳಿದ್ದಾರೆ. ಅದನ್ನು ಅವರು ಜ್ಞಾಪಿಸಿಕೊಂಡಿದ್ದಾರೆ. ಈ ವರ್ಷದ ಬಡ್ಜೆಟ್ ನಲ್ಲೂ ಹೇಳಿದ್ದಾರೆ. ಅದರ ಪ್ರಕಾರ ಏನು ಆಗಿದೆ ಎಂದು ಕೇಳುತ್ತೇನೆ. ಇದರಲ್ಲಿ ಅನೆಗ್ಜರ್

ಒಂದನ್ನು ನೋಡಿದಾಗ ಇದನ್ನು ಇನ್‌ಷಿಯೇಟ್ ಮಾಡುವುದಕ್ಕೆ ಒಂದು ವರ್ಷವಾಯಿತು. ಇನ್ನು ಇದರ ಸರ್ವೆ ಅಸೆಸ್‌ಮೆಂಟ್ ಮತ್ತು ಕ್ರೆಡಿಟ್ ನೀಡ್ಸ್ ಈ ಬಗ್ಗೆ ಏನು ಮಾಡಿದರೋ ಗೊತ್ತಾಗಲಿಲ್ಲ. ಇದಕ್ಕೆ ಇನ್ನು ೫ ವರ್ಷ ಬೇಕಾಗುತ್ತದೆಂದು ಹೇಳಿದ್ದಾರೆ. ಇದು ಇನ್ನು ೫ ವರ್ಷಕ್ಕಾದರೂ ಮುಗಿಯುತ್ತದೆ ಎನ್ನುವ ಗ್ಯಾರಂಟಿ ಏನು ? ಇನ್ನು ಇದರ ಬಗ್ಗೆ ಪ್ರೊಸೆಸ್ ಆಗಬೇಕು, ಪ್ಲಾನ್ ಆಗಬೇಕು, ಅದಕ್ಕೆ ಸರಿಯಾಗಿ ದುಡ್ಡನ್ನು ಹೊಂದಿಸಿಕೊಳ್ಳಬೇಕು, ಇದನ್ನೆಲ್ಲಾ ರೂಢಿಸಿಕೊಂಡ ಮೇಲೆ ಇದರ ಕೆಲಸ ಶುರು ಮಾಡಬೇಕು. ಈ ಒಂದು ರೇಟ್ ಪ್ರಕಾರ ತೆಗೆದುಕೊಂಡರೆ ಈ ಕೆಲಸ ಮುಗಿಯ ಬೇಕಾದರೆ ಇನ್ನೂ ೧೫ ವರ್ಷ ಬೇಕಾಗುತ್ತದೆ. ಇದೆಲ್ಲಾ ಸೇರಿ ಸ್ಟೆಬ್‌ಲೈಸ್ ಮಾಡುವುದಕ್ಕೆ ಇನ್ನೂ ೧೫ ವರ್ಷ ಬೇಕಾಗುತ್ತದೆ ಅದುವರೆಗೆ ಇನ್ನು ಏನಾಗುತ್ತದೋ ನೋಡಿಕೊಳ್ಳೋಣ.

ಇನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದು ಬಹಳ ಚೆನ್ನಾಗಿ ನಡೆಯುತ್ತಾ ಇದೆ ಎಂದು ಹೇಳಿದ್ದಾರೆ. ನಾನೂ ಸಹ ಇದರ ಬಗ್ಗೆ ಖುದ್ದಾಗಿ ನೋಡುತ್ತಾ ಇದ್ದೇನೆ. ನಾನೂ ಸಹ ಆ ಭಾಗದವಳು. ಅಲ್ಲಿ ಈ ಕೆಲಸ ಇನ್ನೂ ಶುರುವಾಗಿಲ್ಲ. ೩ ವರ್ಷವಾಯಿತು. ಇನ್ನೂ ಅದರ ಅಚೀವ್‌ಮೆಂಟ್ ಗೊತ್ತಾಗಲಿಲ್ಲ.

ಇನ್ನು ಕ್ರಾಪ್ ಯೀಲ್ಡ್ ರೀಹ್ಯಾಬಿಲಿಟೇಷನ್ ಹೇಳಿದ್ದಾರೆ. ಅದರ ಬಗ್ಗೆ ಏನು ಕೆಲಸ ಮಾಡು ತ್ತಿದ್ದಾರೆ ಎನ್ನುವುದು ನನ್ನ ಕಣ್ಣಿಗೆ ಕಾಣುತ್ತಾ ಇಲ್ಲ. ಇದರಲ್ಲಿ ಒಂದೇ ಒಂದು ಅಚೀವ್‌ಮೆಂಟ್ ಆಗಿದೆ. ಏನು ಎಂದರೆ ತಮ್ಮ ಪಾರ್ಟಿಯವರನ್ನು ತಮಗೆ ಬೇಕಾದವರನ್ನು ರೀಹ್ಯಾಬಿಲಿಟೇಷನ್ ಮಾಡಲು ಅನುಕೂಲವಾಗಿದೆ, ಎಂದು ನನ್ನ ಕಣ್ಣಿಗೆ ಕಾಣುತ್ತಾ ಇದೆ.- ಇದರಲ್ಲಿ ಸದ್ಯಕ್ಕೆ ಏನು ಅಚೀವ್‌ಮೆಂಟ್ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತಾ ಇಲ್ಲ,

೧–೩೦ ಪಿ. ಎಂ.

ಇಷ್ಟೊಂದು ಜಾಸ್ತಿ ಹಣವನ್ನು ಖರ್ಚು ಮಾಡುವುದು ಸರಿಯೇ ? ದುಡ್ಡನ್ನು ಉಳಿಸಬೇಕಾದ ಈ ಕಾಲದಲ್ಲಿ ಇದಕ್ಕಾಗಿ ಒಂದು ದೊಡ್ಡ ಬೋರ್ಡ್ ಬೇಕಾಗಿತ್ತೇ ಎಂದು ನಾನು ತಮ್ಮನ್ನು ಕೇಳು ತ್ತೇನೆ ? ಇವೊತ್ತು ಎಷ್ಟೋ ಜನರಿಗೆ ಸರಿಯಾಗಿ ಸಂಬಳ ಸಾರಿಗೆ ಸಿಗುತ್ತಿಲ್ಲ. ನರ್ಸರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ೭೫೦ ಮಹಿಳಾ ಉಪಾಧ್ಯಾಯರುಗಳಿಗೆ ಕಳೆದ ೧೧ ತಿಂಗಳುಗಳಿಂದ ಸಂಬಳ ಇಲ್ಲ. ವೃದ್ಧಾಪ್ಯ ವೇತನವನ್ನು ಸರಿಯಾಗಿ ಕೊಡುತ್ತಿಲ್ಲ. ಅಂಗವಿಕಲರಿಗೆ ಕೊಡಬೇಕಾದ ಹಣವನ್ನು ಸರಿಯಾಗಿ ಕೊಡುತ್ತಿಲ್ಲ. ಅನೇಕ ಸಂಸ್ಥೆಗಳಿಗೆ ಕೊಡಬೇಕಾದ ಗ್ರಾಂಟನ್ನು ಇನ್ನೂ ಕೊಟ್ಟಿಲ್ಲ. ಕಂಟ್ರಾಕ್ಟರ್‌ಗಳು ಕೆಲಸ ಮಾಡಿ ಒಂದೂವರೆ ವರ್ಷದಿಂದ ಹಣಕ್ಕಾಗಿ ಅಲೆಯುತ್ತಿದ್ದಾರೆ. ಇನ್ನೂ ಅವರಿಗೆ ದುಡ್ಡು ಕೊಟ್ಟಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಬೋರ್ಡಿಗೆ ಒಬ್ಬರು ಚೇರ್‌ಮನ್ ಅವರನ್ನು ನೇಮಕ ಮಾಡುವ ಅಗತ್ಯವಿತ್ತೇ ? ಇದು ಒಂದು ದೊಡ್ಡ ಪ್ರಶ್ನೆ.

ಇನ್ನು ಬಿ.ಡಿ.ಎ. ಬಗ್ಗೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ೧೯೮೩–೮೭ ಈ ನಾಲ್ಕು ವರ್ಷಗಳಲ್ಲಿ ೧೧,೬೮೫ ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದಾರೆ. ೧೯೭೯–೮೩ ಈ ನಾಲ್ಕು ವರ್ಷಗಳಲ್ಲಿ ೩,೧೫೩ ನಿವೇಶನವನ್ನು ಮಾತ್ರ ಹಂಚಲಾಗಿತ್ತು ಎಂದು ಸಹ ಹೇಳಿದ್ದಾರೆ. ಇವರು ಹೆಚ್ಚು ಸೈಟ್‌ಗಳನ್ನು ಕೊಟ್ಟಿದ್ದಾರೆ, ಆದರೆ ಇವರ ಕಾಲದಲ್ಲಿ ಹೊಸ ಲೇಔಟ್‌ಗಳು ಆಗಿಲ್ಲ. ಈ ವಿಚಾರದಲ್ಲಿ ಇವರು ಮೌನದಿಂದ ಇದ್ದಾರೆ. ನೀವು ಹೊಸದಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರಬಹುದು. ಆದರೆ ಅಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಿಕೊಡುವುದಕ್ಕೆ ಮೊದಲು ಸೈಟ್‌ಗಳನ್ನು ಹಂಚುವುದಕ್ಕಾಗುವುದಿಲ್ಲ. ಈ ಹಿಂದಿನ ಸರ್ಕಾರದವರು ಹೊಸ ಲೇಔಟ್‌ಗಳನ್ನು ಮಾಡಿದ್ದರಿಂದ ನೀವು ಇಷ್ಟೊಂದು ಸೈಟ್‌ಗಳನ್ನು ಹಂಚಲು ಸಾಧ್ಯವಾಯಿತು. ಅಡಿಗೆ ಮಾಡಿದ್ದು ಬೇರೆಯವರಾದರೆ, ನೀವು ಅದನ್ನು ಊಟಕ್ಕೆ ಬಡಿಸಿದಿರಿ. ಇಲ್ಲಿ ಅಡಿಗೆ ಮಾಡಿದವರಿಗೆ ಯಾವ ಕ್ರೆಡಿಟ್ ಸಹ ಬೇಡವೇ ? ಈ ಹಿಂದಿನವರು ಮಾಡಿದ್ದ ಲೇಔಟ್‌ಗಳಲ್ಲಿ ನೀವು ಸೈಟ್‌ಗಳನ್ನು ಹಂಚಿ ಇಷ್ಟೊಂದು ಜಾಸ್ತಿ ಸೈಟ್‌ಗಳನ್ನು ಹಂಚಿದ್ದೇವೆ ಎಂದು ಹೇಳಿದರೆ, ಅದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ. ಇದಕ್ಕಾಗಿ ನಿಮಗೆ ಶಹಬಾಷ್‌ಗಿರಿ ಕೊಡಲು ನಾನು ತಯಾರಿಲ್ಲ.

ಇನ್ನು ಕ್ರಿ ಶ. ೨೦೦೦ದ ಹೊತ್ತಿಗೆ 'ಸರ್ವರಿಗೂ ಆರೋಗ್ಯ' ಎನ್ನುವ ಯೋಜನೆಯನ್ನು ಸಾಧಿಸಲು ಹೊರಟ್ಟಿದ್ದೀರಿ: ಅಷ್ಟರವರೆಗೆ ನಾನಂತೂ ಇರುವುದಿಲ್ಲ. ಬೇರೆ ಯಾರು ಯಾರು ಇರುತ್ತಾರೋ ಗೊತ್ತಿಲ್ಲ. ಆದರೆ ಇದನ್ನು ಜಾರಿಗೆ ತರಲು ಸಾಧ್ಯವಾಗುತ್ತದೆಯೋ ? ಏಕೆಂದರೆ, ನೀವು ಹೋದ

ವರ್ಷ ಕೊಟ್ಟ ಭರವಸೆಗಳನ್ನೇ ಇನ್ನೂ ಈಡೇರಿಸಿಲ್ಲ. ೨೦ ಹೆಲ್ತ್ ಯೂನಿಟ್‌ಗಳನ್ನು ಮತ್ತು ೨೦ ಉಪ-ಹೆಲ್ತ್ ಯೂನಿಟ್‌ಗಳನ್ನು ಹೊಸದಾಗಿ ತೆರೆಯಲಾಗುವುದೆಂದು ಹೇಳಿದ್ದಿರಿ. ಅದೇ ಇನ್ನೂ ಕಾರ್ಯಗತವಾಗಿಲ್ಲ. ಆದರೆ ಈಗ 'ಸರ್ವರಿಗೂ ಆರೋಗ್ಯ' ಎಂಬ ಯೋಜನೆಯ ಬಗ್ಗೆ ಇಲ್ಲಿ ಹೇಳಿದ್ದೀರಿ. ಈಗ ನಾನು ಹೆಚ್ಚು ಈ ಬಗ್ಗೆ ಹೇಳುವುದಿಲ್ಲ. ಮುಂದೆ ಆರೋಗ್ಯ ಇಲಾಖೆಯ ಬೇಡಿಕೆಗಳು ಬಂದಾಗ ಮಾತನಾಡುತ್ತೇನೆ.

ಇನ್ನು ವನ ನಿರ್ಮಾಣ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಈ ಕಾರ್ಯಕ್ರಮವನ್ನು ಉತ್ಸಾಹದಿಂದ ಕೈಗೊಂಡಿರುವುದಕ್ಕಾಗಿ ನಮ್ಮ ಶಾಲಾ ಮಕ್ಕಳನ್ನು ನಾನು ಅಭಿನಂದಿಸುತ್ತೇನೆ ಎಂದು ಹೇಳಿದ್ದೀರಿ. ಆದರೆ ಮುಂದೆ ಈ ಒಂದು ಕಾರ್ಯಕ್ರಮದ ಲಾಭವನ್ನು ಪಡೆಯಲು ಸಾಕಷ್ಟು ಜನರು, ಸಂಸ್ಥೆಗಳು ಮುಂದೆ ಬಂದಿಲ್ಲ ಎಂದು ಹೇಳಿದ್ದೀರಿ. ಅಂದರೆ ಈ ಯೋಜನೆಯ ವಿಚಾರ ಜನರಿಗೆ ಸರಿಯಾಗಿ ತಲುಪಿಲ್ಲವೆಂದು ಅರ್ಥ ಆಗುತ್ತದೆ. ಇದೇ ಕಾರಣದಿಂದ ಜನರು ಇದರ ಲಾಭ ಪಡೆಯಲು ಮುಂದೆ ಬಂದಿಲ್ಲ ಈ ಯೋಜನೆ ಏನೋ ಚೆನ್ನಾಗಿದೆ. ಆದರೆ ಜನರಿಗೆ ಇದು ಸರಿಯಾಗಿ ತಲುಪಿಲ್ಲ. ಆದ್ದರಿಂದ ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮುಖ್ಯಮಂತ್ರಿಗಳು ೧೯೮೭-೮೮ನೇ ಸಾಲಿಗೆ ಅನೇಕ ಪ್ರಪೋಸಲ್‌ಗಳನ್ನು ಪ್ರಕಟಿಸಿದ್ದಾರೆ. ಹಿಂದಿನ ವರ್ಷದಲ್ಲಿ ಆದಹಾಗೆ ಈ ವರ್ಷ ಯಾವುದೂ ಲ್ಯಾಪ್ಸ್ ಆಗಬಾರದು ಆಗದ ಹಾಗೆ ಸರ್ಕಾರ ಎಚ್ಚರ ವಹಿಸಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇವೆ. ಇನ್ನು Sale of loose liquor will not be allowed under any circumstances ಎಂದು ಹೇಳಿದಿರಿ. ಇಷ್ಟು ದಿವಸಗಳ ವರೆಗೆ ನಡೆಯುತ್ತಿದೆ, ಕಾನೂನಿಗೆ ವಿರುದ್ಧವಾಗಿ ನಡೆಯುತ್ತಿದೆ. ಈ ಲಿಕ್ಕರ್‌ಶಾಪ್‌ಗಳಿಗೆ ಯಾರ ಕುಮ್ಮಕ್ಕು ಇತ್ತು. ಎಲ್ಲಾ ಶಾಪ್‌ಗಳಲ್ಲಿ ಸಾಮಾನ್ಯವಾಗಿ ಸ್ಕ್ರೀನ್ ಹಾಕಿ ಲೂಸ್ ಲಿಕ್ಕರ್‌ನ್ನು ಮಾರುತ್ತಾ ಇದ್ದಾರೆ. ಈ ಬಗ್ಗೆ ನಾನು ಅನೇಕಸಾರಿ ಈ ಹೌಸ್‌ನಲ್ಲಿ ಹೇಳಿದ್ದೇನೆ. ಇದಕ್ಕೆ ಯಾರ ಕುಮ್ಮಕ್ಕು ಇದೆ ಎಂದರೆ ಪೋಲೀಸರ ಕುಮ್ಮಕ್ಕು ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರ ಕುಮ್ಮಕ್ಕು, ಅಡ್ಮಿನಿಸ್ಟ್ರೇಟರುಗಳ ಕುಮ್ಮಕ್ಕು ಇದೆ. ಇಷ್ಟು ಕುಮ್ಮಕ್ಕು ಇರುವ ಈ ಶಾಪುಗಳ ಲೈಸನ್ಸ್ ಕ್ಯಾನ್ಸಲ್ ಮಾಡುವುದಕ್ಕೆ ಸಾಧ್ಯವೇ? ಮಾಡುವುದಕ್ಕೆ ಆಗುತ್ತದೆಯೇ, ಮಾಡುವುದಕ್ಕೆ ಸಾಧ್ಯವಿಲ್ಲ. ಇಷ್ಟು ಅನ್ಯಾಯ ಕಣ್ಣೆದುರಿಗೆ ಆಗುತ್ತಿರುವಾಗ ತಿರುಗಿ ಲೈಸನ್ಸ್ ಕ್ಯಾನ್ಸಲ್ ಮಾಡುತ್ತೇವೆ ಎಂದು ಹೇಳುವುದು ಸಾಧ್ಯವಿಲ್ಲದ ಕೆಲಸ. ಅನ್ಯಾಯವಾಗಿ ಹಳ್ಳಿಮಟ್ಟದ ಸೊಸೈಟಿಗಳಿಗೆ ಇದನ್ನು ತಲಪಿಸುತ್ತಾ ಇದ್ದೀರಿ, ಅವರು ಮಾಡುವುದಕ್ಕೆ ಅಪ್ಪಣೆ ಕೊಡುತ್ತಾ ಇದ್ದೀರಿ. ಪ್ರೊಹಿಬಿಷನ್ ಬಗ್ಗೆ ಹಿಂದೆ ಈ ಹೌಸ್‌ನಲ್ಲಿ ಚರ್ಚೆಯಾಯಿತು. ಆಗ ಎಕ್ಸೈಜ್ ಮಿನಿಸ್ಟರ್ ಶ್ರೀಮತಿ ಯಶೋಧರಮ್ಮನವರು ಇದ್ದರು. ಆಗ ಅದು ನಡೆಯಲಿಲ್ಲ ಎಂದು ಹೇಳಿ ರಾಜೀನಾಮೆ ಕೊಟ್ಟರು. ಆಗ ಮಾನ್ಯ ರಾಚಯ್ಯನವರು ರಾಜೀನಾಮೆ ಕೊಡುತ್ತೇನೆ. ಕೊಡುತ್ತೇನೆ ಎಂದು ನಾಟಕ ಆಡಿದರು. ಈಗ ಹಳ್ಳಿಮಟ್ಟಕ್ಕೆ ಇದನ್ನು ತಲುಪಿಸುತ್ತಾ ಇದ್ದೀರಿ. ಗಾಂಧೀಜಿಯವರು ಹಳ್ಳಿಯಲ್ಲಿ ಶೆರೆ ಕುಡಿಸಬೇಕು ಎಂಬ ಕನಸು ಕಂಡರೇ? ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು ಇದೇ ಹೇಳಿಹೋದರೇ? ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವೆಲ್ಲಾ ಇಲ್ಲಿ ಬಂದಿರುವುದು ಮುಂದಿನ ಪ್ರಜೆಗಳು ಸೌಖ್ಯವಾಗಿರಬೇಕು, ಶಾಂತಿಯುತವಾಗಿ ಬಾಳಬೇಕು, ಒಬ್ಬರಿಗೊಬ್ಬರಿಗೆ ಜಗಳ ಹೊಟ್ಟೆಕಿಚ್ಚು ಇಲ್ಲದೆ ಬಾಳಬೇಕು, ಅವರಿಗೆ ಒಳ್ಳೆಯ ದೇಶಕೊಡಬೇಕು ಎನ್ನುವ ಆಸೆಯಿಂದ ಇಲ್ಲಿ ಬಂದಿದ್ದೇವೆ. ಆದರೆ ನೀವು ಇಲ್ಲಿ ನೋಡುತ್ತಾ ಇರುವುದು ಏನು? ಮದ್ಯಪಾನ ಮಾಡಿಸಿ, ಸೋಮಾರಿಗಳನ್ನಾಗಿ ಮಾಡಿ ಬುದ್ಧಿಗೆಟ್ಟು ಈ ದೇಶವನ್ನು ಅವರ ಕೈಗೆ ಕೊಟ್ಟರೆ ನ್ಯಾಯವಾಗುತ್ತದೆಯೇ? ನಿಮಗೆ ಅವರ ಬಗ್ಗೆ ಏನೂ ಚಿಂತೆ ಇಲ್ಲ. ಆ ಮಕ್ಕಳು ಈ ರೀತಿ ಆಗುತ್ತಿದ್ದಾರೆಂದು ನಿಮಗೆ ಹೊಟ್ಟೆಯುರಿಯುವುದಿಲ್ಲವೇ? ಈ ಗತಿ ಆಗುತ್ತಿರಲ್ಲ ಎಂದು ಹಳ್ಳಿ ಮಕ್ಕಳಿಗೆ ಏಕೆ ಟೆಂಪ್ಟೇಷನ್ ಕೊಡುತ್ತಾ ಇದ್ದೀರಿ. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಭಿನ್ನಹ ಮಾಡಿಕೊಳ್ಳುತ್ತೇನೆ. ಇದನ್ನು ಮಾತ್ರ ಹಳ್ಳಿಗೆ ತಲುಪಿಸಬೇಡಿ, ಈಗಾಗಲೇ ಅವರು ಕೆಟ್ಟು ಹಾಳಾಗಿ ಹೋಗಿದ್ದಾರೆ. ಅಲ್ಲಿ ಎಲೆಕ್ಷನ್ಸ್ ಎಲ್ಲಾ ನಡೆದು ಬೇಕಾದಷ್ಟು ಮಕ್ಕಳು ಕೆಟ್ಟಿದ್ದಾರೆ. ಆದ್ದರಿಂದ ಹಳ್ಳಿಗಳಲ್ಲಿರುವ ಮಕ್ಕಳಿಗೆ ಅವರ ಆರೋಗ್ಯವನ್ನು ಬುದ್ಧಿಯನ್ನು ಹಾಳು ಮಾಡುವ ವಿಚಾರದಲ್ಲಿ ಗಮನ ಕೊಡಬೇಡಿ ಎಂದು ನನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದಕ್ಕ ಇಷ್ಟಪಡುತ್ತಾ ಇದ್ದೇನೆ.

ಇನ್ನು ಟ್ಯಾಕ್ಸಸ್ ಬಗ್ಗೆ ಹೇಳುವುದಾದರೆ, 'ಏಳುವ ಹೊತ್ತಿಗೆ ೭ ಸುಂಕ' ಎಂಬ ನಾಣ್ಣುಡಿಗೆ ಸರಿಯಾಗಿ ಮಾಡಿದ್ದೀರಿ. ಡೀಸೆಲ್, ಪೆಟ್ರೋಲ್, ನಾನ್ ರಿಫೈನ್ಡ್ ಎಡಿಬಲ್ ಆಯಿಲ್ಸ್, ಬೇಳೆಕಾಳು, ಕಾಫಿ, ಟೀ, ಸೋಪು ಇವೆಲ್ಲದರ ಮೇಲೂ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ ಈಗಾಗಲೇ ಬಗ್ಗಿ ಹೋಗಿರುವ ಬೆನ್ನು ಇನ್ನಷ್ಟು ಕುಗ್ಗಿ ಬಗ್ಗಿ ಹೋಗುತ್ತದೆ. ಸಂಸಾರ ನಡೆಸುವ ಹೆಣ್ಣು ಮಕ್ಕಳು ಏನು ಮಾಡಬೇಕು ? ಅವರಿಗೆ ಈ ಬೆಲೆಗಳನ್ನು ನೋಡಿ ಹುಚ್ಚು ಹಿಡಿದಹಾಗೆ ಆಗುತ್ತದೆ. ದಿನನಿತ್ಯ ಪದಾರ್ಥಗಳ ಬೆಲೆಗಳು ಜಾಸ್ತಿಯಾಗುತ್ತಿವೆ. ಹೀಗೆ ಏರಿಸಿಕೊಂಡು ಹೋದರೆ ಅವರು ಏನು ಮಾಡಬೇಕು ? ಕರಬಾರ ಹೀಗೆ ಏರುತ್ತಿದೆ. ರಕ್ಷಣೆ ಇಲ್ಲದ, ವಿದ್ಯೆ ಇಲ್ಲದ ಕೆಲಸವಿಲ್ಲದ ಶೋಷಣೆಗೆ ಒಳಪಟ್ಟ ಈ ಹೆಣ್ಣುಮಕ್ಕಳ ಬಗ್ಗೆ ಈ ಬಡ್ಜೆಟ್ ಭಾಷಣದಲ್ಲಿ ಏನು ಮಾಡಿದ್ದೀರಿ ? ಅವರಿಗೆ ಲ್ಯಾವೆಟ್ರೀಸ್ ಬಿಟ್ಟರೆ ಇನ್ನೇನೂ ಕೊಟ್ಟಿಲ್ಲ. ಇನ್ನೇನೂ ಕಾಣಲಿಲ್ಲ. ಈ ಬಡ್ಜೆಟ್‌ನಲ್ಲಿ ಹಾಗಾದರೆ ಇವುಗಳನ್ನು ಎಷ್ಟು ಕಟ್ಟುತ್ತೀರಿ ?

ಹಳ್ಳಿಯಲ್ಲೋ, ಪಟ್ಟಣದಲೋ ಅದು ಕೂಡ ಗೊತ್ತಿಲ್ಲ. ಶೌಚಗೃಹಗಳನ್ನು ಮೆಂಟೇನ್ ಮಾಡಬೇಕಾದರೆ ನೀರಿನ ವ್ಯವಸ್ಥೆ ಇದೆಯೋ ? ಕುಡಿಯುವ ನೀರೇ ಇಲ್ಲ, ಇದಕ್ಕೆಲ್ಲಿ ನೀರಿದೆ. ಈಗ ಲ್ಯಾವೇಟರಿಗಳನ್ನು ಕಟ್ಟುವ ಕೆಲಸಕ್ಕೆ ದಯಮಾಡಿ ಹೋಗಬೇಡಿ. ಇನ್ನು ನನ್ನ ಸಹೋದ್ಯೋಗಿಗಳು ಈ ವಿಚಾರದಲ್ಲಿ ಮಾತನಾಡುವವರಿದ್ದಾರೆ. ನಾನು ಬೇಡಿಕೆಗಳು ಬಂದಾಗ ಮತ್ತೆ ಮಾತನಾಡುತ್ತೇನೆ. ಈಗ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವಂಥ ಆಯವ್ಯಯ ಪತ್ರದ ಬಗ್ಗೆ ಮಾತನಾಡುವಾಗ ನನಗನ್ನಿಸುವುದು ಏನೆಂದರೆ, ಇದೊಂದು ಬಡ್ಜೆಟ್ ನಮ್ಮ ಮುಂದಿಟ್ಟಿದ್ದಾರೆ. ಇದು ನಿರ್ವೀರ್ಯವಾದುದು, ಯಾವುದೇ ರೀತಿಯ ಹೊಸ ನೀತಿಯಾಗಲೀ, ಧೋರಣೆಯಾಗಲೀ ಪ್ರಚೋದನೆ ಮಾಡುವಂತಾಗಲೀ ಇಲ್ಲ. ಅಷ್ಟು ಮಾತ್ರವಲ್ಲ, ಬಹಳ ದೊಡ್ಡ ಪ್ರಮಾಣದ ತೆರಿಗೆಗಳನ್ನು ಜನತೆಯ ಮೇಲೆ ಹೊರಿಸಿದಂಥ ಬಡ್ಜೆಟ್ ಇದು, ಇದರಿಂದಾಗಿ ನಮ್ಮ ರಾಜ್ಯದಲ್ಲಿ ಖಂಡಿತವಾಗಿಯೂ ಹಣದುಬ್ಬರ ಮತ್ತು ಬೆಲೆ ಏರಿಕೆ ಜಾಸ್ತಿಯಾಗಿ, ಸಾಮಾನ್ಯ ಜನರ ಕಷ್ಟಕಾರ್ಪಣ್ಯಗಳು ಹೆಚ್ಚಾಗುತ್ತವೆ. ಅಷ್ಟು ಮಾತ್ರವಲ್ಲ ಈ ಬಜೆಟ್ ಕೆಲವು ವಿಷಯಗಳಲ್ಲಿ ತೀರಾ ಪ್ರತಿಗಾಮಿಯಾದಂಥ ಧೋರಣೆಯನ್ನು ಈ ಸರ್ಕಾರ ವಹಿಸುತ್ತಿದೆ ಎನ್ನುವುದು ನನ್ನ ಅಭಿಪ್ರಾಯ. ಅದರ ಬಗ್ಗೆ ನಾನು ಮುಂದೆ ಮಾತನಾಡುತ್ತೇನೆ. ಇನ್ನೊಂದು ಅಂಶ ಕೂಡ ಇದರಲ್ಲಿದೆ. ಅನೇಕ ವಿಷಯಗಳಲ್ಲಿ ಕೇಂದ್ರ ಸರ್ಕಾರದ ಬಗ್ಗೆ ಹೇಳಿದ್ದಾರೆ. ಕೇಂದ್ರ ಸರ್ಕಾರದ ಧೋರಣೆ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ಮತ್ತು ಯಾವರೀತಿ ಕೇಂದ್ರ ಸರ್ಕಾರ ಕಾಂಗ್ರೆಸ್ಸೇತರ ಸರ್ಕಾರಗಳ ಪರವಾಗಿಲ್ಲ, ಕಾಂಗ್ರೆಸ್ಸೇತರ ಸರ್ಕಾರಗಳ ವಿಷಯಗಳಲ್ಲಿ ತಾರತಮ್ಯ ತೋರಿಸುತ್ತಿದೆ ಎಷ್ಟು ಹಣವನ್ನು ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಕೊಡುತ್ತಿಲ್ಲ ಎನ್ನುವ ಅಂಶಗಳನ್ನೆಲ್ಲಾ ವಿಶ್ಲೇಷಣೆ ಮಾಡಿದ್ದಾರೆ. ನಾನು ಪ್ರತಿಯೊಂದು ವಿಷಯವನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ ಅನೇಕ ಅಂಶಗಳನ್ನು ಒಪ್ಪಿಕೊಂಡರೂ ಸಹ ಒಂದು ಮಾತನ್ನು ಹೇಳಬೇಕಾಗುತ್ತದೆ. ಬಹಳ ಚಾಕಚಕ್ಯತೆಯಿಂದ ಮಾನ್ಯ ರಾಮಕೃಷ್ಣ ಹೆಗಡೆಯವರು ಕೇಂದ್ರ ಸರ್ಕಾರದ ಮೇಲೆ ಎಲ್ಲವನ್ನೂ ಹೊರಿಸಿ, ಇಲ್ಲಿ ತಾವು ಮಾಡಬೇಕಾದ ಕೆಲಸಗಳನ್ನು ಮಾಡದೆ, ತಮ್ಮ ದಾರಿಯಲ್ಲಿ ಯಾವರೀತಿಯ ಆರ್ಥಿಕ ನೀತಿ ಮತ್ತು ಧೋರಣೆಯನ್ನು ತೆಗೆದುಕೊಂಡು ಹೋಗಬೇಕಾಗಿತ್ತೋ, ಯಾವರೀತಿಯಲ್ಲಿ ಸುಧಾರಿಸಬಹುದೆನ್ನುವ ಕಡೆ ಗಮನ ಕೊಡದೆ, ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ, ತಾವು ತಪ್ಪಿಸಿಕೊಳ್ಳುವಂಥ ಕೆಲಸ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ತಾವು ಮೊದಲಬಾರಿಗೆ ಈ ರೀತಿ ಹೇಳುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.— ಕಳೆದ ಬಾರಿ ಕೂಡ ಹೇಳಿದ್ದೆ. ನಿಮಗೆ ಮಾತನಾಡಿ ಎದ್ದು ಹೋಗುವಂಥ ಚಟ. ಈಗ ಕುಳಿತಿದ್ದೀರಿ. ಕೇಂದ್ರ ಸರ್ಕಾರದ ಕೆಲವು ನೀತಿಗಳು ಸರಿಯಿಲ್ಲ, ಅನೇಕ ನೀತಿಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಡಿಸ್ಕ್ರಿಮಿನೇಷನ್ ಮಾಡುತ್ತಿದ್ದಾರೆ. ಅನೇಕ

---

† ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಅಂಶಗಳನ್ನು ಬಜೆಟ್ಟಿನಲ್ಲಿ ಒಪ್ಪಿಕೊಳ್ಳುತ್ತೇವೆ. ಅದು ಒಂದು ಕಡೆ ಇರಲಿ. ಆದರೆ ನೀವು ತಪ್ಪಿಸಿ ಕೊಳ್ಳುವಂಥದ್ದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.— ಈ ರೀತಿ ಭಾಷಣ ಮಾಡುವುದು ಗೊತ್ತಿದ್ದರೆ, ಕಳೆದ ಬಾರಿಯೂ ನಾನು ಕೇಳುತ್ತಿದ್ದೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಬಂಗಾರಪ್ಪನವರ ಪರಿಸ್ಥಿತಿ ಮೊದಲು ಬೇರೆ ಇತ್ತು, ಈಗ ಬೇರೆ ಇದೆ. ನನ್ನ ಪರಿಸ್ಥಿತಿ ಏನೂ ಆಗಿಲ್ಲ. ಇದೇ ಕುರ್ಚಿಯಲ್ಲೇ ಇದ್ದೇನೆ. ಮಾನ್ಯ ಹೆಗಡೆಯವರು ತಮ್ಮ ಬಜೆಟ್ ಭಾಷಣದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ. ಆಶಾದಾಯಕ ವಾಗಿದೆಯೆನ್ನುವಂಥ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ಅನೇಕ ವಿಷಯಗಳನ್ನು ಹೇಳುತ್ತಾ, ರಾಜ್ಯದ ತಲಾ ಆದಾಯ ಜಾಸ್ತಿಯಾಗಿದೆಯೆಂದು ಕೂಡ ಹೇಳಿದ್ದಾರೆ. ಪರ್‌ಕ್ಯಾಪಿಟ ಇನ್‌ಕಂ ಸರಾಸರಿ ಒಬ್ಬ ಮನುಷ್ಯನ ಆದಾಯ ಬಹಳ ಜಾಸ್ತಿಯಾಗಿದೆ, ಇವೊತ್ತಿನ ದಿವಸ ಬೆಲೆ ಏರಿಕೆ ಜಾಸ್ತಿಯಾಗಿಲ್ಲ, ಕೃಷಿರಂಗ ಉತ್ತಮಗೊಂಡಿದೆ, ಕೈಗಾರಿಕೆಗಳ ಪರಿಸ್ಥಿತಿ ಬಹಳ ಚೆನ್ನಾಗಿ ಇದೆ, ಕೈಗಾರಿಕೆಗಳ ಸಂಬಂಧ ಬಹಳ ಚೆನ್ನಾಗಿ ಇದೆ, ಎಂದು ಅವರ ಪ್ರಕಾರ ಶಹಭಾಸ್‌ಗಿರಿ ಕೊಟ್ಟಿದ್ದಾರೆ. ಕಾರ್ಮಿಕ ವರ್ಗಕ್ಕೆ ಏನು ಮಾಡದೇ ಇದ್ದರೂ ಅದನ್ನು ಹೇಳಿದ್ದಾರೆ. ವಿದ್ಯುಚ್ಛಕ್ತಿ ಮತ್ತಿತರ ವಿಷಯಗಳ ಬಗ್ಗೆ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ. ಇವರು ಇಷ್ಟೊಂದು ಒಳ್ಳೆಯ ಚಿತ್ರ ಕೊಟ್ಟಿದ್ದಾರಲ್ಲ, ಇದು ನಿಜಾಂಶವೇ, ಅದು ಮುಖ್ಯ ಬಡ್ಜೆಟ್‌ನಲ್ಲಿ ಹೇಳಿರತಕ್ಕದ್ದು ಸತ್ಯಾಂಶ ಇದ್ದರೆ ಅದನ್ನು ನಾವು ಒಪ್ಪಿಕೊಳ್ಳೋಣ. ಅದು ಸತ್ಯಾಂಶ ಇಲ್ಲದೇ ಹೋದರೆ ಅದನ್ನು ಅವರು ಒಪ್ಪಿಕೊಳ್ಳಲಿಕ್ಕೂ ಧೈರ್ಯ ಮಾಡಬೇಕು. ಎದ್ದು ಹೋಗುವ ಮಾತು ಬಿದ್ದು ಹೋಗುತ್ತದೆ ಎಂದು ಮಾಡಿದರೆ ಆಗುವುದಿಲ್ಲ. ಈಗ ಅವರು ಕೊಟ್ಟಿರುವ ಅಂಕಿಅಂಶಗಳಲ್ಲಿ. ಸತ್ಯಾಂಶ ಇಲ್ಲ ಎನ್ನು ವುದನ್ನು ನಾನು ತೋರಿಸುತ್ತೇನೆ. ಬಜೆಟ್‌ನಲ್ಲಿ ಆರ್ಥಿಕ ಪರಿಸ್ಥಿತಿ ಯಾವರೀತಿಯಲ್ಲಿ ಹೋಗುತ್ತಿದೆ ಎನ್ನುವುದನ್ನು ತೋರಿಸಬೇಕು. ಮುಂದೆ ಬರುವ ದಿನಗಳಲ್ಲಿ ಸಾಮಾನ್ಯ ಜನರಿಗೆ, ಅದರಲ್ಲೂ ಬಡವರಿಗೆ ಕೃಷಿಕಾರ್ಮಿಕರಿಗೆ, ಬಡ ಕಾರ್ಮಿಕರಿಗೆ, ಪಾವರ್ಟಿ ಲೈನ್‌ನಿಂದ ಕೆಳಗೆ ಇರತಕ್ಕವರಿಗೆ ಅನುಕೂಲ ಮಾಡಿಕೊಡಬೇಕು. ಅದು ಇಲ್ಲದೇ ಹೋದರೆ ಏನೂ ಪ್ರಯೋಜನ ಆಗುವುದಿಲ್ಲ.

(ಸಭಾಧ್ಯಕ್ಷರು ಅಧ್ಯಕ್ಷರ ಪಿಠವನ್ನು ಅಲಂಕರಿಸಿದರು)

ಇನ್ನು ಇವರು ಎಕನಾಮಿಕ್ ಸರ್ವೆಯನ್ನು ಕೊಟ್ಟಿದ್ದಾರೆ, ಅದು ನಮಗೂ ನಿಮಗೂ ಬೈಬಲ್ ಇದ್ದ ಹಾಗೆ. ಇದರಲ್ಲಿರತಕ್ಕ ಫಿಗರ್ಸ್ ನೋಡಿದರೆ, ಅವರು ಹೇಳಿರುವ ರೀತಿ ನೋಡಿದರೆ ಬಹಳ ಚಾಕಚಕ್ಯ ಹೇಳಿದ್ದಾರೆ. ಅದನ್ನು ಇಂಗ್ಲಿಷ್‌ನಲ್ಲಿ ಹೇಳುವುದಾದರೆ ಟ್ವಿಸ್ಟ್ ಎಂದು ಹೇಳಬಹುದು, ಕನ್ನಡದಲ್ಲಿ ತೆಯಿಂದ ಹೇಳುವುದಾದರೆ ತಿರುಗಿಸಿ ಹೇಳುವಂಥ ಪ್ರವೃತ್ತಿ ಕಂಡುಬರುತ್ತದೆ. ಪರ್‌ಕ್ಯಾಪಿಟ್ ಇನ್‌ಕಂ ತೆಗೆದುಕೊಳ್ಳಿ. ಪೇಜ್ ೧೬ರಲ್ಲಿ ಉತ್ತಮವಾಗಿದೆ ಎಂದು ಅವರ ಅಭಿಪ್ರಾಯ. ಇದರ ಪ್ರಕಾರ ಏನಾಗಿದೆ ನಾವು ಯಾವಾಗಲೂ ಕಾನ್‌ಸ್ಟೆಂಟ್ ಪ್ರೈಸ್‌ಸ್ ತೆಗೆದುಕೊಳ್ಳಬೇಕು. ಇದರಲ್ಲಿ ಎರಡು ಇಷ್ಯೂ ಇದೆ. ಒಂದು ಕರೆಂಟ್ ಪ್ರೈಸಸ್, ಎರಡನೆಯದು ಕಾನ್‌ಸ್ಟೆಂಟ್ ಪ್ರೈಸಸ್. ಹಿಂದಿನ ವರ್ಷದ ಪ್ರೈಸಸ್ ಗಿಂತ ಈ ವರ್ಷದ ಪ್ರೈಸಸ್ ಜಾಸ್ತಿಯಾಗುತ್ತವೆ. ಅದರ ಆಧಾರದ ಮೇಲೆ ಲೆಕ್ಕ ತೆಗೆದುಕೊಂಡರೆ ತಪ್ಪಾಗುತ್ತದೆ. ಪರ್‌ಕ್ಯಾಪಿಟ ಇನ್‌ಕಂ ಆಧಾರದ ಮೇಲೆ ನೋಡಿದರೆ ೧೯೮೪–೮೫ ರಲ್ಲಿ ೭೭೨.೦೧ ಇದ್ದುದು ೧೯೮೫–೮೬ಕ್ಕೆ ೬೯೭.೬೫ ಆಗಿದೆ. ಇದು ಕಡಿಮೆಯಾಗಿದೆ. ಇನ್ನು ೧೯೮೬–೮೭ ರಲ್ಲಿ ಪರ್‌ಕ್ಯಾಪಿಟ ಇನ್‌ಕಂ ೭೪೫.೮೮ ಆಗಿದೆ. ಅಂದರೆ ೧೯೮೪–೮೫ ಕ್ಕಿಂತಲೂ ಕಡಿಮೆಯಾಗಿ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗಿದೆ. ೧೯೮೫–೮೭ನ್ನು ಗಣನೆಗೆ ತೆಗೆದುಕೊಳ್ಳಬಾರದು. ಆ ವರ್ಷ ಎಕ್ಸ್ಟ್ರಾರ್ಡಿನರಿ ಇಯರ್. ಬಹಳ ಬರಗಾಲ ಬಂದ ವರ್ಷ, ಬಹಳ ತೊಂದರೆಗೀಡಾದ ವರ್ಷ. ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಹೋಲಿಸಿದರೆ ಸರಿಯಾಗುವುದಿಲ್ಲ. ಆದ್ದರಿಂದ, ಸಾಮಾನ್ಯವಾದಂಥ ವರ್ಷವನ್ನು ತೆಗೆದುಕೊಳ್ಳಬೇಕಾಗುತ್ತದೆ. ೧೯೮೪–೮೫ ಮತ್ತು ೧೯೮೫-೮೬ರ ಪರ್‌ಕ್ಯಾಪಿಟ ಇನ್‌ಕಂ ಹೋಲಿಸಿ ದರೆ ಪರ್‌ಕ್ಯಾಪಿಟ ಇನ್‌ಕಂ ಈಗ ಕಡಿಮೆಯಾಗಿದೆ, ಜಾಸ್ತಿಯಾಗಿಲ್ಲ. ಇನ್ನು ಎರಡನೆಯ ವಿಚಾರ ಬೆಲೆಗಳ ಬಗ್ಗೆ ಹಣದುಬ್ಬರ ಆಗುವುದಿಲ್ಲ ಆಲ್ ಇಂಡಿಯಾ ಲೆವೆಲ್‌ಗಿಂತಲೂ ಕಡಿಮೆ ಇದೆ ಎಂದು ಹೇಳಿದ್ದಾರೆ. ಅವರು ಆ ರೀತಿ ಕಂಪೇರ್ ಮಾಡುವುದು ಸರಿಯಲ್ಲ. ಬಹಳ ಜಾಸ್ತಿ ಇರುವಂಥಾದ್ದು, ಬಹಳ ಕಡಿಮೆ ಇರುವಂಥಾದ್ದು ಎಲ್ಲಾ ಅವರೇಜ್ ಮಾಡುತ್ತಾರೆ. ಈಗ ನಮ್ಮ ರಾಜ್ಯದ ನೆರೆ ರಾಜ್ಯ

ಗಳಾದಂಥ ಕೇರಳಾ, ಆಂಧ್ರ, ಮಹಾರಾಷ್ಟ್ರ ಈ ತರಹ ಹೋಲಿಸಿ ನೋಡಬೇಕಾಗುತ್ತದೆ. ಆಲ್ ಇಂಡಿಯಾದ್ದು ಹೋಲಿಸಿದರೆ ಅದು ಸರಿಯಾಗುವುದಿಲ್ಲ. ಪೇಜ್ ೨೩ ರಲ್ಲಿ ಇವರೇ ಹೇಳಿರುವ ಪ್ರಕಾರ ನೋಡುವುದಾದರೆ ಕನ್‌ಸ್ಯೂಮರ್ ಪ್ರೈಸ್ ಇಂಡೆಕ್ಸ್, ಕರ್ನಾಟಕ. ಮಾರ್ಚಿ ೧೯೮೫ಕ್ಕೆ ೬೪೧ ಇದೆ. ಮಾರ್ಚಿ ೧೯೮೬ಕ್ಕೆ ೬೯೧ ಇದೆ. ನವೆಂಬರ್ ೧೯೮೬ಕ್ಕೆ ೭೩೩ ಇದೆ. ಅವರ ಪ್ರಕಾರ ಪ್ಲಸ್ ೬.೦೭ ಆಗಿದೆ. ಇನ್ನು ಆಲ್ ಇಂಡಿಯಾದ್ದು ಹೇಳಬೇಕೆಂದರೆ ಮಾರ್ಚಿ ೧೯೮೫ಕ್ಕೆ ೫೮೬, ಮಾರ್ಚಿ ೧೯೮೬ಕ್ಕೆ ೬೩೮, ನವೆಂಬರ್ ೧೯೮೬ಕ್ಕೆ ೬೮೫ ಪ್ಲಸ್ ೭.೩೫ ಆಗಿದೆ. ಆಲ್ ಇಂಡಿಯಾದ್ದು ಜಾಸ್ತಿ ಇದೆ. ಆಲ್ ಇಂಡಿಯಾ ರೀತಿ ಕಂಪೇರ್ ಮಾಡಲಿಕ್ಕೆ ಸಾಧ್ಯವಿಲ್ಲ. ಪ್ರತಿವರ್ಷ ಜಾಸ್ತಿ ಆಗುವುದು ಇವರ ಪ್ರಕಾರವೇ ಗೊತ್ತಾಗುತ್ತದೆ.

ಅವರು ಏನು ಹೇಳುತ್ತಿದ್ದಾರೆಂದರೆ "Consumer Prices for the working class have shown that the general consumer items have tended to be dearer as the Index has moved up from 961 in March 1986 to 733 in November 1986". ಮಾರ್ಚಿಯಿಂದ ನವೆಂಬರ್ ತಿಂಗಳವರೆಗೆ ಎಂದರೆ ೯ ತಿಂಗಳ ಲೆಕ್ಕ. ಸಾಮಾನ್ಯವಾಗಿ ಎಲ್ಲರೂ ೯ ತಿಂಗಳ ಲೆಕ್ಕವನ್ನೇ ಕೊಡುತ್ತಾರೆ. ಒಂದು ವರ್ಷದ ಲೆಕ್ಕವನ್ನು ಯಾರೂ ಕೊಡುವುದಿಲ್ಲ. ಕಾರಣ ಏನೋ ಗೊತ್ತಿಲ್ಲ. ಯಾವುದೇ ಬಜೆಟ್‌ನಲ್ಲೂ ಇದುವರೆಗೆ ಆ ರೀತಿ ಕೊಟ್ಟಿಲ್ಲ. ಈ ಒಂದು ಪರಂಪರೆ ಸರಿಯಲ್ಲ. ೯ ತಿಂಗಳ ಲೆಕ್ಕವನ್ನು ಕೊಟ್ಟು ಇದು ಸರಿಯಾಗಿದೆ ಎಂದು ವಾದ ಮಾಡುವುದು ಸರಿಯಲ್ಲವೆಂಬುದನ್ನು ನನ್ನ ಅಭಿಪ್ರಾಯ. ಇವರು ಯಾವರೀತಿ ಕಂಪೇರ್ ಮಾಡಿದ್ದಾರೆಂದರೆ ಆಲ್ ಇಂಡಿಯ ಪ್ರೈಸ್ ಇಂಡೆಕ್ಸ್‌ಗೂ, ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್‌ಗೂ ಕಂಪೇರ್‌ಮಾಡಿ ಅನಂತರ ಈರೀತಿ ಕಂಪೇರ್ ಮಾಡಿರುವುದು ಸರಿಯಾದುದಲ್ಲ ಎಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ.

> "A wholesale Price Index for Karnataka comparable to all India Wholesale Price Index is not available. But for Karnataka, Wholesale Price Index for Agricultural commodities is prepared every month.".

Only for Agricultural commodities it is prepared every month and not for every commodity.

ಶ್ರೀ ಎಸ್. ಬಂಗಾರಪ್ಪ.—ಇವರ ಬಜೆಟ್‌ನಲ್ಲಿ ಇವರೇ ಹೇಳಿಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಾ ಕಮಾಡಿಟೀಸ್ ಪ್ರೈಸೆಸ್ ಕಡಿಮೆಯಾಗಿದೆಯೆಂದು ಇವರೇ ಹೇಳಿದ್ದಾರೆ. ಆದರೆ ನಿಜಾಂಶ ಏನೆಂದರೆ ಹೋಲ್‌ಸೇಲ್ ಪ್ರೈಸ್ ಅಗ್ರಿಕಲ್ಚರಲ್ ಕಮಾಡಿಟೀಸ್‌ಗೆ ಮಾತ್ರ ಇದೆ. ಆದರೆ ಅವರು ಈ ರೀತಿ ಕಂಪೇರ್ ಮಾಡುವುದು ಸರಿಯಾದುದಲ್ಲ. ಪ್ರೈಸಸ್ ಕಡಿಮೆಯಾಗಿದೆಯೆಂದು ಏನು ಹೇಳಿದ್ದಾರೆ ಅದು ಸರಿಯಾದುದಲ್ಲ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇವರು ಕೊಟ್ಟಿರತಕ್ಕ ಡಾಕ್ಯುಮೆಂಟ್‌ನ್ನೇ ನೀವು ತೆಗೆದುಕೊಂಡು ಹೇಳುತ್ತಿದ್ದೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಹೌದು, ಇದು ಇವರು ಕೊಟ್ಟಿರತಕ್ಕ ಡಾಕ್ಯುಮೆಂಟ್. ನಾನು ಏನು ಯೋಚನೆ ಮಾಡಿದ್ದೆ ಎಂದರೆ ಎಲ್ಲಾ ಕಮಾಡಿಟೀಸ್‌ನ ಪ್ರೈಸಸ್ ಗಗನಕ್ಕೇರುತ್ತಿರುವುದನ್ನು ನೋಡಿರುವುದರಿಂದ ಇವರು ಸ್ವಲ್ಪವಾದರೂ ಇದರ ಬಗ್ಗೆ ಭಾಷಣವನ್ನು ಮಾಡುತ್ತಾರೆ ಎಂದು ನಾನು ತಿಳಿದಿದ್ದೆ. ಆದರೆ ಅದೇನೂ ಇಲ್ಲ ಟೈಮ್ಸ್‌ನವರು ಇದನ್ನು ಸರ್ವೆ ಮಾಡಿದ್ದಾರೆ, ಡೆಕ್ಕನ್ ಹೆರಾಲ್ಡ್‌ನವರು ಸರ್ವೆ ಮಾಡಿದ್ದಾರೆ, ಇಂಡಿಯನ್ ಎಕ್ಸ್‌ಪ್ರೆಸ್‌ನವರು ಸರ್ವೆ ಮಾಡಿದ್ದಾರೆ, ಅಷ್ಟೇ ಅಲ ಅಖಿಲ ಭಾರತ ಮಟ್ಟದಲ್ಲಿ ಪತ್ರಿಕೆಗಳು ಸರ್ವೆ ಮಾಡಿವೆ. ಇದನ್ನೆಲ್ಲಾ ನೋಡಿದರೆ ಪ್ರೈಸ್ ಇಂಡೆಕ್ಸ್ ಜಾಸ್ತಿಯಾಗಿದೆ ಎನ್ನುವುದು ಗೊತ್ತಾಗುತ್ತದೆ. ನಾನು ಈ ಮಾತನ್ನು ಹೇಳಿದಾಗ ನಮ್ಮ ಕಾಂಗ್ರೆಸ್ ಮಿತ್ರರು ಯಾರೂ ತಪ್ಪು ತಿಳಿದುಕೊಳ್ಳಬಾರದು. ೧೯[illegible]ನೇ ಇಸವಿಯಿಂದ ೮೬ನೇ ಇಸವಿಯವರೆಗೆ ತೆಗೆದುಕೊಂಡು ನೋಡಿದರೆ ಪ್ರೈಸ್ ಇಂಡೆಕ್ಸ್‌ನ್ನು ಕಡಿಮೆ ಮಾಡುವುದಕ್ಕೆ, ನ್ಯೂಟ್ರಲೈಸೇಷನ್

ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಬೇರೆ ವಿಚಾರ. ಆದರೆ ಇಲ್ಲಿ ಈಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತೋರಿಸಿಲ್ಲ. ಅಂನಮೇಲೆ ಈ ಸರ್ಕಾರ ತನ್ನ ವೈಫಲ್ಯತೆಯನ್ನು ತೋರಿಸಿಕೊಂಡಿದೆ. ಎಂಬುದನ್ನು ಮಾತ್ರ ನಾನು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಸೆಲೆಕ್ಟೆಡ್ ಎಕನಾಮಿಕ್ ಇಂಡಿಕೇಟರ್‌ನ್ನು ಪೇಜ್ ೧೧ರಲ್ಲಿ ಇವರೇ ಕೊಟ್ಟಿದ್ದಾರೆ. ೧೯೮೦-೮೧ ರಿಂದ ೮೬-೮೭ರವರೆಗೆ ಕೊಟ್ಟಿದ್ದಾರೆ. ಅದರ ಪ್ರಕಾರ ಕಾನ್‌ಸ್ಟೆಂಟ್ ಪ್ರೈಸ್ ೮೪-೮೫ರಲ್ಲಿ ೩೧೦೦ ಇದ್ದುದು ೮೫-೮೬ರಲ್ಲಿ ೨೮೫೯ ಆಗಿದೆ, ೮೬-೮೭ರಲ್ಲಿ ೩೧೧೨ ಆಗಿದೆ. ಅಂದರೆ ಇದೇನೂ ಅಷ್ಟೊಂದು ಹೆಚ್ಚಿಗೆ ಆಗಿಲ್ಲ. ೩೧೦೦ ಇದ್ದುದು ೩೧೧೨ಕ್ಕೆ ಏರಿದೆ ಎಂದರೆ ಕೇವಲ ೧೨ ಪಾಯಿಂಟ್ ಮಾತ್ರ ಜಾಸ್ತಿಯಾಗಿದೆ. ಅಂದರೆ ಸ್ಲೈಟ್ ಆಗಿ ಇನ್‌ಕ್ರೀಸ್ ಆಗಿದೆ. ಅಷ್ಟೇನೂ ಇನ್‌ಕ್ರೀಸ್ ಆಗಿಲ್ಲ ಕಾನ್‌ಸ್ಟೆಂಟ್ ಪ್ರೈಸ್ ಕಡಿಮೆಯಾಗಿದೆ. ೮೪-೮೫ರಲ್ಲಿ ೭೭೨ ಇದುದು ೮೫-೮೬ರಲ್ಲಿ ೬೯೮ ಆಗಿದೆ, ೮೬-೮೭ರಲ್ಲಿ ೭೪೪, ಆಗಿದೆ.

ಇನ್ನು ಫುಡ್‌ಗ್ರೈನ್ಸ್ ಪ್ರೊಡಕ್ಷನ್ ವಿಚಾರವನ್ನು ತೆಗೆದುಕೊಂಡರೆ, ೮೪-೮೫ರ ಸಾಲಿನಲ್ಲಿ ೬೬.೭೩ ಇದ್ದರೆ, ೮೫-೮೬ರಲ್ಲಿ ೫೫.೯೦ ಆಗಿದೆ, ೮೬-೮೭ರಲ್ಲಿ ೭೨.೫೯ ಆಗಿದೆ. ಇದೇರೀತಿ ಕಾಟನ್ ಪ್ರೊಡಕ್ಷನ್ ತೆಗೆದುಕೊಂಡರೆ ಅದು ಕಡಿಮೆಯಾಗಿದೆ. ೮೪-೮೫ರಲ್ಲಿ ೭.೮೭ ಇದ್ದುದು ೮೬-೮೭ರಲ್ಲಿ ೨.೩೯ಕ್ಕೆ ಇಳಿದಿದೆ. ಇದೇರೀತಿ ಷುಗರ್‌ಕೇನ್ ಕೂಡ. ೮೪-೮೫ರಲ್ಲಿ ೧೩೩.೯೨ ಇದ್ದುದು ೮೬-೮೭ರಲ್ಲಿ ೯೨.೬೩ಕ್ಕೆ ಇಳಿದಿದೆ. ಇನ್ನು ಆಯಿಲ್ ಸೀಡ್ಸ್ ಪ್ರೊಡಕ್ಷನ್ ಇನ್ನೂ ಮುಂತಾದ್ದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಎಕನಾಮಿಕ್ ಇಂಡಿಕೇಟರ್ ಏನಿದೆ ಇದು ಬಹಳ ಮುಖ್ಯವಾದುದು? ಇದು ಏನು ಸೂಚಿಸುತ್ತದೆ ? ಕೃಷಿ ರಂಗ ಚೆನ್ನಾಗಿ ಮುಂದುವರಿಯುತ್ತಿದೆ, ಉತ್ಪಾದನೆ ಬಹಳ ಜಾಸ್ತಿಯಾಗುತ್ತಿದೆ ಎಂದು ಹೇಳುತ್ತದೆಯೆ ? ಇದು ಯಾವುದನ್ನೂ ಹೇಳುವುದಿಲ್ಲ. ಆದ್ದರಿಂದ ಈ ಕ್ಲೈಂಸ್ ಸರಿಯಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ ತಮಗೆ ಗೊತ್ತಿರುವಹಾಗೆ, ನಾವೆಲ್ಲರೂ ಕೂಡ ಅನೇಕ ವರ್ಷಗಳಿಂದ ಮಾತನಾಡುತ್ತಲೇ ಬಂದಿರುತ್ತೇವೆ. ಮತ್ತೆ ಅದನ್ನು ಹೇಳಬೇಕಾಗಿಲ್ಲ. ಈ ಒಂದು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು ಹಣವನ್ನು ಉಪಯೋಗಿಸಿದ್ದಾರೆ ಟೋಟಲ್ ಎಕ್ಸ್‌ಪೇಡೀಚರ್, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಹಾಗೆಯೇ ಅಭಿವೃದ್ಧಿಯೇತರ ಕಾರ್ಯಕ್ರಮಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವುದು ಬಹಳ ಮುಖ್ಯ. ಅದನ್ನು ನೋಡಿದರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಏನು ಯೋಚನೆ ಮಾಡಿದ್ದಾರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕೊಟ್ಟಂಥ ವಚನವನ್ನು ಪಾಲಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ೧೯೮೩ ರಿಂದ ೧೯೮೪-೮೫-೮೬ ರವರೆಗೆ ಎಂದರೆ ಕಳೆದ ವರ್ಷದ್ದು ಇದೆ. ಆ ವರ್ಷ ತಾವು ಹೇಳಿದ್ದೇನೆಂದರೆ ನಾವು ಬಂದಮೇಲೆ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಜಾಸ್ತಿ ಮಾಡುತ್ತೇವೆ, ನಾನ್-ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಕಡಿಮೆ ಮಾಡುತ್ತೇವೆಂದು ಹೇಳುತ್ತಾ ಬಂದಿದ್ದೀರಿ. ಆದರ ನಿಜಾಂಶವನ್ನು ನೋಡಿದರೆ ಅದಕ್ಕೆ ತದ್ವಿರುದ್ಧವಾಗಿದೆ. ಒಂದೇ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಭಿವೃದ್ಧಿ ಸೇಮಿನಾರ್‌ನಲ್ಲಿ ಅವರು ಹೇಳಿದ್ದುದು, ೧೯೮೬-೮೭ ಎಕನಾಮಿಕ್ ಸರ್ವೆ ಪೇಜ್ ನಂಬರ್ ೧೩೫ರಲ್ಲಿ ಹೇಳಿದ ಒಂದು ಮಾತನ್ನು ಮಾತ್ರ ಇಲ್ಲಿ ಹೇಳುತ್ತೇನೆ. ೧೯೮೩-೮೪ರಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೧೩೬೪.೨೪ ಕೋಟಿ ಇದ್ದಿತ್ತು. ನಾನ್-ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೬೧೨.೮೬ ಕೋಟಿ. ಅಂದರೆ ಟೋಟಲ್ ಅವೃತ್ತಿನದಿವಸ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಪರ್ಸೆಂಟೇಜ್ ೫೦ ಪರ್ಸೆಂಟ್ ಜಾಸ್ತಿಯಾಗಿದೆ. ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗಿಂತ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಗಿದೆ ಹಾಗೆಯೇ ೧೯೮೪-೮೫ ತೆಗೆದುಕೊಂಡರೆ ೧,೬೪೪.೭೨ ಕೋಟಿ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೯೩೦.೮೨. ಅಂದರೆ ೫೦ ಪರ್ಸೆಂಟ್ ಜಾಸ್ತಿಯಾಯಿತು. ೧೯೮೪-೮೫-೮೬ಕ್ಕೆ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೧೯೩೪ ೫೦ ಕೋಟಿ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೧೦೪೨.೪೨ ಅಂದರೆ ೫೧ ಪರ್ಸೆಂಟ್‌ಗೂ ಜಾಸ್ತಿಯಾಯಿತು. ೧೯೮೬-೮೭ಕ್ಕೆ ೨೦೭೯.೩೮ ಕೋಟಿ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ೧೦೭೪.೨೩ ಅಂದರೆ ೫೧ ಪರ್ಸೆಂಟ್ ಆಯಿತು. ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಆಗಿದೆ. ಮತ್ತೆ ಹಿಂದೆ

ಕಾಂಗ್ರೆಸ್‌ನವರು ರಾಜ್ಯಭಾರದಲ್ಲಿದ್ದಾಗ ೧೯೭೫-೭೬ರಲ್ಲಿ ಲೆಕ್ಕಾಚಾರ ಹಾಕಿದ್ದೇನೆ. ೧೯೭೫-೭೬ ರಿಂದ ೧೯೮೩ರ ವರೆಗೆ ೪೦ ಪರ್ಸೆಂಟ್ ಇದ್ದುದು ಮ್ಯಾಕ್ಸಿಮಮ್ ೫೦ ಪರ್ಸೆಂಟ್ ಆಗಿದೆ. ಪ್ರತಿಯೊಂದು ಸಲ ಈ ವಾದ ಬರುತ್ತಲೇ ಇದೆ ನೀವೇನು ಮಾಡಿದ್ದೀರಿ ನಾವು ಎಲ್ಲವನ್ನು ಮಾಡಿದ್ದೇವೆಂದು ಹೇಳುತ್ತಲೇ ಇರುತ್ತೀರಿ. ಪ್ರತಿಯೊಂದು ಅಂಕಿಅಂಶಗಳನ್ನು ನೋಡಿದರೆ ನೀವು ಹೇಳಿದಂಥ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಗಿದೆ ಎಂದು ಸ್ಪಷ್ಟವಾಗುತ್ತದೆ. ಟೋಟಲ್ ಎಕ್ಸ್‌ಪೆಂಡೀಚರ್ ೨೭.೮೫ ಇದ್ದುದು ೧೯೭೫-೭೬ ರಿಂದ ೧೯೮೪ರ ವರೆಗೆ ೩೬ ಪರ್ಸೆಂಟ್ ಜಾಸ್ತಿಯಾಗಿದೆ, ಮತ್ತೆ ಪರಿಸ್ಥಿತಿ ಚೆನ್ನಾಗಿದೆ, ಉತ್ತಮವಾಗಿದೆ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲವೆಂದು ಹೇಳಬೇಕಾಗುತ್ತದೆ.

ಇನ್ನೊಂದು ಮುಖ್ಯವಾದ ವಿಚಾರವೆಂದರೆ ಬಹಳ ಆಶ್ಚರ್ಯವಾಗುತ್ತದೆ, ಮೊನ್ನೆಯ ದಿವಸ ಬಡ್ಜೆಟ್ ಅಧಿವೇಶನದಲ್ಲಿ ಭಾಷಣ ಆದಮೇಲೆ ಸೆಕ್ರೆಟರಿಯವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಫೈನಾನ್ಸ್ ಸೆಕ್ರೆಟರಿಯವರು, ನಮ್ಮ ರಾಜ್ಯದಲ್ಲಿ ತೆರಿಗೆಗಳ ಮೂಲಕ ಟ್ಯಾಕ್ಸ್ ಮೊಬಲೈಸ್ ಬಹಳ ಚೆನ್ನಾಗಿ ಮಾಡಿದ್ದೇವೆಂದು ಹೇಳಿದ್ದಾರೆ. ಮಾಕ್ಸಿಮಮ್ ಮಾಡಿರುವುದು ನಾವೇ, ನಾವು ಮೂರನೇಯವರಾಗಿದ್ದೇವೆಂದು. ನಮ್ಮ ದೇಶದಲ್ಲಿ ಏನೋ ಮಹತ್‌ಕಾರ್ಯವನ್ನು ಮಾಡಿದಹಾಗೆ. ತೆರಿಗೆಯನ್ನು ಹಾಕಿ ಜಾಸ್ತಿ ವಸೂಲು ಮಾಡಿದ್ದೇವೆನ್ನುವ ಬದಲಾಗಿ ಜಾಸ್ತಿ ವಸೂಲು ಮಾಡಿದ್ದೇವೆಂದು ಹೇಳಿದ್ದಾರೆ. ನಾನಂತೂ ಇದು ಒಂದು ಅಪದವ್ಧಾದ ಹೇಳಿಕೆ ಎನ್ನುವ ಮಾತನ್ನು ಹೇಳಬೇಕಾಗಿದೆ. ತೆರಿಗೆಯನ್ನು ಕಡಿಮೆ ಮಾಡಿ ಎಲ್ಲರಿಗಿಂತಲೂ ಕಡಿಮೆ ತೆರಿಗೆಯನ್ನು ಹಾಕಿದ್ದೇವೆಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಅವರು ಹಾಕಿದ್ದಾರೆ, ಆದರೆ ಅವರಿಗಿಂತಲೂ ಕಡಿಮೆ ಹಾಕಿದ್ದೇವೆಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ೧೯೮೫-೮೬ಕ್ಕೆ ೧೭.೦೫ ಇದ್ದುದು ೧೯೮೬-೮೭ಕ್ಕೆ ಟ್ಯಾಕ್ಸೇಷನ್ ೧೭.೦೫ ಆಗಿದೆ ತೆರಿಗೆಗಳು ಜಾಸ್ತಿಯಾಗಿ ಇರುವುದರಿಂದ ಮೊಬಲೈಸ್ ಜಾಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಕ್ರೆಡಿಟ್ ಹೇಗೆ ಆಗುತ್ತದೆ ? ಡೆಬಿಟ್ ಆಗುತ್ತದೆಯೇ ಹೊರತು ಕ್ರೆಡಿಟ್ ಆಗುವುದಿಲ್ಲ. ಕಾಂಗ್ರೆಸ್ ಸರ್ಕಾರದವರಲ್ಲದೆ ಬೇರೆ ಸರ್ಕಾರವನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಯವರು ತಮಿಳುನಾಡು ಮತ್ತು ಆಂಧ್ರ ಎರಡು ಮೂರು ರಾಜ್ಯಗಳನ್ನು ಹೋಲಿಸಿ ಹೇಳಿದ್ದಾರೆ.

೨-೦೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೇಬರಿಂಗ್ ಅಲ್ಲ, ಕಲೆಕ್ಷನ್ ಮಾಡುವುದರಲ್ಲಿ ಎಂ.ಜಿ.ಆರ್. ಎನ್.ಟಿ.ಆರ್. ಅವರು ಮಾಡಿರುವ ರೀತಿ ಮಾಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ವಾದ ಏನೆಂದರೆ ಟ್ಯಾಕ್ಸ್ ಹಾಕುವಂತೆ ಹಾಕಿದ್ದೇವೆ ಎಂದು. ಆದರೆ ಟ್ಯಾಕ್ಸ್ ಹಾಕಿ ಮೊಬಿಲೈಸ್ ಮಾಡಿದ್ದಾರೆ. ಅವರು ಗ್ರೋತ್ ಮಾಡುವ ರೀತಿಯಲ್ಲಿ ಹೇಳಿದ್ದಾರೆ. ಟ್ಯಾಕ್ಸ್ ಹಾಕಿ ಸಂತೋಷ ಏನು ಬಂತು ? ಟ್ಯಾಕ್ಸ್ ಕಡಿಮೆ ಮಾಡಿದರೆ ಅದರಲ್ಲಿ ಅರ್ಥ ಇದೆ. ಅದನ್ನು ಮಾಡದೆ ಇದನ್ನು ಮಾಡಿದರೆ ಹೇಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ? ಅದು ತಪ್ಪು. ಒಟ್ಟಾರೆ ಇಕನಾಮಿಕ ಸರ್ವೆಯನ್ನು ನೋಡಿದರೆ, ನಿಮ್ಮ ಆರ್ಥಿಕ ನೀತಿ ಆರ್ಥಿಕ ಧೋರಣೆ ಸರಿಯಾದುದಲ್ಲ, ಸ್ಪಷ್ಟವಾದುದಲ್ಲ. ನೀವು ತಪ್ಪುದಾರಿಯಲ್ಲಿ ಹೋಗುತ್ತಿದ್ದೀರಿ. ಏನೊಂದು ಕ್ರೈಸಿಸ್ ನಮ್ಮ ಸಮಾಜದಲ್ಲಿ ನಮ್ಮ ರಾಷ್ಟ್ರದಲ್ಲಿ ಇದೆ ಅದು ಜಾಸ್ತಿಯಾಗುತ್ತಿದೆಯೇ ಹೊರತು ಕಡಿಮೆ ಆಗುತ್ತಿಲ್ಲ. ಕೈಗಾರಿಕೆಗಳ ಬಗ್ಗೆ ಮಾತನಾಡುತ್ತಾ 'ಹ್ಯಾಪಿ ಸ್ಟೇಟ್ ಆಫ್ ಅಫೇರ್ಸ್' ಎಂದು ಹೇಳಿದ್ದಾರೆ. ೧೧ ಸಾವಿರ ಸಣ್ಣ ಸಣ ಕೈಗಾರಿಕೆಗಳನ್ನು ಜಿಲ್ಲೆಗಳಲ್ಲಿ ತೆರೆದಿದ್ದೇವೆಂದು ಹೇಳಿದ್ದಾರೆ. ೧೧ ಸಾವಿರವನ್ನೇನೋ ತೆರೆದಿದ್ದಾರೆ. ಆದರೆ ಅದರಲ್ಲಿ ೬ ಸಾವಿರ ಕೈಗಾರಿಕೆಗಳನ್ನು ಸಿಕ್ ಇಂಡಸ್ಟ್ರೀಸ್ ಎಂದು ಹೇಳಿದ್ದಾರೆ. ಕೈಗಾರಿಕೆಗಳಿಗೆ ಒಂದು ಕಡೆ ಲೈಸೆನ್ಸ್ ಕೊಡುತ್ತಾರೆ, ಮತ್ತೊಂದು ಕಡೆ ಕೆಲವು ಕೈಗಾರಿಕೆಗಳು ಮುಚ್ಚಿಕೊಂಡು ಹೋಗುತ್ತಿವೆ. ಮುಚ್ಚಿಕೊಂಡು ಹೋದವುಗಳ ಬಗ್ಗೆ ಮಾತೇ ಇಲ್ಲ. ಮಹದೇವ ಟೆಕ್ಸ್‌ಟೈಲ್‌ನಲ್ಲಿ ಏನು ಕಷ್ಟ ಇದೆ ಎಂಬುದು ಗೊತ್ತಿದೆ. ಶಂಕರ್ ಟೆಕ್ಸ್‌ಟೈಲ್ಸ್ ಮುಚ್ಚಿಕೊಂಡು ಹೋಯಿತು. ಗಣೇಶ ಟೆಕ್ಸ್‌ಟೈಲ್ಸ್ ಮುಚ್ಚಿಕೊಂಡು ಹೋಗುತ್ತಿತ್ತು. ಅಷ್ಟರಲ್ಲಿ ಪಂಪಾಪತಿಯವರು ಏನೋ ಮಾಡಿದರು, ಇವೊತ್ತಿನ ದಿವಸ ಮೈಸೂರು ಮೆಷಿನರಿ ಮುಚ್ಚಿಕೊಂಡು ಹೋಗಿದೆ. ಮೈಸೂರು ಎಲೆಕ್ಟ್ರಿಕಲ್ ಇಂಡ

ಸ್ಟ್ರೀಸ್ ಮತ್ತಿತರ ಕೈಗಾರಿಕೆಗಳು ಮುಚ್ಚಿ ಕೊಂಡು ಹೋಗುವ ಪರಿಸ್ಥಿತಿಯಲ್ಲಿವೆ. ಅವು ೩ ವರ್ಷದಿಂದ ಕಷ್ಟಪಡುತ್ತಿವೆ. ನೀವು ಕೈಗಾರಿಕೆಗಳು ಬಹಳ ಚೆನ್ನಾಗಿವೆ ಎಂದು ಹೇಳಿದರೆ, ಯಾರನ್ನು ಮರುಳು ಮಾಡುವುದಕ್ಕೆ ಹೇಳುತ್ತಿದ್ದೀರೆಂದು ನಾನು ಕೇಳಬಯಸುತ್ತೇನೆ. ಜನರನ್ನು ಏಕೆ ಫೂಲ್ ಮಾಡಲು ಪ್ರಯತ್ನ ಮಾಡುತ್ತಿದ್ದೀರಿ. ಕ್ರೈಸಿಸ್ ಇರುವುದು ನಿಜ, ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಯಿಂದ ಇಲ್ಲಿಯೂ ಕ್ರೈಸಿಸ್ ಇದೆ ಎಂದರೆ ಅದು ಬೇರೆ ಮಾತು. ಅದು ವಿವಾದಾಸ್ಪದವಾದ ವಿಚಾರ. ಅದನ್ನು ನಾನು ಒಪ್ಪುತ್ತೇನೆ. ಚೆನ್ನಾಗಿಲ್ಲದಿರುವುದನ್ನು ಚೆನ್ನಾಗಿದೆ ಎಂದು ಹೇಳತಕ್ಕದ್ದು ಸರಿಯಾದುದಲ್ಲ. ನೀವು ಎಳ್ಳಷ್ಟೂ ಕೂಡ ಈ ದಿಸೆಯಲ್ಲಿ ಪ್ರಯತ್ನ ಮಾಡಿಲ್ಲ. ಅವರು ಹೇಳಿರುವ ಮತ್ತೊಂದು ಮಾತನ್ನು ನೋಡಿದರೆ ವೇದನೆಯಾಗುತ್ತದೆ. 'We are going to disinvest' ಅಂತ. ಸರ್ಕಾರೀ ಕೈಗಾರಿಕೆಗಳು ಏನು ಸರಿಯಾಗಿ ನಡೆಯುತ್ತಿಲ್ಲ, ಖಾಯಿಲೆ ಬಂದಿದೆ ಆ ಕೈಗಾರಿಕೆಗಳನ್ನು ಡಿಸ್‌ಇನ್‌ವೆಸ್ಟ್ ಮಾಡುತ್ತೇವೆಂದು ಹೇಳಿದ್ದಾರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಲೆ ನೋವು ಇದ್ದರೆ ತಲೆಯನ್ನೇ ಕಟ್ ಮಾಡಿಬಿಡುತ್ತಾರೆ. ಅದಕ್ಕೆ ಔಷಧಿ ಕೊಡುವುದಿಲ್ಲ. ಇದು ಇವರ ನೀತಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮನ್ನು ಅಲ್ಲಿ ಕೂಡಿಸಿರುವುದು, ಸಿಕ್ ಆದ ತಕ್ಷಣ ಡಿಸ್‌ಇನ್‌ವೆಸ್ಟ್ ಮಾಡಿ ಬೇರೆಯವರಿಗೆ ಕೊಡಿ ಎಂದು ಅಲ್ಲ. ಟಾಟಾ, ಬಿರ್ಲಾದವರಿಗೆ ಕೊಡುವುದಕ್ಕೆ ಅಲ್ಲ. ಅವುಗಳನ್ನು ಸರಿ ಮಾಡುವುದಕ್ಕೆ ನೀವು ಅಲ್ಲಿರುವುದು. ಕಾರ್ಮಿಕರನ್ನು ಉಚ್ಚಾಟಿಸುವುದಕ್ಕಲ್ಲ, ಅವರನ್ನು ಬೀದಿಪಾಲು ಮಾಡುವುದಕ್ಕೆ ಅಲ್ಲ. ಕಾರ್ಮಿಕರನ್ನು ಬೀದಿಪಾಲು ಮಾಡಿ ಕೈಗಾರಿಕೆಗಳು ಸಾಯುವ ಸ್ಥಿತಿಯಲ್ಲಿವೆ, ಅವುಗಳಿಗೆ ಕಾಯಿಲೆಯಾಗಿದೆ ಎಂದು ಯಾವ ಬಾಯಿಂದ ಹೇಳುತ್ತೀರೋ ಗೊತ್ತಿಲ್ಲ. ಆದರೆ ಸರಿಯಾದ ಮಾತಲ್ಲ. ನೀವೂ ಕೂಡ ಈ ವಿಷಯದಲ್ಲಿ ಕೇಂದ್ರ ಸರ್ಕಾರದ ನೀತಿಯನ್ನು ಅನುಸರಿಸುತ್ತಿದ್ದೀರೆಂದು ಕಾಣುತ್ತಿದೆ. ಅಲ್ಲಿ ಕೂಡ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ಗಳು ಪ್ರೈವೇಟ್ ಸೆಕ್ಟರ್ ಇಂಡಸ್ಟ್ರೀಸ್ ಆಗುತ್ತಿವೆ. ಕೇಂದ್ರ ಸರ್ಕಾರದವರು ಮಾಡುತ್ತಿರುವುದನ್ನು ನೀವು ಒಪ್ಪಿಕೊಳ್ಳುತ್ತೀರಾ ? ಹೆಚ್.ಎಂ.ಟಿ. ಬಿ.ಹೆಚ್.ಇ.ಎಲ್. ಮುಂತಾದವುಗಳ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಲಿ. ಅದು ಇಲ್ಲಿ ಮಾತನಾಡುವ ವಿಷಯವೂ ಅಲ್ಲ, ನಮ್ಮ ರಾಜ್ಯಕ್ಕೆ ಪ್ರೊ. ತಿಮ್ಮಯ್ಯನವರು ಸಿಂಪೋಸಿಯಂಗೆ ಬಂದಿದ್ದರು. ಅವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದರು 'ಇಂಡಸ್ಟ್ರಿಗಳನ್ನು ತಮ್ಮ ಕಾಲಮೇಲೆ ನಿಂತುಕೊಳ್ಳುವ ರೀತಿಯಲ್ಲಿ ಬೆಳಸಬೇಕೆಂದು, ಸರ್ ಎಂ. ವಿಶ್ವೇಶ್ವರಯ್ಯನವರು ನಮ್ಮ ರಾಜ್ಯದಲ್ಲಿ ಮೊದಲು ಕೈಗಾರಿಕೆಗಳನ್ನು ಸ್ಥಾಪಿಸಿದವರು. ಇವೊತ್ತಿನ ದಿವಸ ಅವರಿಗೆ ಅಪಮಾನ ವಾಗುವ ರೀತಿಯಲ್ಲಿ ಹೇಳಿ ಪ್ರತಿಗಾಮಿ ನೀತಿಯನ್ನು ಸರ್ಕಾರ ತಾಳುತ್ತಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆ ನೀತಿಯನ್ನು ಮೊದಲು ತಾವು ಕೈಬಿಡಬೇಕು. ಅದರ ಬಗ್ಗೆ ಬೇರೆ ಟೈಮ್‌ನಲ್ಲಿ ಮಾತನಾಡುತ್ತೇನೆ. ಕೈಗಾರಿಕೆಗಳ ಸಂಬಂಧ ಬಹಳ ಚೆನ್ನಾಗಿದೆ ಎಂದು ಹೇಳುತ್ತಾರೆ. ಏನು ಚೆನ್ನಾಗಿದೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಮಗೆ ಕಾಂಪ್ಲಿಮೆಂಟ್ಸ್.

ಶ್ರೀ ಎಂ. ಎಸ್. ಕೃಷ್ಣನ್.—ಇಂಥ ತಪ್ಪು ಕಾಂಪ್ಲಿಮೆಂಟ್ಸ್ ಏತಕ್ಕೆ ? ಸ್ಟ್ರೈಕ್‌ಗಳು ಇವತ್ತಿನ ದಿವಸ ಕಡಿಮೆಯಾಗಿದೆ, ಲಾಕೌಟ್‌ಗಳು ಕಡಿಮೆಯಾಗಿವೆ, ಲೇಆಫ್ ಕಡಿಮೆಯಾಗಿವೆ, ವಿವಾದಗಳಿಲ್ಲ ಎನ್ನುವ ರೀತಿ ಹೇಳಿದ್ದಾರೆ. ಮಾನ್ಯ ಬೊಮ್ಮಾಯಿಯವರಿಗೆ ಈ ಇಲಾಖಾ ಬೇಡಿಕೆ ಬಂದಾಗ ಹೇಳುತ್ತೇನೆ. ಈಗ ಒಂದು ಮಾತ್ರ ಹೇಳುತ್ತೇನೆ. ಎಲ್ಲಾ ಹೇಳುವುದಕ್ಕೆ ಟೈಮಿಲ್ಲ. ಡಿಮ್ಯಾಂಡ್ಸ್ ಬಂದಾಗ ಹೇಳೋಣವಂತೆ. ಎಕನಾಮಿಕ್ ಸರ್ವೆಯ ಪೇಜ್ ೭೫ ಮತ್ತು ೮೯ರಲ್ಲಿ ಈ ವಿಚಾರ ಹೇಳಿದ್ದಾರೆ. ಪುಟ ೮೯ರಲ್ಲಿ 'ಇಂಡಸ್ಟ್ರಿಯಲ್ ರಿಲೇಷನ್ಸ್' ಎಂದು ಟೇಬಲ್ ಕೊಟ್ಟಿದ್ದಾರೆ. ಇದನ್ನು ಮೊದಲನೇ ಸಾರಿ ಕೊಟ್ಟಿದ್ದಾರೆ. ನಾನು ಅದಕ್ಕಾಗಿ ಅಪ್ರಿಷಿಯೇಟ್ ಮಾಡುತ್ತೇನೆ. ಆದರೆ ಬಜೆಟ್‌ನಲ್ಲಿ ಹೇಳಿರುವುದಕ್ಕೂ ಇಲ್ಲಿ ಬರೆದಿರುವುದಕ್ಕೂ ವ್ಯತ್ಯಾಸ ಇದೆ. ಸ್ಟ್ರೈಕ್‌ಗಳ ಬಗ್ಗೆ ಹೇಳುತ್ತಾ ೧೯೮೪–೮೫ರಲ್ಲಿ ೩೫, ೧೯೮೫–೮೬ರಲ್ಲಿ ೨೨, ೧೯೮೫–೮೬ರಲ್ಲಿ ಏಪ್ರಿಲ್ ೧೯೮೫ ರಿಂದ ನವೆಂಬರ್ ೧೯೮೫ ವರೆಗೆ ೧೦, ಏಪ್ರಿಲ್ ೧೯೮೬ ರಿಂದ ನವೆಂಬರ್ ೧೯೮೬ರ ವರೆಗೆ ೧೯ ಎಂದು ಹೇಳಿ ಕೊನೆಯಲ್ಲಿ ಪ್ಲಸ್ ೯೦ ಎಂದು ಹಾಕಿದ್ದಾರೆ. ಅಂದರೆ ಜಾಸ್ತಿಯಾಗಿದೆ ಎಂದು ಅರ್ಥ. ವರ್ಕರ್ಸ್ ಇನ್‌ವಾಲ್ವ್ಡ್ ೫.೮ ಸಾವಿರ, ೮.೩ ಸಾವಿರ ಎಂದು ಹೇಳಿ ಕೊನೆಯಲ್ಲಿ ಪ್ಲಸ್ ೪೩ ಎಂದು ನೀವೇ ಹಾಕಿದ್ದೀರಿ. ಮ್ಯಾನ್

ಡೇಸ್ ಲಾಸ್ಟ್ ಮೈನಸ್ ೫೯.೧೦ ಎಂದು ಹೇಳಿದ್ದಾರೆ. ಅಂದರೆ ಎಷ್ಟು ದಿನ ಸ್ಟ್ರೈಕ್ ಮಾಡಿದರೋ ಅಷ್ಟು ದಿನ ಕಡಿಮೆಯಾಗಿದೆ. ಸ್ಟ್ರೈಕ್ ಕಡಿಮೆಯಾಗಿಲ್ಲ. ಸ್ಟ್ರೈಕ್ ಬೇಕು ಎಂದು ಯಾರೂ ಮಾಡುವುದಿಲ್ಲ. ಲಾಕೌಟ್‌ಗಳು ಜಾಸ್ತಿಯಾಗಿವೆ. ಲಾಕೌಟ್‌ಗಳು ಪ್ಲಸ್ ೩೩.೩೩ ಆಗಿವೆ. ವರ್ಕರ್ಸ್ ಇನ್‌ವಾಲ್ವ್ಡ್ ಪ್ಲಸ್ ೨.೦೬.೬೭. ಮ್ಯಾನ್‌ಡೇಸ್ ಲಾಸ್ಟ್ ಮೈನಸ್ ೭೪.೯೧ ಎಂದು ಹೇಳಿದ್ದಾರೆ. ಲಾಕೌಟ್‌ಗಳು ಜಾಸ್ತಿಯಾಗಿವೆ. ಲೇಆಫ್ಸ್ ಪ್ಲಸ್ ೨೧.೪೩ ವರ್ಕರ್ಸ್ ಇನ್‌ವಾಲ್ವ್ಡ್ ಪ್ಲಸ್ ೨೦೪.೨೬, ಮ್ಯಾನ್ ಡೇಸ್ ಲಾಸ್ಟ್ ಪ್ಲಸ್ ೧೮೯.೨೬ ಎಂದು ಹೇಳಿದ್ದಾರೆ. ಲೇ ಆಫ್ ಮಾಡುವವರು ಮಾಲೀಕರು. ಲಾಕೌಟ್ ಮಾಡುವವರು ಮಾಲೀಕರು. ಹೀಗಿರುವಾಗ ಶಹಭಾಸ್‌ಗಿರಿ ಕೊಟ್ಟರೆ ಏನು ಪ್ರಯೋಜನ ? ಮಾಲೀಕ ಲಾಕೌಟ್ ಮಾಡಿ ಹೋಗುತ್ತಾನೆ. ಅದರ ಬಗ್ಗೆ ಏನೂ ಕಾರ್ಯಕ್ರಮ ಹಾಕಿಲ್ಲ. ಅವರನ್ನು ನೀವು ಹದ್ದುಬಸ್ತಿಗೆ ತರುತ್ತಿಲ್ಲ. ಮಾಲೀಕರನ್ನು ಹದ್ದುಬಸ್ತಿಗೆ ತರುವ ಹವ್ಯಾಸ ನಿಮಗೆ ಇಲ್ಲ. ಏತಕ್ಕೆ ಮಾತನಾಡುತ್ತೀರಿ ? ತಪ್ಪು ತಪ್ಪು, ಸುಳ್ಳು ಸುಳ್ಳು ಕ್ಲೈಮ್‌ಗಳನ್ನು ಮಾಡಿ ಬಚಾವ್ ಆಗುವುದು ಸರಿಯಲ್ಲ. ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳಬೇಕಾದರೆ ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತಿದೆ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಮುಖ್ಯ ಮಂತ್ರಿಗಳು ಮಾತನಾಡಿದ್ದಾರೆ. ಆದರೂ ಸಹ ವಿದ್ಯಾವಂತ ನಿರುದ್ಯೋಗಿಗಳು ಜಾಸ್ತಿಯಾಗುತ್ತಿದ್ದಾರೆ ಎಂದು ಹೇಳಿದ್ದಾರೆ. ಅದರಲ್ಲಿ ಅಂಕಿಅಂಶ ನೋಡಿದರೆ, ನಮ್ಮ ರಾಜ್ಯದ ವಿಷಯ ಮಾತನಾಡೋಣ. ಮೊದಲು, ಇವರು ಕೊಟ್ಟಿರುವ ಫಿಗರ್ಸ್ ಸಮರ್ಪಕವಾಗಿಲ್ಲ. ಬಹಳ ಜನ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜಿನಲ್ಲಿ ನೊಂದಾವಣೆ ಮಾಡುವುದಿಲ್ಲ. ಅಂಥವರೇ ಜಾಸ್ತಿ ಇದ್ದಾರೆ. ಇಲ್ಲಿಟರೇಟ್ಸ್ ಎಲ್ಲಿ ಹೋಗಿ ಮಾಡುತ್ತಾರೆ ? ಲಿಟರೇಟ್ಸ್‌ನಲ್ಲಿ ಎಲ್ಲರೂ ಹೋಗಿ ನೊಂದಾವಣೆ ಮಾಡುವುದಿಲ್ಲ. ಪುಟ ೧೩೬ ರಲ್ಲಿ ಕೊಟ್ಟಿರುವುದನ್ನು ನೋಡಿದರೆ ನಿರುದ್ಯೋಗ ಜಾಸ್ತಿಯಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಕಡಿಮೆಯಾಗಿದೆ ಎಂದು ಹೇಗೆ ಹೇಳುತ್ತೀರಿ ? ಎಕನಾಮಿಕ್ ಸರ್ವೆಯಲ್ಲಿ ಹೇಳಿದ್ದಾರೆ. ಕಡಿಮೆಯಾಗಿದೆ ಎಂದು ಹೇಗೆ ಒಪ್ಪಿಕೊಳ್ಳುವುದು ? ೧೩೬ನೇ ಪೇಜಿನಲ್ಲಿ 'Registrants on Live Register of Employment Exchange'' ಎಂದು ಕೊಟ್ಟಿದ್ದಾರೆ. ಇದರಲ್ಲಿ ೧೯೮೩-೮೪ ರಿಂದ ಪೋಸ್ಟ್ ಗ್ರಾಜುಯೇಟ್ಸ್, ಗ್ರಾಜುಯೇಟ್ಸ್, ಡಿಪ್ಲೊಮೋ ಹೋಲ್ಡರ್ಸ್. ಅಪ್ರೆಂಟೀಸ್. ಸರ್ಟಿಫಿಕೇಟ್ ಹೋಲ್ಡರ್ಸ್. ಮೆಟ್ರಿಕ್ಯುಲೇಟ್ಸ್, ಬಿಲೋ ಮೆಟ್ರಿಕ್ಯುಲೇಟ್ಸ್ ಎಲ್ಲಾ ಕೊಟ್ಟಿದ್ದಾರೆ. ನಾನು ಒಂದೊಂದೂ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಟೈಮಿಲ್ಲ. ಇದನ್ನು ಬೇಕಾದರೆ ತಾವು ನೋಡಿಕೊಳ್ಳಬಹುದು.

ಆದರೆ ಮುಖ್ಯವಾಗಿ ಟೋಟಲ್ ಆಗಿರುವುದನ್ನು ನೋಡಿದರೆ ಸಾಕಾಗುತ್ತದೆ. ೧೯೮೩-೮೪ರಲ್ಲಿ ೬೯೪-೫೮ ಸಾವಿರ ಜನ ರಿಜಿಸ್ಟ್ರೇಷನ್ ಮಾಡಿಸಿದ್ದರೆ ೧೯೮೪-೮೫ರಲ್ಲಿ ೭೪೩-೭೮ ಸಾವಿರ ಜನ ರಿಜಿಸ್ಟ್ರೇಷನ್ ಮಾಡಿಸಿದ್ದಾರೆ. ನಂತರ ೧೯೮೫-೮೬ರಲ್ಲಿ ೭೮೫-೫೮ ಸಾವಿರ ಜನ ರಿಜಿಸ್ಟ್ರೇಷನ್ ಮಾಡಿಸಿದ್ದಾರೆ. ೧೯೮೬-೮೭ರಲ್ಲಿ ೯೫೪-೪೪ ಸಾವಿರ ಜನ ರಿಜಿಸ್ಟ್ರೇಷನ್ ಮಾಡಿಸಿದ್ದಾರೆ. ನಂತರ ನವಂಬರ್ ತಿಂಗಳವರೆಗೆ ೧೦೬೬-೨೧ ಸಾವಿರ ಜನ ಎಂಪ್ಲಾಯಿಮೆಂಟ್ ಎಕ್ಸ್ಚೇಂಜಿನಲ್ಲಿ ಕೆಲಸಕ್ಕಾಗಿ ನೋಂದಣಿ ಮಾಡಿಸಿದ್ದಾರೆ. ಎಷ್ಟೋ ಜನ ಎಂಪ್ಲಾಯಿ ಮೆಂಟ್ ಎಕ್ಸ್ಚೇಂಜಿನಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟ್ರೇಷನ್ ಮಾಡಿಸುವುದೇ ಇಲ್ಲ. ಅನೇಕ ಜನ ಕೃಷಿ ಕಾರ್ಮಿಕರು ಯಾರೂ ಹೋಗಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟ್ರೇಷನ್ ಮಾಡಿಸುವುದೇ ಇಲ್ಲ. ಹಾಗೆ ನೋಡಿದರೂ ಕೂಡ ಪರಿಸ್ಥಿತಿ ಏನಾಗಿದೆ ಎಂದರೆ, ದೇಶದಾದ್ಯಂತ ಎರಡೂವರೆ ಕೋಟಿ ಜನ ನಿರುದ್ಯೋಗಿಗಳಾಗಿದ್ದಾರೆ. ನಮ್ಮ ರಾಜ್ಯದಲ್ಲೂ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ ಎಂದು ಹೇಳಬೇಕಾಗಿದೆ. The economic situtiom is not as strong as is made out to be. ಇದು ಒಂದು It is in the same crises as in the earlier years also. It is the same position in the all-India level also. ಎಂದು ಹೇಳ ಬೇಕಾಗುತ್ತದೆ ಇದರ ಜೊತೆಗೆ ಎಲ್ಲಾ ರೀತಿಯಲ್ಲೂ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಆದ್ದರಿಂದ ಎಲ್ಲರೂ ಕೊಡಬಹುದೆಂದು ಪ್ರಪೋಸಲ್ ಮಾಡಿದ್ದೇವೆಂದು ಹೇಳಿದ್ದಾರೆ. ಆ ಬಗ್ಗೆ ೧೬೫ ಕೋಟಿ ರೂ ಪಾಯಿಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಇದರ ಬಗ್ಗೆ ನಾನು ಮೊದಲೇ ಹೇಳಿದ್ದೇನೆ ತೆರಿಗೆಗಳನ್ನು ಜಾಸ್ತಿ ವಸೂಲು ಮಾಡುವುದು ಪ್ರಶ್ನೆಯಲ್ಲ ಕೆಲವು ತೆರಿಗೆಗಳನ್ನು ಒಪ್ಪಿಕೊಂಡರೂ, ಇದರಲ್ಲಿ ೩ ರೀತಿಯ ಐಟಮ್ಸ್‌ಗಳನ್ನಾಗಿ ಮಾಡಿದ್ದಾರೆ.

I now come to the area as taxation. My taxation policy has the following objectives.

(i) Contribute substantiall to the economic development of the State by encouraging growth in all spheres of activity

ಶ್ರೀ ಎಸ್. ಆರ್. ಬೊಮ್ಮಾಯಿ.—ಹೋದ ವರ್ಷದ ವಿಚಾರವನ್ನು ತಾವು ಹೇಳುವುದಾದರೆ, ೧೯೮೬–೮೭ರ ಸಾಲಿನಲ್ಲಿ ಸೇಲ್ಸ್ ಟ್ಯಾಕ್ಸ್ ರಿಯಾಯಿತಿಯನ್ನು ಕೊಟ್ಟಿದ್ದರಿಂದ ಹೆಚ್ಚು ವಸೂಲಾತಿಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ತೆರಿಗೆ ರಿಯಾಯಿತಿಯನ್ನು ಹೋದ ಸಾರಿ ಕೊಟ್ಟಿದ್ದೀರಿ.

It is a questionable. as I have already pointed out.

(ii) To collected more from those who have capacity to pay to ensure social justice.

That has not happened. That is what I pointed out.

(iii) Rationalisation and simplification of the tax structure,

ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳಿ ಅದರಲ್ಲಿ ಏನಾಗಿದೆ ಎಂದರೆ, ಕಾಫಿ, ಟೀ ಮೇಲೆ ತೆರಿಗೆಯನ್ನು ಹಾಕಿದ್ದೀರಿ ಇದನ್ನು ಯಾರ ಮೇಲೆ ಹಾಕಿದ್ದೀರಿ ? ಇದನ್ನು ಜನಸಾಮಾನ್ಯರು ಕುಡಿಯುವವರು ಅವರ ಮೇಲೂ ಟ್ಯಾಕ್ಸನ್ನು ಹಾಕಿದ್ದೀರಿ. ಕಾಫಿ, ಟೀಗೆ ೧೨ ಇದ್ದುದನ್ನು ೧೫ಕ್ಕೆ ಏರಿಸಿದ್ದೀರಿ. ಶ್ರೀಮಂತರ ಮೇಲೆ ತೆರಿಗೆಯನ್ನು ಹಾಕಿ ಅದಕ್ಕೆ ಯಾರೂ ಬೇಡಎನ್ನುವುದಿಲ್ಲ ಆದರೆ ಕಾಫಿ, ಟೀಯನ್ನು ಸಾಮಾನ್ಯ ಜನರು ಕುಡಿಯುತ್ತಾರೆ. ಅವರ ಮೇಲೂ ಹಾಕಿದ್ದೀರಿ ಇದನ್ನು ಯಾವ ಆಧಾರದ ಮೇಲೆ ಹಾಕಿದ್ದೀರೆಂಬುದು ನಮಗೆ ಅರ್ಥವಾಗುವುದಿಲ್ಲ. ಅದೇ ರೀತಿ ಫ್ಯೂಯಲ್ ಗ್ಯಾಸ್. ಇಂಡೇನ್, ಇದನ್ನು ಮಧ್ಯಮ ವರ್ಗದವರೇ ಹೆಚ್ಚು ಉಪಯೋಗಿಸುವಂತದ್ದು. ಅದನ್ನು ೧೦ ಇದ್ದುದನ್ನು ೧೫ ಕ್ಕೆ ಹೆಚ್ಚು ಮಾಡಿದ್ದೀರಿ ಅದೇ ರೀತಿ ಸಿಮೆಂಟ್ ಮತ್ತು ಜನ ನಿರೋಧಕ ಮಿಶ್ರಣಗಳು, ಸಿಮೆಂಟ್ ಶೀಟುಗಳು, ಅಸ್‌ಬೆಸ್ಟಾಸ್ ಶೀಟುಗಳು, ಗ್ಲಾಸ್ ಶೀಟುಗಳು, ಇವುಗಳ ಮೇಲೆಲ್ಲಾ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಅದೇ ರೀತಿ ಟಾಯಿಲೆಟ್ ಸೋಪುಗಳು, ಇದರ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ, ಇದನ್ನು ನೋಡಿದರೆ. Really it is not a people·s budget. It is an anti-perople's budget. ಎಂದು ಹೇಳಬೇಕಾಗುತ್ತದೆ ಜೊತೆಗೆ ಬಡ ಜನರು ಯಾವ ವಸ್ತುವನ್ನು ಉಪಯೋಗಿಸುತ್ತಾರೋ ಅದರ ಮೇಲೆ ತೆರಿಗೆಯನ್ನು ಹಾಕಿದ್ದೀರಿ ಸಿಮೆಂಟ್ ಶೀಟಿನ ಮೇಲೆ ತೆರಿಗೆಯನ್ನು ಏಕೆ ಜಾಸ್ತಿ ಮಾಡಿದ್ದೀರಿ ? This is an year of shelter for the homeless. 1987 is supposed to be a year for the shelter of the homeless. ಯು. ಎನ್.ಓ.ರವರು ಮಾಡಿದ್ದಾರೆ ಸಾಮಾನ್ಯ ಜನರು ವಸತಿಯನ್ನು ಒದಗಿಸಿಕೊಳ್ಳುವುದಕ್ಕೆ ಉಪಯೋಗಿಸುವಂತಹ ಉಪಕರಣಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ, You have not given any imporatance for this most important year. The Slum clearance Board is really not clearing slums.

ಇನ್ನು ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹಣ ಬಹಳ ಕಡಿಮೆ ಇಟ್ಟಿದ್ದೀರಿ. ಸ್ಲಮ್ ಕ್ಲಿಯರೆನ್ಸ್ ಎಂದರೆ ಬರೀ ಸ್ಲಮ್‌ನ್ನು ಒಡೆದು ಹಾಕುವುದಲ್ಲ. ನಮ್ಮ ಏರಿಯಾದಲ್ಲೂ ಒಡೆಯಲು ಬಂದಿದ್ದಾಗ ನಾನು ವಿರೋಧ ಮಾಡಿದ್ದೇನೆ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹೇಳುವುದಾದರೆ ಬಾಂಬೆನಲ್ಲಿ ಇರುವ ಪೇಮೆಂಟ್ ಡ್ವೆಲ್ಲರ್ಸ್‌ಗೂ ತೆಗೆಯಲು ಹಕ್ಕು ಇಲ್ಲ ಎಂದಾಯಿತು. ಅದರ ಬಗ್ಗೆ ಚರ್ಚೆ ಮಾಡಲು ನಾನು ಹೋಗುವುದಿಲ್ಲ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹೆಚ್ಚು ಹಣವನ್ನು ಎಷ್ಟು ಹಣವನ್ನು ಇಡಬೇಕೋ ಅಷ್ಟು ಇಟ್ಟಿಲ್ಲ. ಇವತ್ತು ಲಿಕ್ಕರ್ಸ್ ಬಗ್ಗೆ ಏನು ತೆರಿಗೆ ಹಾಕಿದ್ದೀರಿ ಅದಕ್ಕೆ ಸಂತೋಷ

ಅಧ್ಯಕ್ಷರು.—೩೫ ನಿಮಿಷಗಳಾದವು.

ಶ್ರೀ ಎಂ. ಎಸ್. ಕೃಷ್ಣನ್ —ಪುಟ ೬೦ರಲ್ಲಿ ತೆರಿಗೆ ವಿಧಿಸಲು ಉದ್ದೇಶಿಸಲಾದ ಸರಕುಗಳ ಬಗ್ಗೆ ಹೇಳಿದ್ದೀರಿ. ಇದರಲ್ಲಿ ಐಸ್‌ಕ್ರೀಮ್‌ಗೆ ೫ ಪರ್ಸೆಂಟ್ ಹಾಗೂ ಭತ್ತಕ್ಕೆ ೨ ಪರ್ಸೆಂಟ್ ಹಾಕಿದ್ದೀರಿ. ಇದು

ಸರಿಯಲ್ಲ ಹಾಗೆ ಇನ್ನೊಂದು ವಿಷಯವನ್ನು ಮರೆಯುವ ಹಾಗೆ ಇಲ್ಲ ಜನತಾ ಪಕ್ಷ ಅಧಿಕಾರಕ್ಕೆ ಬರುವಾಗ ತನ್ನ ಪ್ರಣಾಳಿಕೆಯಲ್ಲಿ ಪ್ರೊಫೆಶನಲ್ ಟ್ಯಾಕ್ಸ್ ಅಬಾಲಿಸ್ ಮಾಡುತ್ತೇವೆಂದು ಹೇಳಿತ್ತು. ಆದರೆ ಈಗ ಇರುವುದನ್ನು ಜಾಸ್ತಿ ಮಾಡಲು ಹೊರಡಿಸಿದ್ದೀರಿ. ಇದನ್ನು ಕೊಡುವವರು ಯಾರು ?

ಶ್ರೀ ಬಿ. ಬಸವಲಿಂಗಪ್ಪ.—ಇವರು ಅಧಿಕಾರಕ್ಕೆ ಬಂದದ್ದು ಯಾವಾಗ ?

ಶ್ರೀ ಎಂ. ಎಸ್. ಕೃಷ್ಣನ್.—೧೯೮೩ ರಲ್ಲಿ

ಶ್ರೀ ಬಿ. ಬಸವಲಿಂಗಪ್ಪ.—ಈಗ ಎಷ್ಟು ವರ್ಷಗಳಾದವು ?

ಶ್ರೀ ಎಂ. ಎಸ್. ಕೃಷ್ಣನ್.—೪ ವರ್ಷಗಳಾದವು.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೇ ಇನ್ನೂ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್,—ನೀವು ಅಧಿಕಾರದಲ್ಲಿ ಇದ್ದಾಗಲೂ ಅದೇ ರೀತಿ ಮಾಡಿದ್ದುದು.

ಶ್ರೀಬಿ. ಬಸವಲಿಂಗಪ್ಪ.—ಈಗ ಅವರು ಏನು ಮಾಡಿದ್ದಾರೆ ಎಂಬ ಬಗ್ಗೆ ಚರ್ಚೆ ಮಾಡಬೇಕಾಗಿದೆ ನಾವು ಆಗ ಹಾಗೆ ಮಾಡಿದ್ದರಿಂದ ಈ ಕಡೆ ಬಂದು ಕುಳಿತಿದ್ದೇವೆ. ಈಗ ಅವರೂ ಈ ಕಡೆ ಬರಬೇಕೇ ?

ಶ್ರೀ ಎಂ. ಎಸ್. ಕೃಷ್ಣನ್.—ದುರಾದೃಷ್ಟವಶಾತ್ ನಾನು ಇಲ್ಲೇ ಕುಳಿತು ಇಬ್ಬರ ಆಡಳಿತ ವೈಖರಿಯನ್ನೂ ನೋಡಿದ್ದೇನೆ. ಈಗ ಪ್ರಶ್ನೆ ಏನೆಂದರೆ, ಈ ಪ್ರೊಫೆಷನಲ್ ಟ್ಯಾಕ್ಸ್ ಹೆಚ್ಚು ಮಾಡಿಗುವುದು ಅಕ್ಷಮ್ಯ ಅಪರಾಧ ಮೊದಲು ಸ್ಯಾಲರಿ ಎಂದು ಇದ್ದದ್ದು ಈಗ ಗ್ರಾಸ್ ಸ್ಯಾಲರಿ ಎಂದು ಮಾಡಿದ್ದೀರಿ. He has clearly made it as 'Gross'. He wants to have a wider net.

ಇದು ಸರಿಯಲ್ಲ ತಾವು ಹೇಳುವುದಕ್ಕೂ, ಕೃತಿಗೆ ತರುವುದರಲ್ಲಿಯೂ ಸಂಬಂಧವನ್ನೇ ಇಟ್ಟುಕೊಂಡಿಲ್ಲ. ದಯಮಾಡಿ ಈ ವೃತ್ತಿ ತೆರಿಗೆಯನ್ನು ಕೈಬಿಡಿ. Janata Government has now become, I think, a supporter or henchman or call whatever you like of the hotel lobby. ಈ ಹೋಟೆಲ್ ಲಾಬಿಗೆ ತಾವು ತಲೆಬಾಗುತ್ತಿದ್ದೀರಿ ಹಿಂದಿನಿಂದ ನಡೆದು ಬಂದ ಎಲ್ಲಾ ವಿಷಯಗಳನ್ನೂ ನೋಡಿದರೂ ಈ ಹೋಟಿಲಿನವರಿಗೆ ಹೆಚ್ಚು ಅನುಕೂಲವನ್ನು ಮಾಡಿಕೊಟ್ಟಿದ್ದೀರಿ. ಇದನ್ನೆಲ್ಲಾ ಏಕೆ ಕೊಡಬೇಕು ? ಇವೊತ್ತು ಒಂದು ಕಡೆ ಕಾಫಿ ಮತ್ತು ಟೀಗೆ ಹೆಚ್ಚು ಮಾಡಿ ಈ ಹೋಟೆಲು ಲಾಬಿಗೆ ಅನುಕೂಲ ಮಾಡುತ್ತೀರಿ. ಇವರು ಜನತಾ ಪಾರ್ಟಿ ಫಂಡಿಗೆ ಏನಾದರೂ ಕೊಟ್ಟರೇ ? ಕೊಟ್ಟಿದರೂ ಕೊಟ್ಟಿರ ಬಹುದು.

ಅಧ್ಯಕ್ಷರು.—ಶ್ರೀ ಕೃಷ್ಣನ್ ಅವರೇ ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಎಂ ಎಸ್. ಕೃಷ್ಣನ್.—ಮೊದಲ ಬಾರಿಗೆ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ತಂದಿದ್ದೀರಿ ಇವತ್ತು ಶ್ರೀಮಂತ ರೈತರಿಗೆ ತೆರಿಗೆ ಹಾಕುವುದು ಬೇಡ ಎಂದು ನಾನು ಹೇಳುವುದಿಲ್ಲ. ದಯವಿಟ್ಟು ಇದನ್ನು ಬಡವರ ಮೇಲೆ ಹಾಕಬೇಡಿ. ಇನ್ನು ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಮೊನ್ನೆ ರಾಜೀವ್ ಗಾಂಧಿಯವರು ಮಂಡನೆ ಮಾಡಿದ ಬಡ್ಜೆಟ್‌ಗೂ ಈ ಬಡ್ಜೆಟ್‌ಗೂ ತಾಳೆ ಮಾಡಿ ನೋಡಿದರೆ, ಎಲ್ಲೋ ಕೆಲವು ವಿಷಯಗಳ ಬಗ್ಗೆ ಅವರು ಮಾಡುವುದನ್ನು ತಿಳಿದುಕೊಂಡು ನೀವೂ ಮಾಡಿದ್ದೀರಿ ಎಂದೆನ್ನಿಸುತ್ತದೆ. ಹೋಟೆಲಿನವರ ಬಗ್ಗೆ ಇವರೂ ಹೇಳುತ್ತಾರೆ, ಅವರೂ ಹೇಳುತ್ತಾರೆ.

ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ ಹೀಗೆ ಜನಗಳ ಮೇಲೆ ತೆರಿಗೆಗಳನ್ನು ಹೊರಿಸುವುದನ್ನು ಬಿಟ್ಟು ಬಿಡಿ, ಪ್ರೊಫೆಷನಲ್ ಟ್ಯಾಕ್ಸ್ ಹಾಕಿರುವುದು ಸರಿಯಲ್ಲ. ಹೆವಿ ಟ್ಯಾಕ್ಸ್ ಹಾಕಿರುವುದು ಸರಿಯಾದುದಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಲ್ಲದೆ. ಏನೇನು ಮಾಡುತ್ತೇವೆ ಎನ್ನುವ ಪಟ್ಟಿಯನ್ನು ಕೊಟ್ಟಿದ್ದಾರೆ. ಕಳೆದ ವರ್ಷ ಏನು ಮಾತನಾಡಿದ್ದಾರೆ, ಈ ವರ್ಷ ಕೂಡ ಮುಕ್ಕಾಲುಭಾಗ ಅದೇ ಮಾತನ್ನು ಹೇಳಿದ್ದಾರೆ. ಅರ್ಥ ಏನೆಂದರೆ ಹೊಸದಾಗಿ ಏನೋ ಹೇಳುತ್ತಾರೆಂದು ತಿಳಿದುಕೊಳ್ಳುತ್ತಾರೆಂದು ನೀವು ತಿಳಿದುಕೊಂಡಿರಬಹುದು. ನಾವು ಹಿಂದಿನದನ್ನು ಮರೆಯುವ ಜನ ಅಲ್ಲ. ಅಲ್ಲಿ ರಾಜೀವಗಾಂಧಿಯವರು ೨೦೦೦ ಇಸವಿಯ ಹೊತ್ತಿಗೆ ಏನೇನೋ ಮಾಡುತ್ತೇವೆಂದು ತೋರಿಸುತ್ತಾರೆ. ನೀವು ಕೂಡ ೨೦೦೦ ಇಸವಿಯ ಹೊತ್ತಿಗೆ ಏನೇನೋ ಮಾಡುತ್ತೇ

ಮೆಂದು ತೋರಿಸುತ್ತಿದ್ದೀರಿ, This is not a budget in favour of the common man. This definitely leads to price increase ; this leads to increaing crisis in the industry, this leads to more and more economic difficulties for the people and increased inflation and also increased taxtion. ಅದನ್ನು ಕೈಬಿಡಬೇಕು. ಬೇರೆ ರೀತಿಯಲ್ಲಿ ತಾವು ರಾಜ್ಯವನ್ನು ತೆಗೆದುಕೊಂಡು ಹೋಗಬೇಕು. ಶ್ರೀಮಂತರ ಮೇಲೆ ತೆರಿಗೆಗಳನ್ನು ಹಾಕಿ. ಬಡವರ ಮೇಲೆ ಹಾಕುವುದು ಸರಿಯಲ್ಲ, ಇಷ್ಟು ಹೇಳಿ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಶ್ರೀ ಎಸ್. ಎಸ್. ಕಡಪಟ್ಟಿಯವರು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ.—ಖರ್ಗೆ.—ನಮಗೇನು ಡಾಕ್ಯುಮೆಂಟ್ಸ್ ಕೊಟ್ಟಿದ್ದೀರಿ ಅದರಲ್ಲಿ ಮಹತ್ವವಾದ ಡಾಕ್ಯುಮೆಂಟ್ ಫಿಚ್ಚರ್ ಆಫ್ ಕರ್ನಾಟಕ ಅದು ಇಲ್ಲ.

ಅಧ್ಯಕ್ಷರು ಕಳೆದ ಸಾರಿಯೂ ಸಹ ಕೊಟ್ಟಿಲ್ಲ. ಮಾನ್ಯ ಬೊಮ್ಮಾಯಿಯವರೇ ಅದು ಇತ್ತು ಅಂದರೆ ಫೈನಾನ್ಸಿಯಲ್ ಪೋಸಿಷನ್ ಗೊತ್ತಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಕಾನಮಿಕ್ ಸರ್ವೆ ಅದರಲ್ಲಿ ಬರುತ್ತದೆ.

ಅಧ್ಯಕ್ಷರು.—ನಾಳೆ ನಾಡಿದ್ದರಲ್ಲಿ ತರಿಸುತ್ತೇನೆ. ನಿಮಗಿಂತ ನನಗೆ ಅದರ ಬಗ್ಗೆ ಆಸಕ್ತಿಯಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಡ್ಜೆಟ್ ಭಾಷಣದ ಮೇಲೆ ಮಾತನಾಡಬೇಕಾದರೆ ಪಿಚ್ಚರ್ ಅಫ್ ಕರ್ನಾಟಕ ಅದು ಬೇಕಾಗುತ್ತದೆ. ಅದು ಇಲ್ಲದಿದ್ದರೆ ಕಂಪ್ಯಾರಿಟೀವ್ ಮಾಡಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ನೀವು ಮೊದಲೇ ಕೇಳಬೇಕಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊಡುವುದು ಅವರ ಕರ್ತವ್ಯ. ಅದು ಇದ್ದರೆ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗಾದರೆ ಅವರು ಕೊಟ್ಟಮೇಲೆ ಭಾಷಣ ಶುರು ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೋದ ವರ್ಷ ಕೂಡ ಮಾರಬಿಟ್ಟು ಕೊಟ್ಟಿದ್ದೇವೆ. ಆದಷ್ಟು ಬೇಗ ಕೊಡುತ್ತೇವೆ.

ಅಧ್ಯಕ್ಷರು.—ಕೊಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕೂಡ ಅವರ ಪರವಾಗಿಬಿಟ್ಟಿರಿ.

ಅಧ್ಯಕ್ಷರು.—ಹಾಗೇನೂ ಇಲ್ಲ.

ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ್)—ಮಾನ್ಯ ಅಧ್ಯಕ್ಷರೆ, ೧೯೮೭–೭೮ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತ ಮಾಡುತ್ತಾ ನಾನು ಕೆಲವೊಂದು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಕಡಪಟ್ಟಿಯವರಿಗೆ ಕನ್ನಡಿಯೊಳಗಿನ ಗಂಟು. ಮಾನ್ಯ ಮುಖ್ಯಮಂತ್ರಿಗಳು ಹಾಗೂ ದೇವೇಗೌಡರು ಹಾಗೆ ಮಾಡುತ್ತಿದ್ದಾರೆ.

ಶ್ರೀ ಎಸ್. ಎಸ್. ಕಡಪಟ್ಟಿ. ನಿಮಗಿಂತ ಇವರು ಸ್ವಲ್ಪ ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನೀವು ಮೊದಲು ಕಡಪಟ್ಟಿಯವರ ಭಾಷಣ ಕೇಳಿ, ಆಮೇಲೆ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ನಾವು ಅವರಿಗೆ ಎಚ್ಚರಿಕೆ ಕೊಡುತ್ತಿದ್ದೇವೆ.

ಶ್ರೀ ಎಸ್. ಎಸ್. ಕಡಪಟ್ಟಿ.—ನಿಮ್ಮ ಎಚ್ಚರಿಕೆ ನಮಗೆ ಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಆ ಕಡೆ ಇದ್ದು ಪ್ರಯೋಜನವಾಗಲಿಲ್ಲ. ೨೦೦೦ ಇಸವಿಯ ಹೊತ್ತಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಸಾಧ್ಯವಾದರೆ ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆಂದು

ಹೇಳಿದ್ದಾರೆ. ನಿಮ್ಮ ನಮ್ಮ ಪ್ರಯತ್ನ ಈ ಬಡ್ಜೆಟ್ ಭಾಷಣವನ್ನು ನೋಡಿದಾಗ ಪ್ರಯೋಜನ ಇಲ್ಲದಹಾಗೆ ಆಯಿತು.

† ಶ್ರೀ ಎಸ್. ಎಸ್. ಕಡಪಟ್ಟಿ.—ನಮ್ಮ ನಿಮ್ಮ ಪ್ರಯತ್ನ, ಜನರ ಸಹಕಾರ ನಿಮ್ಮ ಸಲಹೆ ಬೇಕು, ಅದನ್ನು ತೆಗೆದುಕೊಂಡು ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ನಾವು ಕೂಡಿ ಕೆಲಸ ಮಾಡೋಣ. ಬಡ್ಜೆಟ್ ಅಂದರೆ ಅಮೇರಿಕದ ಅಧ್ಯಕ್ಷರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ ನಮ್ಮ ಮನೆತನದ ಬಡ್ಜೆಟ್‌ನ್ನು ಯಾವರೀತಿ ಮಾಡುತ್ತೇವೆ ಆ ರೀತಿಯಲ್ಲಿ ಈ ದೇಶದ ಬಡ್ಜೆಟ್, ರಾಜ್ಯದ ಬಡ್ಜೆಟ್‌ನ್ನು ಮಾಡಲಿಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ಸರಿಯಾಗುತ್ತದೆ ಎನ್ನುವುದು ನನ್ನ ಜ್ಞಾಪಕಕ್ಕೆ ಬರುತ್ತಿದೆ

ಈ ದೃಷ್ಟಿಯಲ್ಲಿ ಈಗ ಮೊಬಿಲೈಸೇಶನ್ ಆಫ್ ಅಡಿಶನಲ್ ರಿಸೋರ್ಸಸ್ ಬಗ್ಗೆಯಾಗಲೀ, ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಣಕಾಸಿನ, ಸಂಪನ್ಮೂಲಗಳ ಕ್ರೋಢೀಕರಣ ಮಾಡಲಿಕ್ಕೆ, ಏನು ತೊಂದರೆಗಳು ಇದ್ದರೂ ಕೂಡ ಕಳೆದ ನಾಲ್ಕು ವರ್ಷಗಳಲ್ಲಿ ಬರಗಾಲದ ಬವಣೆಯಿಂದ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆಯಾಗಿ ಹಾಗೂ ನಮ್ಮ ಬೆಳೆ ಬರುವುದಕ್ಕೆ ಕಡಿಮೆಯಾಗಿ ಇದರಿಂದ ಬರುವಂಥ ಆದಾಯ ಕೂಡ ಕಡಿಮೆಯಾಗಿ ಏನು ಕಷ್ಟವಾಗಿತ್ತು ಎಂದು ನಮಗೆ ಗೊತ್ತಾಗಿದೆ ಈ ಹಿನ್ನೆಲೆಯನ್ನು ಇಟ್ಟುಕೊಂಡು ಹೆಚ್ಚಿನ ಹಣಕಾಸಿನ ಸಂಗ್ರಹಣೆಗಾಗಿ ಪ್ರಾಮಾಣಿಕವಾದ ಪ್ರಯತ್ನಮಾಡಿ ಅದರಲ್ಲೂ ಕೂಡ ಯಾವ್ಯಾವುದು ಕಡಿಮೆ ಮಾಡಲಿಕ್ಕೆ ಶಕ್ಯವಾಗುತ್ತದೆ ಅದನ್ನು ಮಾಡಿ ಜನರಿಗೆ ಅನುಕೂಲ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ಕೈ ಮಗ್ಗದ ನೇಕಾರರಿಗೆ ನೂಲಿನ ಟ್ಯಾಕ್ಸನ್ನು ಕಡಿಮೆ ಮಾಡಿದ್ದಾರೆ. ಅದನ್ನು ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಕೃಷ್ಣನ್ ಅವರು ಹೇಳಬಹುದು ಎಂದು ನಾನು ಆಸೆ ಮಾಡಿದ್ದೆ. ಅದನ್ನು ಅವರು ಸ್ವಾಗತ ಮಾಡಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವನ್ನು ಸ್ವಾಗತ ಮಾಡಿದ್ದೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ನಮ್ಮ ಮಾನ್ಯ ವಿರೋಧಪಕ್ಷದ ಧುರೀಣರು ಇಲ್ಲಿ ಮಾಡಬೇಕಾದ ಕೆಲಸ ಮಾಡುವುದು ಬಿಟ್ಟು ಬರೀ ಕೇಂದ್ರದ ಮೇಲೆ ಬೊಟ್ಟು ಮಾಡುವ ಚಟವನ್ನು ಬೆಳೆಸಿ ಕೊಂಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ನಾವು ಎಲ್ಲದಕ್ಕೂ ಕೇಂದ್ರದ ಕಡೆಗೆ ಬೊಟ್ಟು ಮಾಡಿ ತೋರಿಸಿಲ್ಲ. ಈ ರಾಜ್ಯದಲ್ಲಿ ೧೯೭೯–೮೦ ರಲ್ಲಿ ಹಾಗೂ ೧೯೮೪–೮೫ರಲ್ಲಿ ಕೇಂದ್ರ ಕರ್ನಾಟಕದಲ್ಲಿ ಯಾವರೀತಿ ಹಣ ತೊಡಗಿಸಿದೆ ಎನ್ನುವುದರ ಬಗ್ಗೆ ನೋಡಿದರೆ, ಅದು ಹಿಂದೆ ೪.೧ ಇದ್ದದ್ದು ಈಗ ೨.೮ ಆಗಿದೆ. ನಮ್ಮ ವಿರೋಧಿ ನಾಯಕರಾಗಲೀ. ಅಥವಾ ಮಾನ್ಯ ಹಿರಿಯ ಸದಸ್ಯರಾಗಲೀ ಇನ್ನಾದರೂ ಸ್ವಲ್ಪ ಕೇಂದ್ರಕ್ಕೆ ಒತ್ತಾಯಮಾಡಿ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿ ಸಮೃದ್ಧವಾದ ಈ ನಾಡನ್ನು ಕಟ್ಟಲಿಕ್ಕೆ ಸಹಾಯ ಮಾಡಬೇಕು ಮತ್ತು ಕೇಂದ್ರ ಕರ್ನಾಟಕದಲ್ಲಿ ತೊಡಗಿಸಿರುವ ಹಣ ಕಡಿಮೆ ಎಂದು ತೋರಿಸುವುದು ತಪ್ಪೆ ? ಇದರ ಬಗ್ಗೆ ಅಂಕಿ ಅಂಶಗಳನ್ನು ಹೇಳುವುದು ತಪ್ಪೇನು ? ಇದನ್ನು ಏತಕ್ಕೆ ,ಹೇಳುತ್ತಿದ್ದೇನೆ ಎಂದರೆ, ನಮ್ಮ ಮಾನ್ಯ ಪ್ರಧಾನ ಮಂತ್ರಿಗಳು ಅನೇಕ ರಾಜ್ಯಗಳಿಗೆ ಪ್ರವಾಸ ಹೋದಾಗ ಇನ್ನೂರು ಕೋಟಿ, ಸಾವಿರ ಕೋಟಿ ಕೊಡುತ್ತೇನೆ ಎಂದು ಸ್ಪಾಟ್ ಸ್ಯಾಂಕ್ಷನ್ ಮಾತನ್ನು ಹೇಳಿದ್ದಾರೆ. ಆದರೆ ಅವರು ಕರ್ನಾಟಕಕ್ಕೆ ಎರಡು ಸಲ ಬಂದಾಗಲೂ ಕೂಡ ಕರ್ನಾಟಕದಲ್ಲಿದ್ದ ವಿದ್ಯುಚ್ಛಕ್ತಿ ಕೊರತೆ ಹಾಗೂ ಕರ್ನಾಟಕದ ಬರಗಾಲದ ಬವಣೆಯು ಅವರ ನಜರಿಗೆ ಬರಲಿಲ್ಲವೋ ಅಥವಾ ಮಂತ್ರಿಗಳಾಗಲೀ ಸರ್ಕಾರವಾಗಲೀ ಅವರ ಮನಸ್ಸನ್ನು ಗೆಲ್ಲಲಿಕ್ಕೆ ವಿಫಲರಾಗಿದ್ದಾರೋ ಗೊತ್ತಿಲ್ಲ. ವಿದ್ಯುಚ್ಛಕ್ತಿಗಾಗಿ ನಾವು ಪರದಾಡತಕ್ಕಂಥ ಪ್ರಸಂಗ ಇದ್ದಾಗ ಅದಕ್ಕೆ ಎರಡುನೂರು ಕೋಟಿ ನಾಲ್ಕುನೂರು ಕೋಟಿ ಕೊಡುತ್ತೇನೆ ಎಂದು ಹೇಳಲಿಲ್ಲ. ಬೇರೆ ರಾಜ್ಯಗಳಲ್ಲಿ ನಿಂತ ಕ್ಷಣದಲ್ಲೇ ಎಷ್ಟು ಕೊಡುತ್ತೇನೆ ಎಂದು ಹೇಳುತ್ತಿದ್ದವರು ಇಲ್ಲಿ ಅದನ್ನು ಏಕೆ ಹೇಳಲಿಕ್ಕೆ ಅವರು ಬಿಟ್ಟರೋ, ಅಥವಾ ಅವರ ಮನಸ್ಸನ್ನು ಗೆಲ್ಲಲಿಕ್ಕೆ ನಮ್ಮ ಮುಖ್ಯಮಂತ್ರಿಗಳಾಗಲೀ. ಸರ್ಕಾರವಾಗಲೀ ವಿಫಲರಾದರೋ ನನಗೆ ಅರ್ಥವಾಗಿಲ್ಲ. ಈಗ ವಿರೋಧ ಪಕ್ಷದ ಮಾನ್ಯ ಉಪನಾಯಕರು ನೀರಾವರಿ ಬಗ್ಗೆ ಹೇಳಿದರು.

2–30 P. M.

If we are unable to do so. we will propertionately cut the outlay on major and medium irrigation projects ಎಂದು ಇದು ನಿಜವಾಗಿ ಹೇಳಬೇಕೆಂದರೆ ಈರೀತಿಯಲ್ಲಿ ಇದು ಬರಬಾರದಾಗಿತ್ತು, ಮಾನ್ಯ ಮುಖ್ಯಮಂತ್ರಿಗಳು ೧೯೮೩ರಲ್ಲಿ I shall retain planning and Finance with me and I shall give priority for irrigation and electricty. ಎಂದು ಹೇಳಿದ್ದಾರೆ. ಎಂದರೆ, ಅವರು ೧೯೮೩ರಲ್ಲಿ ಏನು ಮಾತನಾಡಿದ್ದರು, ಆ ಮಾತಿಗೆ ವ್ಯತಿರಿಕ್ತವಾಗಿ ನಡೆಯದೇ ಹೋದರೂ, ಯಾವ ಒಂದು ಸ್ಪಿರಿಟ್‌ನಲ್ಲಿ ಅವರು ಹೇಳಿದ್ದರೋ, ಆ ಒಂದು ಸ್ಪಿರಿಟ್‌ನಲ್ಲಿ ಇವತ್ತು ನಡೆಯುತ್ತಿಲ್ಲವೆಂದು ಹೇಳಬೇಕಾಗುತ್ತದೆ, ಮಾನ್ಯ ದೇವೇಗೌಡರು ಅಂಕಿಅಂಶಗಳನ್ನು ಚೆನ್ನಾಗಿ ಹೇಳುತ್ತಾರೆ. ಆದರೆ ಅವೆಲ್ಲವೂ ಕಾರ್ಯರೂಪದಲ್ಲಿ ಆಗಬೇಕು. ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಪ್ರಿಯಾರಿಟಿ ಕೊಡಬೇಕೆಂದು ಶಾಸಕಾಂಗದ ಸಭೆಯಲ್ಲಿ ಒಂದು ಮಾತು ಹೇಳಿದ್ದಾರೆ. ಆ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ, people of Karnataka will curse us. ನಾವು ಸಮೃದ್ಧಿವಾದ ನಾಡನ್ನು ಕೊಡುವುದಕ್ಕೆ. ಪ್ರಾಮಾಣಿಕವಾದ ಪ್ರಯತ್ನ ಮಾಡುವುದಕ್ಕೆ ವಿಫಲರಾಗಿದ್ದೇವೆಂದು ಮುಂದಿನ ಜನಾಂಗವೂ ನಮ್ಮನ್ನು ಶಪಿಸಬೇಕಾಗುತ್ತದೆ.

ಇನ್ನು ಪ್ಲಾನ್ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನ್ನು ಹತೋಟಿಯಲ್ಲಿ ತರಬೇಕು. ನಾನ್ ಪ್ಲಾನ್ ಖರ್ಚನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾಡಬೇಕು. ಅವರು ಏನೊಂದು ಮಾತುಕೊಟ್ಟಿದ್ದಾರೆ, ಅದರಂತೆ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಪ್ರಿಯಾರಿಟಿ ಕೊಟ್ಟು ಕಾರ್ಯಪ್ರವೃತ್ತರಾಗಬೇಕು. ನಿಶ್ಚಿತವಾಗಿ ಕೃಷ್ಣಾ ನದಿಯ ನೀರನ್ನಾಗಲೀ, ಕಾವೇರಿ ನದಿಯ ನೀರನ್ನಾಗಲೀ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ವಿದ್ಯುಚ್ಛಕ್ತಿ ಕೊರತೆಯು ಕನಿಷ್ಟ ಪಕ್ಷ ಮೂರು ವರ್ಷಗಳಲ್ಲಾದರೂ ಕಡಿಮೆ ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬೇಕೋ. ಆ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು. Phase-wise programme and yearly target should be fixed and strict monittering should also be done. ಇಲ್ಲದೇ ಹೋದರೆ ಸುಮ್ಮನೇ ಒಂದು ಹನಿ ನೀರನ್ನೂ ಬಿಡುವುದಿಲ್ಲವೆಂದು ಹೇಳಿದರೆ ಪ್ರಯೋಜನ ವಿಲ್ಲದಂತಾಗುತ್ತದೆ. ತೆಲುಗು ಗಂಗಾ ಯೋಜನೆ ಬಗ್ಗೆಯೂ ಕೂಡ ನಮ್ಮ ಸರ್ಕಾರದ ತಾಕತ್ತು, ಶಕ್ತಿ ತೋರಿಸಿ, ಕಾರ್ಯಪ್ರವೃತ್ತರಾದರೆ ಮಾತ್ರ ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ, ಏನು ಬಹಳಷ್ಟು ಜನ "ಐ ವಾಷ್" ಎಂದು ಹೇಳುತ್ತಾರೋ ಆ ದೃಷ್ಟಿಯಲ್ಲಿ ಆಗಬಾರದೆಂದು ಹೇಳುತ್ತೇನೆ.

ಇನ್ನು ಟ್ಯಾಕ್ಸ್-ಎಂಟ್ರಿ ಟ್ಯಾಕ್ಸ್ ಬಗ್ಗೆ ಕೆಲವು ಸಲಹೆ ಸೂಚನೆಗಳನ್ನು ಕೊಡಬಯಸುತ್ತೇನೆ, It need not be a single point. It should be a multi-point and uniformally levied either at 4% or which ever is feasible. ಅಂದರೆ ಸಿಂಗಲ್ ಪಾಯಿಂಟ್ ಮಾಡಿದರೆ ಬಹಳ ಕಷ್ಟವಾಗುತ್ತದೆ. ಇನ್ನು ಬುಲಿಯನ್ ಬಗ್ಗೆ ಹೇಳುವುದಾದರೆ, ಹಳೇ ಬಂಗಾರವನ್ನೆಲ್ಲಾ ಕರಗಿಸಿ ಮಾಡುವಂಥಾದ್ದು ಇದೆ. ಇದರ ಬಗ್ಗೆ ಹಿಂದಿನ ನೋಟಿಫಿಕೇಷನ್ ವಿತ್‌ಡ್ರಾ ಮಾಡಿಕೊಂಡರೆ ಒಳ್ಳೆಯದು. ೩ ಪರ್ಸೆಂಟ್ ಟ್ಯಾಕ್ಸ್ ಹಾಕಿ. ಈ ಬಂಗಾರದ ವ್ಯವಹಾರದಲ್ಲಿ ಟ್ಯಾಕ್ಸ್ ಇವೇಷನ್ ಆಗುತ್ತದೆಂದು ನನಗನ್ನಿಸುತ್ತದೆ. 90% of the tax evasion is there in gold business.

ಇನ್ನು ಆಯಿಲ್ ಬಗ್ಗೆ ಹೇಳುವುದಾದರೆ, ಈ ಆಯಿಲ್‌ನ್ನು ಬೇರೆ ಕಡೆಗೆ ಕಳುಹಿಸುತ್ತಾರೆ, ಎಲ್ಲಿ ಉಪಯೋಗ ಮಾಡಿರುತ್ತಾರೆ. I thenk he has reduced the t x to a greater extent.

Tax payable under the Karnataka Sales Tax Act by oil mallers on the purchase of groundnuts/ Seeds consumed in the manufacture of groundnut oil shall be exempt, if such oil is sold within the State of Karnataka or in the course of inter-state trade. ಎಂದು ಇದೆ.

ಈಗ ನಾಲ್ಕು ಪರ್ಸೆಂಟ್ ಇದ್ದುದನ್ನು ಎರಡು ಮಾಡಿ, ಟ್ಯಾಕ್ಸ್ ಲೆವಿ ಮಾಡುವಂಥ ಪರಿಪಾಠವನ್ನು ಇಟ್ಟರೆ ಸ್ವಲ್ಪ ಅನುಕೂಲ ಆಗಬಹುದು ಎಂದು ಹೇಳುತ್ತೇನೆ. Intelligence Department should work efficiently and Senior Officers of the Department should be posted instead of IAS Officers. ಸೇಲ್ಸ್ ಟ್ಯಾಕ್ಸ್‌ನಲ್ಲಿ ಗೊತ್ತಿದ್ದವರಿಗೆ ಹಾಕಿದರೆ ಮಾತ್ರ ಅಲ್ಲಿಯ ವಿಚಾರ ಗೊತ್ತಾಗುತ್ತದೆ. ಯಾರನ್ನೋ ಒಬ್ಬರನ್ನು ಐ.ಎ.ಎಸ್. ಆಫೀಸರ್ಸ್‌ನ್ನು ತೆಗೆದುಕೊಂಡು ಬಂದು ಹಾಕಿದರೆ ಅದು ಸರಿಯಾಗುವುದಿಲ್ಲ. ಈ ರೀತಿ ಹೇಳಿದರೆ ಐ.ಎ.ಎಸ್. ಬಗ್ಗೆ ಅವಹೇಳನ ಎಂದು ಅಲ್ಲ ದಿನನಿತ್ಯದ ಕೆಲಸದಲ್ಲಿ ಅವರಿಗೆ ಇದರ ಸಂಪರ್ಕ ಇರಲಾರದ್ದಕ್ಕೆ, ಅವರಿಗೆ ಅನುಕೂಲತೆಗಳು ಇರುವುದಿಲ್ಲ ಯಾವ ರೀತಿ ಕೆಲಸ ಮಾಡಬೇಕೆಂಬುದರ ಬಗ್ಗೆ ಕಲ್ಪನೆ ಅವರಿಗೆ ಇರುವುದಿಲ್ಲ. ಈ ದೃಷ್ಟಿಯಿಂದ ಸೇಲ್ಸ್‌ಟ್ಯಾಕ್ಸ್ ಇಂಟಲಿಜೆನ್ಸ್ ವಿಂಗ್‌ನ್ನು ಸರಿಯಾಗಿ ಮಾಡಿ ಪ್ರತಿಯೊಂದು ರೆವಿನ್ಯೂ ಡಿವಿಜನ್‌ಗಳಲ್ಲಿ ಡೆಪ್ಯುಟಿ ಕಮಿಷನರ್ ಆಫ್ ಕಮರ್ಷಿಯಲ್ ಟ್ಯಾಕ್ಸಸ್ (ಇಂಟಲಿಜೆನ್ಸ್ ವಿಂಗ್) ಎಂದು ಮಾಡಬೇಕು. ಇದರಿಂದ ಸ್ವಲ್ಪ ಚೆನ್ನಾಗಿ ಟ್ಯಾಕ್ಸ್ ಸಂಗ್ರಹಣೆಗೆ ಹೆಚ್ಚು ಅನುಕೂಲವಾಗುತ್ತದೆ. ಇದಲ್ಲದೆ ಬೆಂಗಳೂರು ನಗರದಲ್ಲಿ ಡಿ.ಸಿ. ಫಾರ್ ಚೆಕ್‌ಪೋಸ್ಟ್ ಅವರನ್ನು ಮಾಡಿ, ಅಲ್ಲಿಗೆ ಒಳ್ಳೆಯವರನ್ನು ಪೋಸ್ಟಿಂಗ್ ಮಾಡಿದರೆ, ಒಳ್ಳೆಯವರು ಎಂದು in the sense some honest and sincere man who has got the zeal to collect move taxes. ಇಂತಹವರನ್ನು ಪೋಸ್ಟಿಂಗ್ ಮಾಡಿದರೆ, ಸಿ.ಟಿ.ಓ. ಚೆಕ್‌ಪೋಸ್ಟ್ ಬೆಂಗಳೂರು ಎಂದು ಮಾಡಿದರೆ, ಇದರಿಂದ ಟ್ಯಾಕ್ಸ್ ನಿರ್ವಹಣೆ ಚೆನ್ನಾಗಿ ಆಗುತ್ತದೆ, ಚೆನ್ನಾಗಿ ಟ್ಯಾಕ್ಸ್ ವಸೂಲು ಮಾಡಲಿಕ್ಕೆ ಆಗುತ್ತದೆ. ನಮಗೆ ಕೇಳಾಣಿಕೆ ಪ್ರಕಾರ ಬೆಂಗಳೂರು ಶಹರ್‌ನಲ್ಲೇ ಕನಿಷ್ಠ ಪಕ್ಷ ೧೦೦ ಕೋಟಿ ರೂಪಾಯಿಗೂ ಮಿಕ್ಕಿ ಟ್ಯಾಕ್ಸ್ ಕಳ್ಳತನ ಆಗುತ್ತದೆಂದು ಇದೆ. ಇದನ್ನು ನೋಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ನೀರಾವರಿಗೆ ಹಣ ಕೊಡಿದರೆ ಕೊಡುತ್ತೇನೆ ಎಂದರೆ ''ಮಜ್ಜಿಗೆ ಇದ್ದರೆ, ನುಚ್ಚು ಇದ್ದರೆ, ಉಂಡು ಹೋಕ್ಕಿದೆ'' ಎನ್ನುವ ರೀತಿ ಆಗುತ್ತದೆ, ಮಜ್ಜಿಗೆನೂ ಇಲ್ಲ ನುಚ್ಚು ಇಲ್ಲ, ಉಂಡು ಹೋಕ್ಕುವುದೂ ಇಲ್ಲ ಎನ್ನುವಂತೆ ಆಗುತ್ತದೆ, ಈ ದೃಷ್ಟಿಯಿಂದ ಹೇಳುವುದಾದರೆ He should have determined will that within three years Karnataka ದಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚಿನ ಹಣವನ್ನು ಒದಗಿಸುತ್ತೇನೆ, ಅದಕ್ಕೆ ಭದ್ರ ಬುನಾದಿಯನ್ನು ಹಾಕುತ್ತೇನೆ ಎನ್ನತಕ್ಕಂಥ ದೃಢ ನಿರ್ಧಾರವನ್ನು ತೆಗೆದುಕೊಳ್ಳುವಂಥಾದ್ದು ಮಾಡಿದರೆ ಮಾತ್ರ, ಸಮೃದ್ಧ ನಾಡನ್ನು ಕಟ್ಟುವುದಕ್ಕೆ ಆಗುತ್ತದೆ, ಇಲ್ಲದಿದ್ದರೆ 'ಆಳುವ ಹುಡುಗರ ಕೈಗೆ ಬತ್ತಾಸು ಕೊಟ್ಟ ಹಾಗೆ' ಮಾಡುವುದು ಬೇಡ ಎಂದು ಹೇಳಿ' ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಎಕ್ಸೈಸ್‌ನಲ್ಲಿ ಕೂಡಾ ಬಹಳಷ್ಟು ಹಣ ಸೋರಿ ಹೋಗುತ್ತಿದೆ ಎನ್ನುವುದು ಬಂದಿದೆ. ಬಾಟ್ಲಿಂಗ್ ಮಾಡುವುದನ್ನು, ಸರಕಾರದ ಫ್ಯಾಕ್ಟರಿಯಾದ, ಮೈಸೂರು ಷುಗರ್ ಫ್ಯಾಕ್ಟರಿಗೆ ಕೊಟ್ಟು ಅಲ್ಲಿ ಈಗಾಗಲೇ ಏನು ಬಾಟ್ಲಿಂಗ್ ಮಾಡುವುದಕ್ಕೆ ಅನುಕೂಲತೆಗಳು ಇದ್ದಾವೆ ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಅಲ್ಲಿ ನೀವು ಬಾಟ್ಲಿಂಗ್ ಮಾಡಿದಿರಿ ಎಂದರೆ ಯಾವುದೇ ಕೆಟ್ಟ ಹೆಸರು ನಮ್ಮ ಸರಕಾರಕ್ಕೆ ಬರಲಾರದು, ಪ್ರಾಮಾಣಿಕವಾಗಿ, ನ್ಯಾಯವಾಗಿ ಸರಕಾರಕ್ಕೆ ಹೆಚ್ಚು ಹಣ ಬರುವಂಥಾದ್ದು ಕೂಡಾ ಸಾಧ್ಯವಾಗಬಹುದು ಎಂದು ಹೇಳುತ್ತೇನೆ. ಇನ್ನು ನಮಗೆ ಮೈಸೂರು ಷುಗರ್ ಫ್ಯಾಕ್ಟರಿಯಲ್ಲಿ ಅಕಸ್ಮಾತ್ತಾಗಿ ಬಾಟ್ಲಿಂಗ್ ಕೆಪ್ಯಾಸಿಟಿ ಕಡಿಮೆಯಾಗಿದ್ದರೆ. ಗೌರಿಬಿದನೂರು ಷುಗರ್ ಫ್ಯಾಕ್ಟರಿಯ ಡಿಸ್ಟಿಲರಿಯನ್ನು ತೆಗೆದುಕೊಳ್ಳಬಹುದು. the distillery and bottling units can be taken over by the Mysore Sugar company. ಇದರ ಬಗ್ಗೆ ಹಣಕಾಸಿನ ಖಾತೆಯನ್ನು ವಹಿಸಿಕೊಂಡಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು ನಿಗಾವಹಿಸಿ ಕೆಲಸ ಮಾಡಬೇಕು ಪ್ರತಿಯೊಂದು ರೆವಿನ್ಯೂ ಡಿವಿಜನ್‌ನಲ್ಲಿ ಇಂಟಲಿಜೆನ್ಸ್ ವಿಂಗ್ ಫಾರ್ ಫಾರೆಸ್ಟ್ ಅಂಡ್ ಎಕ್ಸೈಸ್ ಮಾಡಬೇಕು. ಅರಣ್ಯ ಪ್ರದೇಶ ಎಲ್ಲಿದೆ ಅಲ್ಲಿ ಫಾರೆಸ್ಟ್ ಇಂಟೆಲಿಜೆನ್ಸ್ ವಿಂಗ್ ಮಾಡಬೇಕು, ಬಿಕ್ಕಿದ್ದು ಎಕ್ಸೈಸ್ ಮಾಡಬೇಕು. ಎಂದರೂ ಕೂಡಾ ನಾಲ್ಕು ರೆವಿನ್ಯೂ ಡಿವಿಜನ್‌ಗಳಲ್ಲಿ ನಾಲ್ಕು ಎಕ್ಸೈಸ್ ಹಾಗೂ ಫಾರೆಸ್ಟ್ ಮತ್ತು ಸೇಲ್ಸ್ ಟ್ಯಾಕ್ಸ್ ಇಂಟಲಿಜೆನ್ಸ್ ವಿಂಗ್‌ಗಳನ್ನು ಮಾಡಬೇಕು. ಇದರಿಂದ ಸೇಲ್ಸ್ ಟ್ಯಾಕ್ಸ್ ಇವೇಷನ್‌ನಲ್ಲಿ ಕನಿಷ್ಠ ಪಕ್ಷ ೧೫೦ರಿಂದ ೨೦೦ ಕೋಟಿ ನಾವು ಹೆಚ್ಚು ಸಂಪನ್ಮೂಲವನ್ನು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಡೆಫಿಸಿಟ್ ಕೂಡಾ ಕಡಿಮೆಯಾಗಿ ಇನ್ನಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಹುದು.

ಇನ್ನು ಗೌರ್ನಮೆಂಟ್ ಅಂಡರ್ ಟೇಕಿಂಗ್ ಬಗ್ಗೆ ಕೋ–ಆಪರೇಷನ್ ಬಗ್ಗೆ ಆಗಲಿ ಇಲ್ಲಿ ಕೊಟ್ಟಿರತಕ್ಕಂಥ ಅಂಕಿಅಂಶಗಳಿಂದಲೇ ಹೇಳಬಹುದು ಈ ಇಲಾಖೆಗಳಲ್ಲಿ ಅಥವಾ ಈ ಕಂಪನಿಗಳಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿಲ್ಲವೆಂದು ಗೌರ್ನಮೆಂಟ್ ಅಂಡರ್ ಟೇಕಿಂಗ್ ಕಂಪನಿಗಳು ಆಗಲಿ ಅಥವಾ ಇಂಡಸ್ಟ್ರಿಗಳೇ ಆಗಲಿ ಅವುಗಳಿಗೆ ಮ್ಯಾನೇಜ್‌ಮೆಂಟ್ ಎಕ್ಸ್‌ಪರ್ಟ್ಸ್‌ಗಳನ್ನು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಜಸ್‌ನವರಿಗಾಗಲಿ ಅಥವಾ ಬೇರೆ ಕಡೆಯಿಂದ ಆಗಲಿ ಹಾಕಬೇಕು. ಮಾನ್ಯ ಎಂ. ಎಸ್. ಕೃಷ್ಣನ್‌ರವರಾಗಲಿ ಅಥವಾ ಮಾನ್ಯ ವೆಂಕಟರಾಮಯ್ಯನವರು ಲಿ ತಪ್ಪು ತಿಳಿದುಕೊಂಡರೂ ಪರವಾಗಿಲ್ಲ. ಟಾಟಾ ಅಥವಾ ಬಿರ್ಲಾರವರಲ್ಲಿ ಯಾರಾದರೂ ಎಕ್ಸ್‌ಪರ್ಟ್ಸ್ ಇದ್ದರೆ ಅವರನ್ನು ಐದು ಹತ್ತು ವರ್ಷಗಳ ಕಾಲ ಕಾಂಟ್ರಾಕ್ಟ್ ಮೇಲೆ ತೆಗೆದುಕೊಂಡು ಬಂದು ಉದ್ದಿಮೆಗಳನ್ನು ಲಾಭದಾಯಕವಾಗಿ ನಡೆಯುವಂತೆ ಮಾಡಿದರೆ ಅದರಿಂದ ಜನತೆಗೆ ಅನುಕೂಲವಾಗುತ್ತದೆ, ಬೇರೆ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೂ ಅನುಕೂಲವಾಗುತ್ತದೆ. ಈಗ ನಮ್ಮ ಗೌರ್ನಮೆಂಟ್ ಕಂಪನಿಗಳಲ್ಲಿ ೧೯೮೫–೮೬ನೇ ಸಾಲಿನಲ್ಲಿ ೨೫೦ ಕೋಟಿ ರೂಪಾಯಿಗಳನ್ನು ನಾವು ತೊಡಗಿಸಿದರೆ ಅದರಿಂದ ಆದಾಯವೇನೂ ಇಲ್ಲ. ಬಡ ಬೋರೇಗೌಡನ ಹಣವನ್ನು ಒಳ್ಳೆಯ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ವಿನಿಯೋಗ ಮಾಡಬೇಕು. ಈ ಬಗ್ಗೆ ಸರ್ಕಾರ ಹೆಚ್ಚು ನಿಗಾ ವಹಿಸಬೇಕು. ಬಹುತೇಕವಾಗಿ ಎಲ್ಲಾ ಕಂಪನಿಗಳು ಒಳ್ಳೆಯ ರೀತಿಯಲ್ಲಿ ಚೆನ್ನಾಗಿ ಕೆಲಸ ಮಾಡಿದರೆ ಹೆಚ್ಚು ಲಾಭ ಬಂದರೆ ಸರ್ಕಾರಕ್ಕೂ ರಾಜ್ಯದ ಜನತೆಗೂ ಅನುಕೂಲವಾಗುತ್ತದೆ. ಇನ್ನು ನಮ್ಮ ಕೆ.ಇ.ಬಿ.ಯಲ್ಲಿ ಮ್ಯಾನೇಜ್‌ಮೆಂಟ್ ಎಕ್ಸ್‌ಪರ್ಟ್ಸ್ ಇಲ್ಲ. ಕೆ.ಪಿ.ಸಿ.ಯಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇಲ್ಲ. ಈಗ ಕೆ ಎಸ್.ಆರ್ ಟಿ.ಸಿ ಮತ್ತು ಕೆ.ಇ.ಬಿ.ಯಲ್ಲಿ ಕನಿಷ್ಟ ಪಕ್ಷ ಎರಡು ವರ್ಷಗಳ ಕಾಲವಾದರೂ ಅತಿಯಾದ ಸಾಮಾನುಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು. ಮತ್ತು ನಮ್ಮ ಮಾನ್ಯ ಸದಸ್ಯರಾದ ಕೆ. ಹೆಚ್ ಪಾಟೀಲ್‌ರವರು ಯಾರಿಗೋ ಉದ್ಯೋಗ ಕೊಡಿಸಬೇಕಾಗಿತ್ತು. ಈ ಸಂಸ್ಥೆಗಳಿಗೆ ಒಂದು ಪತ್ರ ಬರೆದು ಕೊಡುವುದು ಈ ಪತ್ರದ ಆಧಾರದ ಮೇಲೆ ಉದ್ಯೋಗ ಕೊಡುವುದು. ಈ ಪದ್ಧತಿ ನಿಲ್ಲಬೇಕು. ನಮ್ಮಂತಹವರಿಗೆ ಈ ಸಂಸ್ಥೆಗಳು ಒಂದು ಸ್ಥಾನವಾಗಿಬಿಟ್ಟಿವೆ ನನ್ನ ದೃಷ್ಟಿಯಲ್ಲಿ ಕಡೆಯ ಪಕ್ಷ ಇನ್ನು ಎರಡು ವರ್ಷಗಳ ಕಾಲ ರಿಕ್ರೂಟ್‌ಮೆಂಟ್ ನಿಲ್ಲಿಸಬೇಕು. ಈ ಸಂಸ್ಥೆಗಳ ರಿಕ್ರೂಟ್‌ಮೆಂಟ್ ಪಾಲಿಸಿಯನ್ನು ಸಪರೇಟ್ ಮಾಡಬೇಕು ಅಥವಾ ಬದಲಾವಣೆ ಮಾಡಬೇಕು. ಆಗ ಎಂಪ್ಲಾಯ್‌ಮೆಂಟ್ ಮೇಲೆ ಒಂದು ಬಿಗಿ ಇರುತ್ತದೆ. ಈ ಬಗ್ಗೆ ಸ್ಟ್ರಿಕ್ಟ್ ಆದೇಶವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಕೆಲವು ಸಂಸ್ಥೆಗಳಲ್ಲಿ ಒಬ್ಬ ಟೈಪಿಸ್ಟ್ ಇರುತ್ತಾನೆ. ಅತ ೨ ಪೇಜು ಕೂಡ ಟೈಪ್ ಮಾಡುವುದಿಲ್ಲ. ಇರುವವರಿಗೆ ಕೆಲಸವಿರುವುದಿಲ್ಲ. ಅಲ್ಲಿ ಇನ್ನೊಬ್ಬ ಟೈಪಿಸ್ಟ್ ಅಪಾಯಿಂಟ್ ಮಾಡುವುದು ಆದ್ದರಿಂದ ಸರ್ಕಾರ ಎಲ್ಲಾ ಅಂಡರ್‌ಟೇಕಿಂಗ್ಸ್ ಬಗ್ಗೆ ರಿಕ್ರೂಟ್‌ಮೆಂಟ್ ಪಾಲಿಸಿ ಫಾರ್ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್ ಎಂದು ಮಾಡಿದರೆ ಒಳ್ಳೆಯದು. ಇನ್ನು ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಸರ್ಕಾರ ಸ್ವಲ್ಪ ನಿಗಾ ವಹಿಸಬೇಕು. ಈ ಬಗ್ಗೆ ಟ್ಯಾಕ್ಸ್ ಇಂಪೋಜ್ ಮಾಡಿದರೆ ಆಗ ಅರಣ್ಯ ನಾಶವಾಗುವುದನ್ನು ತಡೆಗಟ್ಟಬಹುದು. ಸರ್ಕಾರ ಕನಿಷ್ಟ ಪಕ್ಷ ಎಕ್ಸೈಜ್, ಫಾರೆಸ್ಟ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಇತ್ಯಾದಿ ಇಲಾಖೆಗಳಲ್ಲಿ ಇವೇಶನ್ ಏನು ಇದೆ ಅದನ್ನು ಸ್ವಲ್ಪ ಚೆಕ್ ಮಾಡಿ ಬಂದಂತಹ ಹೆಚ್ಚು ಸಂಪನ್ಮೂಲಗಳನ್ನು ನೀರಾವರಿ ಅಥವಾ ಇತರೇ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ವಿನಿಯೋಗಿಸಬಹುದು. ಇನ್ನು ಸರ್ಕಾರಕ್ಕೆ ಬರಬೇಕಾದಂಥ ಬಾಕಿ ಹಣವನ್ನು ಸಹ ವಸೂಲಿ ಮಾಡಲು ಸರಿಯಾದ ಕ್ರಮ ಕೈಗೊಳ್ಳಬೇಕು. ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡರೆ, ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದು ಬಿಡುತ್ತಾರೆ, ಆದ್ದರಿಂದ ನಮ್ಮ ಸರ್ಕಾರಿ ವಕೀಲರಿಗೆ ಈ ಬಗ್ಗೆ ಇಷ್ಟು ದಿವಸಗಳೊಳಗಾಗಿ ಈ ಕೇಸ್‌ನ್ನು ಕ್ಲಿಯರ್ ಮಾಡುವ ಹಾಗೆ ಪ್ರಯತ್ನ ಮಾಡಬೇಕೆಂದು ಸೂಚನೆ ಕೊಡಬೇಕು. ಈ ರೀತಿ ಒತ್ತಡವನ್ನು ಅವರ ಮೇಲೆ ಹಾಕಿದರೆ ಸರಿಯಾದ ರೀತಿಯಲ್ಲಿ ಕೆಲಸಗಳು ಆಗುತ್ತವೆ. ಇನ್ನು ಎಕ್ಸೈಸ್ ಕಂಟ್ರಾಕ್ಟನ್ನು ಕೊಡುವಾಗ, ಸಾಲ್ವೆನ್ಸಿ ಸರ್ಟಿಫಿಕೇಟ್‌ಗೆ ಇನ್‌ಸಿಸ್ಟ್ ಮಾಡಬೇಕು. ಹಿಂದಿನ ಅನುಭವದಲ್ಲಿ ನೋಡಿದರೆ ಯಾರು ಸರ್ಕಾರಕ್ಕೆ ಬಾಕಿದಾರರಾಗಿರುತ್ತಾರೋ ಅವರೇ ಮತ್ತೊಂದು ಹೆಸರಿನಲ್ಲಿ ಬಿಡ್ ಮಾಡಲಿಕ್ಕೆ ಅನುಕೂಲವಾಗುತ್ತಿದೆ. ಅದನ್ನು ತಪ್ಪಿಸಲಿಕ್ಕೆ ಅಥವಾ ಸರ್ಕಾರದ ಹಣ ಸರಿಯಾದ ರೀತಿಯಲ್ಲಿ ವಸೂಲಾಗುವುದಕ್ಕೆ ಯಾವ ಯಾವ ಪ್ರಯತ್ನಗಳನ್ನು ಮಾಡಬೇಕು. ಆ ದಿಸೆಯಲ್ಲಿ ಸಂಪೂರ್ಣವಾಗಿ ಪ್ರಯತ್ನ ಮಾಡಬೇಕು.

ಸರ್ಕಾರ ಮನಸ್ಸು ಮಾಡಿದರೆ ಈ ೧೪೭ ಕೋಟಿ ರೂಪಾಯಿಗಳ ಕೊರತೆ ತುಂಬಿಕೊಳ್ಳುವುದು ಅಷ್ಟೇ ಅಲ್ಲ, ಅಭಿವೃದ್ಧಿ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಹಣ ಉಪಯೋಗ ಮಾಡುವುದಕ್ಕೆ ಸಾಧ್ಯತೆಗಳು ಬಹಳ ಇವೆ. ಸನ್ಮಾನ್ಯ ಮುಖ್ಯಮಂತ್ರಿ ಬಹಳ ಬುದ್ಧಿವಂತರಿದ್ದಾರೆ. ಆದರೆ, ಒಂದೊಂದು ಸಾರಿ ಇಂಥದನ್ನು ಮಾಡಬೇಕೆಂದು ಹೇಳಿದರೆ ನಕ್ಕು ಕಳುಹಿಸಿಬಿಡುತ್ತಾರೆ. ಇದರಿಂದ ಸ್ವಲ್ಪ ಕೆಲಸ ಕೆಟ್ಟು ಹೋಗಿಬಿಡುತ್ತದೆ

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ನಿಮ್ಮ ಅನುಭವಕ್ಕೂ ಅದು ಬಂತು ಅನ್ನಿ.

ಅಧ್ಯಕ್ಷರು.— ತಾವು ಕುಳಿತುಕೊಂಡು ಕೇಳಿ.

ಶ್ರೀ ಎಂ ಮಲ್ಲಿಕಾರ್ಜುನಖರ್ಗೆ.— ಅವರು ಬಹಳ ಚೆನ್ನಾಗಿ ಹೇಳಿದರು.

ಶ್ರೀ ಎಸ್. ಎಸ್. ಕಡಪಟ್ಟಿ.— ನಿಮ್ಮ ಕೆಟ್ಟ ನೆರಳು ಅವರ ಮೇಲೆ ಬಿದ್ದಿರಬಹುದು ಎಂದು ನನಗನಿಸುತ್ತದೆ.

ಆ ಕಾರಣದಿಂದ ಸಂಪನ್ಮೂಲ ಸಂಗ್ರಹಣೆಯಲ್ಲಿ ದಯವಿಟ್ಟು ವಿರೋಧ ಪಕ್ಷದವರು ಸಹಾಯ ಮಾಡಬೇಕು. ಪ್ರಧಾನ ಮಂತ್ರಿಗಳು ಮಹಾರಾಷ್ಟ್ರಕ್ಕೆ ಹೋಗಿ ಇಷ್ಟು ಕೋಟಿ ಕೊಡುತ್ತೇನೆ ಎಂದು ಹೇಳುತ್ತಾರೆ ಮತ್ತೊಂದು ಕಡೆ ಇಷ್ಟು ಕೋಟಿ ಕೊಡುತ್ತೇನೆಂದು ಹೇಳುತ್ತಾರೆ ಹಾಗೆಯೇ ನಮ್ಮ ರಾಜ್ಯಕ್ಕೆ ಬಂದಾಗ ಏಕೆ ಹೇಳುವುದಿಲ್ಲ, ವಿದ್ಯುಚ್ಛಕ್ತಿ ಕೊರತೆಯನ್ನು ಅನುಭವಿಸುತ್ತಿರುವ ಕರ್ನಾಟಕಕ್ಕೆ ಸ್ವಲ್ಪವಾದರೂ ಔದಾರ್ಯವನ್ನು ತೋರಿಸಿ ಹಣವನ್ನು ಬಿಡುಗಡೆ ಮಾಡಬೇಕೆಂದು ವಿರೋಧ ಪಕ್ಷದವರು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಸದಸ್ಯರು ಸ್ವಲ್ಪ ಕುಳಿತುಕೊಳ್ಳುವ ಹಾಗಿದ್ದರೆ. ಒಂದು ಮಾತು, ಸನ್ಮಾನ್ಯ ಸದಸ್ಯರು ಬಹಳ ಒಳ್ಳೆಯ ಸೂಚನೆಗಳನ್ನು ಕೊಡುತ್ತಿದ್ದಾರೆ. ಕೈಗಾ ಅಣು ಸ್ಥಾವರವನ್ನು ಕೇಂದ್ರವು ಮಂಜೂರು ಮಾಡಿದಾಗ ಅದಕ್ಕೆ ಆತಂಕವನ್ನು ಸೂಚಿಸಲಾಯಿತು. ಡಾ. ಶಿವರಾಮಕಾರಂತರವರಿಗೆ ತಾವುಗಳೆಲ್ಲರೂ ಸ್ವಲ್ಪ ತಿಳುವಳಿಕೆ ಕೊಟ್ಟು ಆತಂಕ ಪಡದೇ ಆದಷ್ಟು ಜಾಗ್ರತೆ ಈ ಯೋಜನೆ ಆಗುವ ಹಾಗೆ ತಾವೇ ನೋಡಿಕೊಳ್ಳಬಹುದಾಗಿತ್ತು. ಆದರೆ, ತಾವು ಅದನ್ನು ಏಕೆ ಮಾಡಲಿಲ್ಲ ?

ಶ್ರೀ ಎಸ್. ಎಸ್. ಕಡಪಟ್ಟಿ.— ಆ ಬಗ್ಗೆ ನಮ್ಮ ಎರಡನೇಯ ಅಭಿಪ್ರಾಯ ಇಲ್ಲ. ಅದನ್ನು ಯಾವ ರೀತಿಯಲ್ಲಿ ವಿಚಾರ ಮಾಡಬೇಕೋ ಹಾಗೆ ಮಾಡುತ್ತೇವೆ. ನಾನು ಹೇಳುತ್ತಿರುವುದು ಬೇರೆ ಬೇರೆ ರಾಜ್ಯಗಳಲ್ಲಿ ಪ್ರಧಾನ ಮಂತ್ರಿಯವರು ಹೋದಾಗ ಸ್ಪಾಟ್ ಸ್ಯಾಂಕ್ಷನ್ ಕೊಡುತ್ತಿದ್ದಾರೆ: ಇಷ್ಟು ಕೋಟಿ ಹಣವನ್ನು ಕೊಟ್ಟಿದ್ದೇವೆ, ಅಷ್ಟು ಕೋಟಿ ಹಣವನ್ನು ಕೊಟ್ಟಿದ್ದೇವೆಂದು, ಸಾವಿರ ಕೋಟಿ, ನೂರಾರು ಕೋಟಿ ಗಟ್ಟಲೇ ಹಣವನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯವು ವಿದ್ಯುಚ್ಛಕ್ತಿಯಲ್ಲಿ ಇಷ್ಟು ತೊಂದರೆಯಲ್ಲಿರುವಾಗ ಹಾಗೂ ಬರಗಾಲದ ಬವಣೆಯನ್ನು ಪಡುತ್ತಿರುವಾಗ ಏಕೆ ಹೆಚ್ಚು ಹಣವನ್ನು ಕೊಡಲಿಲ್ಲ. ಆದ್ದರಿಂದ, ತಾವುಗಳು ಸಹಾಯ ಮತ್ತು ಸಹಕಾರವನ್ನು ಕೊಟ್ಟು ಪ್ರಧಾನ ಮಂತ್ರಿಗಳವರಿಗೆ ಹೇಳಿ ಇನ್ನೂ ಹೆಚ್ಚು ಹಣವನ್ನು ಕರ್ನಾಟಕದ ರಾಜ್ಯಕ್ಕೆ ಬಿಡುಗಡೆ ಮಾಡಿಸಬೇಕು. ಪ್ರಧಾನ ಮಂತ್ರಿಗಳ ಮನಸ್ಸನ್ನು ನಮ್ಮ ಕಡೆ ತಿರುಗಿಸಿಕೊಳ್ಳುವುದಕ್ಕೆ ಆಗಲಿಲ್ಲವಾದ್ದರಿಂದ ನೀವಾದರೂ ಅವರ ಮನಸ್ಸನ್ನು ನಮ್ಮ ರಾಜ್ಯದ ಕಡೆ ತಿರುಗಿಸಿ ರಾಜ್ಯದ ಅಭಿವೃದ್ಧಿಗೆ ಸಹಾಯ ಮಾಡಬೇಕು. ಆ ದೃಷ್ಟಿಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಪ್ರಧಾನ ಮಂತ್ರಿಗಳ ಮನಸ್ಸನ್ನು ಒಲಿಸಲಿಕ್ಕೆ ಯಾವ ರೀತಿ ವಿಚಾರ ಮಾಡಬೇಕೋ ಅದನ್ನು ಮಾಡಬೇಕು. ಕರ್ನಾಟಕದ ವಿದ್ಯುಚ್ಛಕ್ತಿ ಕೊರತೆ ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ, ಬರಗಾಲದ ಪರಿಸ್ಥಿತಿ ಅವರ ಕಣ್ಣಿಗೆ ಬಿದ್ದಿದೆಯೋ ಇಲ್ಲವೋ ಆದ್ದರಿಂದ ಈ ವಿಷಯಗಳನ್ನು ಅವರ ಗಮನಕ್ಕೆ ತರಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಜ್ಯ ಸಂಪೂರ್ಣವಾಗಿ ಹಾಗೂ ಸರ್ವಾಂಗೀಣ ಅಭಿವೃದ್ಧಿ ಆಗಲಿಕ್ಕೆ ಅಂದರೆ ಇರಿಗೇಷನ್ ಮತ್ತು ಎಲೆಕ್ಟ್ರಿಸಿಟಿ ಬಗ್ಗೆ ಮುಖ್ಯ ಮಂತ್ರಿಗಳು ೧೯೮೩ನೇ ಇಸವಿಯಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಹೇಳಿರುವ ಮಾತನ್ನು ಉಳಿಸಿ ಕೊಡುತ್ತಾರೆಂದು ನಂಬಿ ಆ ದೃಷ್ಟಿಯಲ್ಲಿ ಕೆಲಸ ಮಾಡುತ್ತಾರೆಂದು ಆಶಯ ಮಾಡಿ ನನಗೆ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಭಾಧ್ಯಕ್ಷರೇ ಈ ದಿವಸ ಕರ್ನಾಟಕದ ಮುಖ್ಯಮಂತ್ರಿಗಳೂ ಅರ್ಥಮಂತ್ರಿಗಳೂ ಆದ ಶ್ರೀ ರಾಮಕೃಷ್ಣ ಹೆಗಡೆಯವರು ೧೯೮೭-೮೮ನೇ ಸಾಲಿಗೆ ಮಂಡಿಸಿದ ಆಯವ್ಯಯ ಪತ್ರದ ಬಗ್ಗೆ ಕೆಲವು ನನ್ನ ಅಭಿಪ್ರಾಯಗಳನ್ನು ಹೇಳುವ ದೃಷ್ಟಿಯಿಂದ ಅದನ್ನು ವಿರೋಧಿಸಿ ನಾನು ಭಾಷಣ ಮಾಡುತ್ತೇನೆ. ಅವರು ೬೪ ಪುಟಗಳ ಪುಸ್ತಕವನ್ನೇ ಎದುರಿಗಿಟ್ಟು ಓದಿದ್ದಾರೆ. ಅದರಲ್ಲಿ ಆರಂಭದಲ್ಲೇ ಅವರು ಮೊನ್ನೆ ತಾನೇ ನಡೆದ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತ್ ಚುನಾವಣೆಗಳಲ್ಲಿ ಗೆದ್ದು ಸುಮಾರು ೬೦ ಸಾವಿರ ಪ್ರತಿನಿಧಿಗಳ ದೊಡ್ಡ ಸಮ್ಮೇಳನ ಸೇರಿದ್ದ ಚಿತ್ರಣವನ್ನು ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದರು ಇರಬಹುದು. ಆದರೆ, ನನ್ನ ದೃಷ್ಟಿಯಲ್ಲಿ ಆರಿಸಿಬಂದಿರುವವರು ಯಾವಾಗಲೂ ಆರಿಸಿಬಂದಂಥವರೇ, ಹಾಗಿರುವಾಗ ಇಲ್ಲಿವರೆಗೆ ಬೇರೆಬೇರೆ ಕಡೆಗಳಿಂದ ಬಸ್‌ಗಳಲ್ಲಿ ಸರ್ಕಾರಿ ಖರ್ಚಿನಲ್ಲಿ ಕರೆಯಿಸಬೇಕಾದ ಪ್ರಮೇಯ ಕಾಣುತ್ತಿಲ್ಲ. ಅನೇಕರು ರಾತ್ರಿ ಬಂದು ಬೆಳಿಗ್ಗೆ ಇದ್ದು ಮತ್ತೆ ರಾತ್ರಿ ಹೋದ ಸ್ಥಿತಿ ಇತ್ತು. ಅನೇಕರು ಬಸ್‌ಗಳಲ್ಲೇ ವಾಂತಿ ಮಾಡಿಕೊಂಡು ಅನೇಕ ರೀತಿಯ ಕಷ್ಟಪಟ್ಟು ಬಂದರು. ಸಮ್ಮೇಳನದ ಸ್ಥಳದಲ್ಲೂ ಬಿಸಿಲಿನ ಜುಳ ತುಂಬಾ ಇದ್ದುದರಿಂದ ವೇದಿಕೆಯಲ್ಲೂ ಚಪ್ಪರ ಹಾಕಿರಲಿಲ್ಲ. ಕೆಳಗೂ ಬಿಸಿಲಿಗೆ ಮರೆ ಮಾಡಿರಲಿಲ್ಲ: ಹೀಗೆ ಮುಖ್ಯಮಂತ್ರಿಗಳು ಹೇಳುವಂತೆ ಅವರ ಕಣ್ಣಲ್ಲಿ ಕಂಡವೂ ಬೆಳಕಿನಲ್ಲಿ ಬಿಸಿಲಿನ ಜುಳವೂ ಕಂಡಿರಬೇಕೆಂದು ನನ್ನ ಅಭಿಪ್ರಾಯ. ಏನೇ ಇರಲಿ, ಪಂಚಾಯಿತ್ ಚುನಾವಣೆಗಳಾದವು, ಪರಿಷತ್ ಚುನಾವಣೆಗಳೂ ಆದುವು. ಒಳ್ಳೆಯ ಕೆಲಸವೇ ಗಾಂಧೀಜಿಯವರು ಇಡೀ ನಮ್ಮ ಪ್ರಜಾಪ್ರಭುತ್ವದ ನೆರೆ ಗಟ್ಟೇ ಗ್ರಾಮರಾಜ್ಯಗಳಲ್ಲಿದೆ ಎಂದಿದ್ದಾರೆ. ಗಾಂಧೀಜಿಯವರ ಕನಸು ಚುನಾವಣೆ ದೃಷ್ಟಿಯಿಂದ ನನಸಾಯಿತು. ನನ್ನ ಪ್ರಕಾರ ನಜೀರ್‌ಸಾಬರು ಬಹಳ ಕಷ್ಟಪಟ್ಟು ಇದಕ್ಕಾಗಿ ಬಹಳ ಕಡೆ ಹೋಗಿ ಅಧ್ಯಯನ ನಡೆಸಿ ಇದನ್ನು ರಚಿಸಿದರು, ಕೊನೆಗೆ ರಾಷ್ಟ್ರಪತಿಗಳ ಹತ್ತಿರ ಸಹಿಗಾಗಿ ಹೋದಾಗ ಅಲ್ಲೂ ಹೋಗಿ ಸಹಿ ಹಾಕಿಸಿಕೊಂಡು ಬಂದರು, ಆಮೇಲೆ ಚುನಾವಣೆ ಆಗುವುದು ತಡವಾದಾಗ ಹಠ ತೊಟ್ಟು ಚುನಾವಣೆ ಮಾಡಿಸಿದರು. ಆದರೆ ಈ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತೇವೆಂಬುದನ್ನು ಈಗ ನೋಡಬೇಕಾಗಿದೆ. ಗಾಂಧೀಜಿಯವರು ಹೇಳಿದ್ದೇನೆಂದರೆ ಗ್ರಾಮಸ್ಥರಿಗೆ ಹಣ ಅಧಿಕಾರ ಕೊಡುವ ಮೊದಲು ಪ್ರತಿಯೊಬ್ಬ ಗ್ರಾಮಸ್ಥರೂ ಅಕ್ಷರವಂತರನ್ನಾಗಿ ಮಾಡಬೇಕು. ಮಾತ್ರವಲ್ಲ ಪಾನನಿಷೇಧವನ್ನೂ ಮಾಡಬೇಕೆಂಬ ವಿಚಾರವನ್ನು ಹೇಳಿದ್ದಾರೆ. ಅಕ್ಷರಜ್ಞಾನ, ಪಾನನಿಷೇಧಗಳು ಪ್ರತಿ ಗ್ರಾಮಸ್ಥರನ್ನೂ ಬಡಿದೆಬ್ಬಿಸಿದ ಮೇಲೆ ಗ್ರಾಮರಾಜ್ಯ ಮಾಡಬೇಕೆಂದಿದ್ದಾರೆ. ಇವರು ಹೇಳುತ್ತಾರೆ, ನೋಡಿ ಕರ್ನಾಟಕದಲ್ಲೇ ನಾವು ಮೊತ್ತಮೊದಲಿಗೆ ಇದನ್ನು ಮಾಡಿದ್ದೇವೆ ಎಂದು ಈಗಾಗಲೇ ಈ ಪದ್ಧತಿ ಮಹಾರಾಷ್ಟ್ರದಲ್ಲಿ ಗುಜರಾತ್‌ನಲ್ಲಿ ಪಶ್ಚಿಮ ಬಂಗಾಳದಲ್ಲಿ ಆಂಧ್ರದಲ್ಲಿ ಮಾಡಿದ್ದಾರೆ. ಈ ಸಂಸ್ಥೆಗಳಿಗಾಗಿ ೯೫೦ ಕೋಟಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆ. ಅದರಲ್ಲಿ ಯೋಜನೇತರ ಬಾಬ್ತಿಗಾಗಿ ೫೯೭ ಕೋಟಿಗಳನ್ನೂ ಯೋಜನಾ ವೆಚ್ಚಗಳಿಗಾಗಿ ೩೩೭ ಕೋಟಿಗಳನ್ನು ಇಟ್ಟಿದ್ದಾರೆ. ಯೋಜನೇತರ ಬಾಬ್ತಿಗಾಗಿ ೫೯೭ ಕೋಟಿಗಳನ್ನು ಇಟ್ಟಿದ್ದು ಅಷ್ಟು ಒಳ್ಳೆಯದಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಪರಿಷತ್ ಅಧ್ಯಕ್ಷರಿಗೆ, ಉಪಾಧ್ಯಕ್ಷರುಗಳಿಗೆ ಮತ್ತು ಮಂಡಲ ಪಂಚಾಯಿತಿಗಳ ಅಧ್ಯಕ್ಷರಿಗೆ ಉಪಾಧ್ಯಕ್ಷರುಗಳಿಗೆ ಸಂಬಳ ಕೊಡಬೇಕಾಗಿದೆ. ಹೀಗೇಕೆ ಮಾಡಿದಿರಿ ? ಮೊದಲಿಗೆ ಪಂಚಾಯಿತಿಗಳು ಇದ್ದ ರೀತಿಯಲ್ಲಿ ಪ್ರತಿನಿಧಿಗಳು ಆರಿಸಿಬಂದು ಒಳ್ಳೆಯ ರೀತಿಯಲ್ಲೇ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ಇದನ್ನು ಮಾಡುತ್ತಿದ್ದು ಸರಕಾರಕ್ಕೆ ಹಣ ಉಳಿಯುವುದಕ್ಕೆ ಸಾಧ್ಯವಿತ್ತು. ಅವರಿಗೆ ಬಂಗಲೆ, ಕಾರು ಕೊಡಬೇಕು ಇವರನ್ನು ರಾಜ್ಯ ಮಟ್ಟದ ಮಂತ್ರಿಗಳ ಮಟ್ಟ. ಡೆಪ್ಯುಟಿ ಮಿನಿಸ್ಟರ್ ಮಟ್ಟದಂತಹ ರೀತಿಯಲ್ಲಿಟ್ಟಿದ್ದೀರಿ. ಇದರಿಂದಾಗಿ ನಮ್ಮ ೨೦ ಜಿಲ್ಲೆಗಳಲ್ಲಿ ೪೦ ಮಂತ್ರಿಗಳಾಗುತ್ತಾರೆ ಇಲ್ಲೂ ಕೂಡಿದರೆ. ಒಟ್ಟು ೧೦೦ ಮಂತ್ರಿಗಳನ್ನು ನಮ್ಮ ರಾಜ್ಯದಲ್ಲಿ ಮಾಡಿದ ಹಾಗೆ ಆಗುತ್ತದೆ. ನಾನು ಹೇಳುವುದೇನೆಂದರೆ ಈಗ ಅವರು ಆರಿಸಿ ಬಂದಿದ್ದಾರೆ ಅವರಿಗೆ ಒಂದು ಭತ್ಯ ಕೊಡಬಹುದೇ ಹೊರತು ಸಂಬಳ ಎಂದು ನಿರ್ಣಯ ಮಾಡುವುದು ಒಳ್ಳೆಯದಲ್ಲ. ನಮ್ಮಲ್ಲಿ ಸಂಪನ್ಮೂಲವನ್ನು ಕ್ರೋಡೀಕರಿಸಬೇಕಾಗುತ್ತದೆ. ಅದನ್ನು ಕೂಡಿಸಿ ಎಂದು ಹೇಳಿದರೆ ಒಂದು ಕಡೆ ಬರಗಾಲವೆಂದು ಹೇಳುತ್ತಾರೆ. ಸುಮಾರು ನಾಲ್ಕು ವರ್ಷದಿಂದ ಅದನ್ನೇ ಹೇಳುತ್ತಿದ್ದಾರೆ, ಪ್ರತಿಯೊಂದಕ್ಕೂ ಬರಗಾಲವೆಂದು ಹೇಳುತ್ತಾರೆ. ಎಲ್ಲದಕ್ಕೂ ಬರಗಾಲವೆಂಬ ಗುರಾಣಿಯನ್ನು ತೋರಿಸುತ್ತಾರೆ. ಸಂಪನ್ಮೂಲ ಕೂಡಿಸಬೇಕೆನ್ನುವ ಕಾರ್ಯಕ್ರಮದಲ್ಲಿ ಯೋಜನಾ ವೆಚ್ಚವನ್ನು ಜಾಸ್ತಿ ಮಾಡಿದ್ದರೆ ನಿಜವಾಗಿಯೂ ಒಳ್ಳೆಯದಾಗುತ್ತಿತ್ತು. ಹಿಂದೆ ಪಂಚಾಯಿತಿಗಳು ಕೂಡ ಚೆನ್ನಾಗಿ ಕೆಲಸ ಮಾಡುತ್ತಿದ್ದವು. ಇವುಗಳು ಅದಕ್ಕಿಂತ ಚೆನ್ನಾಗಿ ಕೆಲಸ ಮಾಡಬಹುದೆಂಬ ಇಚ್ಛೆ ನಿಮ್ಮಲ್ಲಿ ಇರಬಹುದು ನಮ್ಮಲ್ಲಂತೂ

ಇಲ್ಲ. ಇನ್ನು ಅಲ್ಪ ಸಂಖ್ಯಾತರ ಬಗ್ಗೆ ಬಹಳ ಕಳಕಳಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಇದಕ್ಕೆ ಒಂದು ನಿಗಮವನ್ನು ಸ್ಥಾಪನೆ ಮಾಡಿದ್ದೇವೆಂದು ಹೇಳಿದ್ದಾರೆ ಬಹಳ ಸಂತೋಷ, ಈ ನಿಗಮದ ಸ್ಥಾಪನೆಯಾದದ್ದು ಮಾತ್ರವಲ್ಲದೆ ಅವರಿಗೆ ಕಾರ್ಯಕ್ರಮ ಏನೂ ತಾವು ಕೊಡಲಿಲ್ಲ. ಈ ನಿಗಮದ ಅಧ್ಯಕ್ಷರಿಗೆ, ಸದಸ್ಯರಿಗೆ ಏನಾದರೂ ಚುಚ್ಚು ಬಾಣವನ್ನು ಚುಚ್ಚಿ ಕೂಡಲೇ ಕೆಲಸ ಕಾರ್ಯ ಕೈಗೊಳ್ಳಲು ಮುಂದೆ ಬನ್ನಿ. ಅಲ್ಪ ಸಂಖ್ಯಾತರಿಗೆ ಏನು ಸವಲತ್ತು ಕೊಡಬೇಕು ಅದನ್ನು ಕೊಡು ವಂತಹ ಒಂದು ಕಾರ್ಯ ಕ್ರಮವಾಗಬೇಕು. ಇದಕ್ಕೆ ಒಂದು ಆಯೋಗವನ್ನು ನೇಮಿಸಿದ್ದೀರಿ ಅದರ ವರದಿಯೂ ಕೂಡಬಂದಿದೆ ಆದೂ ಕೂಡ ಜಾರಿಯಲ್ಲಿ ಬಂದು ಅದಷ್ಟು ತ್ವರಿತವಾಗಿ ಇವರು ಕೆಲಸ ಮಾಡಿದರೆ ಅಲ್ಪ ಸಂಖ್ಯಾತರ ಬಗ್ಗೆ ಅವರು ಹೇಳಿರತಕ್ಕಂತಹ ಮಾಹಿತಿಗೆ ಅರ್ಥ ಬರುತ್ತದೆ.

ಹೋಟೆಲಿನವರ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಇನ್ನೂ ಅವರಿಗೆ ತೆರಿಗೆಯನ್ನು ಹೆಚ್ಚಿಗೆ ಮಾಡಬೇಕಾಗಿತ್ತು, ಅವರ ದುಂದುಗಾರಿಕೆಯ ಮೊತ್ತವನ್ನು ಬಳಕೆದಾರರಾಗಿ, ಗ್ರಾಹಕನಾಗಿ ನೋಡಿದರೆ ಗೊತ್ತಾಗುತ್ತದೆ, ದಿನದಿಂದ ದನಕ್ಕೆ ಒಂದು ವಾರದಿಂದ ಇನ್ನೊಂದು ವಾರಕ್ಕೆ ದರಗಳನ್ನು ಜಾಸ್ತಿ ಮಾಡುತ್ತಾರೆ, ಕಾಫಿಗೆ ಒಂದು ದರ, ತಿಂಡಿ ತಿನಿಸುಗಳಿಗೆ ಬೇರೆ ದರ, ಊಟದ ದರಗಳೂ ಕೂಡ ಬೇರೆ ಇವೆ ನಾಲ್ಕು ರೂಪಾಯಿ ಇದ್ದದು, ಆರು ರೂಪಾಯಿ ಆಗುತ್ತದೆ. ಆರು ರೂಪಾಯಿ ಇದುದ್ದು ಒಮ್ಮೆಲೇ ಹತ್ತು ರೂಪಾಯಿಯಾಗುತ್ತದೆ ಎಷ್ಟೋ ಆದರೂ ಕೊಟ್ಟು ತಿಂದು ಬರಬೇಕು ಅಂತಹ ಪರಿಸ್ಥಿತಿ ಇದೆ. ೧೦೦ಕ್ಕೆ ೮೦ ಗ್ರಾಹಕರಿಗೆ ಆಗತಕ್ಕಂತಹ ಅನ್ಯಾಯ ಬಹಳ ದೊಡ್ಡದು ಆದರೆ ಹೋಟೆಲ್ ಉದ್ಯಮಿಗಳಿಗೆ ಏನೂ ತೊಂದರೆ ಯಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಹೋಟೆಲ್ ಉದ್ಯಮಿಗಳ ಮೇಲೆ ಇನ್ನೂ ಹೆಚ್ಚು ತೆರಿಗೆಯನ್ನು ಹಾಕಿದ್ದಿದ್ದರೆ ೧೦೦ ಕೋಟಿ ರೂಪಾಯಿ ಗಳ ಸಂಪನ್ಮೂಲ ಕೂಡಿ ಬರುತ್ತಿತ್ತೆಂದು ನನಗನ್ನಿಸುತ್ತದೆ. ಅವರ ಮಟ್ಟಿಗೆ ಇದು ಏನೂ ಸಾಲದೆಂದು ಹೇಳಲು ಅಪೇಕ್ಷೆ ಪಡುತ್ತೇನೆ. ಇನ್ನು ಕಾರ್ಮಿಕರ ಬಗ್ಗೆ ಹೇಳುವುದಾದರೆ ಕಾರ್ಮಿಕರು ಸಂಪು ಮಾಡಿಲ್ಲ ಮುಷ್ಕರ ಮಾಡಿಲ್ಲ ಇದರಿಂದ ಸಂತೋಷವಾಗಿದೆಯೆಂದು ಹೇಳಿದರು. ಕಾರ್ಮಿಕರಿಗೆ ಬಹಳ ತೊಂದರೆ ಇದೆ, ಉದಾಹರಣೆಗೆ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಕಾರ್ಮಿಕರು ಲಕ್ಷಗಟ್ಟಲೆ ಇದ್ದಾರೆ ಅವರಿಗೆ ತುಟ್ಟಿ ಭತ್ಯೆ. ಕನಿಷ್ಠ ವೇತನದ ಪ್ರಕಟನೆ ಇನ್ನೂ ಆಗಿಲ್ಲ ಮಾಲೀಕರು ಹೇಳುತ್ತಾರೆ ಅಷ್ಟು ಕೊಡುವುದಕ್ಕಾಗುವುದಿಲ್ಲ ಎಂದು, ಅವರಿಗೆ ಈಗ ಸಿಗುವಂಥಾದ್ದು ೧೬ ರೂಪಾಯಿಗಳು ಮಾತ್ರ, ಒಂದು ವೇಳೆ ಕನಿಷ್ಠ ದರ ವೇತನ ನಿಗದಿಯಾದರೆ ೧೮ ರೂಪಾಯಿಗಳು ಸಿಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಲಿ ಕಟ್ಟುವುದಕ್ಕೆ ಮುಂತಾದ ಕೆಲಸಗಳಿಗೆ ೩೫ ರೂಪಾಯಿ ಗಳಿಗಿಂತ ಕಡಿಮೆಗೆ ಅವರು ಒಪ್ಪುವುದಿಲ್ಲ. ಬೇರೆ ಕಡೆಗಳಲ್ಲಿ ೩೫ ರೂಪಾಯಿಗಳ ಕೂಲಿ ಇಲ್ಲ, ಇದರಿಂದಾಗಿ ಬಿಜಾಪುರ ಬಳ್ಳಾರಿಗಳಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಕೂಲಿಕಾರರು ಬರುತ್ತಿದ್ದಾರೆ. ಹೆಂಚಿನ ಕಾರ್ಮಿಕರು ಹೋರಾಟ ಮಾಡಿಕೊಂಡು, ಒಂದು ನಿಯೋಗದ ಮೂಲಕ ಬಂದು ಮಾನ್ಯ ಮುಖ್ಯ ಮಂತ್ರಿಗಳು ಕಂಡಿರಬಹುದು, ಈ ಕನಿಷ್ಠ ವೇತನದ ಪ್ರಕಟಣೆಯನ್ನು ಅತಿ ಶೀಘ್ರವಾಗಿ ಮಾಡಿದರೆ ಲಕ್ಷಗಟ್ಟಲೆ ಹೆಂಚಿನ ಕಾರ್ಮಿಕರು ಮೇಲೇರಿ ಬರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳು ವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಇದನ್ನು ಬಜೆಟಿನಲ್ಲಿ ಮಧ್ಯಪಾನದ ಬಗ್ಗೆ ಹೇಳಿದ್ದಾರೆ ಅವರಿಗೆ ಸ್ವಲ್ಪ ಜಾಸ್ತಿ ತೆರಿಗೆ ಹಾಕಿದ್ದುದು ಬಹಳ ಸಂತೋಷ. ನಾನೂ ಕೂಡ ಪಾನನಿಷೇಧ ಮಾಡಬೇಕೆಂದು ಹೇಳುವವನು, ಇದನ್ನು ಮಾಡಿದರೆ ೧೦೦ಕ್ಕೆ ೧೦೦ ರಷ್ಟು ಬಡ ಜನರ, ಕೋಟಿ ಕೋಟಿ ಜನರ ಅಭ್ಯುದಯ ವಾಗುತ್ತದೆ ಅವರ ಮಕ್ಕಳ ವಿದ್ಯಾಭ್ಯಾಸ ಒಳ್ಳೆಯದಾಗುತ್ತದೆ. ಅವರ ಆರ್ಥಿಕ ಪರಿಸ್ಥಿತಿ ಒಳ್ಳೆಯ ದಾಗುತ್ತದೆ. ಅದೇ ರೀತಿ ಮನೆಗೆ ಬರುವಾಗ ಸುಖವಾಗಿ ಬರುತ್ತಾನೆ. ಈ ಚಟದಿಂದಾಗಿ ಹೆಂಡತಿಯ ಕರೀಮಣಿ ಮಾರುತ್ತಾರೆ ಜಾನುವಾರುಗಳನ್ನು ಮಾರುತ್ತಾರೆ, ಕೊನೆಗೆ ದಿನನಿತ್ಯ ಹೊಡೆತ ಬಡಿತ ಗಳಾಗುತ್ತವೆ. ಇನ್ನು ಮಧ್ಯಪಾನವನ್ನು ಸಹಕಾರ ಸಂಘಗಳಿಗೆ ಕೊಡಬೇಕೆಂದು ಸರ್ಕಾರದವರು ಹೇಳುತ್ತಾರೆ. ಇದು ನಿಜವಾಗಿಯೂ ಒಳ್ಳೆಯದಲ್ಲ ಇವೊತ್ತು ಇದು ರಾಜ್ಯದಲ್ಲಿ ನಡೆಯುತ್ತಿದೆ ನಂತರ ಇದು ಸಹಕಾರ ಸಂಘಗಳಿಗೂ ಹೋಗಿ ಲೀಲಾಜಾಲವಾಗಿ ಕುಡಿಯುತಕ್ಕಂತಹ ವ್ಯವಸ್ಥೆ ಮಾಡಿ ದಂತಾಗುತ್ತದೆ. ಇದರಿಂದಾಗಿ ಲಕ್ಷಗಟ್ಟಲೆ ಬಡವರು ತೊಂದರೆಯನ್ನು ಅನುಭವಿಸುತ್ತಾರೆ.

೩-೦೦ ಪಿ. ಯಂ.

ಸಹಕಾರ ಸಂಘಗಳ ಮೂಲಕ ವಿತರಣೆ ಮಾಡತಕ್ಕಂಥದ್ದು ಒಳ್ಳೆಯದಲ್ಲ. ಕಾಲ ಕ್ರಮೇಣದಲ್ಲಿ ಈ ಪಾನನಿಷೇದ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿದರೆ ನನಗೆ ತುಂಬಾ ಸಂತೋಷ

ವಾಗುತ್ತದೆ. ಇನ್ನು ಪ್ರವಾಸ ತಾಣದ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ಪ್ರವಾಸಿ ತಾಣವನ್ನು ಪಶ್ಚಿಮ ಕರಾವಳಿಯಲ್ಲಿ ಮಾಡಬೇಕೆಂದು ಕೇಂದ್ರದಿಂದ ಅಧಿಕಾರಿಗಳು ಬಂದಿದ್ದಾರೆ, ಅದರ ಬಗ್ಗೆ ಪರಿಶೀಲನೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಕಳೆದ ವರ್ಷ ಕೂಡಾ ಹೇಳಿದ್ದೆ. ಸೋಮೇಶ್ವರದಿಂದ ಉಳ್ಳಾಲದವರೆಗೆ ಕರಾವಳಿ ಪ್ರದೇಶ ಪ್ರವಾಸಿಗರನ್ನು ಆಕರ್ಷಣೆ ಮಾಡುವ ಯೋಗ್ಯ ಸ್ಥಳವಾಗಿದೆ ಎಂದು ಹೇಳಿದ್ದೆ ಅದಕ್ಕೆ ಮಂತ್ರಿಗಳು ಸಹಾ ಸಾಧ್ಯವಾದರೆ ಬರುವ ವರ್ಷ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದರು. ಈಗ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇಲ್ಲಿಗೆ ಲಕ್ಷ ಲಕ್ಷ ಜನರು ಬರುತ್ತಿದ್ದಾರೆ. ದೇವಸ್ಥಾನಗಳು ಇವೆ. ಚರ್ಚ್‌ಗಳು ಇವೆ. ಸೋಮೇಶ್ವರದಿಂದ ಉಳ್ಳಾಲದವರೆಗೆ ಇರತಕ್ಕಂಥ ಕರಾವಳಿ ಪ್ರದೇಶದಲ್ಲಿ ಇಂಥ ಒಂದು ಪ್ರವಾಸಿ ತಾಣ ಮಾಡಿದರೆ ದಕ್ಷಿಣದ ಕನ್ನಡದ ಮಟ್ಟಿಗೆ ಒಂದು ಒಳ್ಳೆಯ ವ್ಯವಸ್ಥೆಯಾಗುತ್ತಿದೆ ಎಂದು ನಾನು ಅಪೇಕ್ಷೆ ಮಾಡುತ್ತೇನೆ. ವನನಿರ್ಮಾಣದ ಬಗ್ಗೆ ಹೇಳಿದ್ದಾರೆ. ಶಾಲಾ ಮಕ್ಕಳು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಬಹಳ ಉಪಕಾರ ಮಾಡಿದ್ದಾರೆ. ಆದರೆ ಶಾಲಾ ಮಕ್ಕಳು ಮಾತ್ರ ಮಾಡಿದ್ದಲ್ಲಗೆ ಬೇರೆ ಯಾರೂ ಕಾಣುವುದಿಲ್ಲ. ವನಸಂಪತ್ತು ಬೆಳೆಯಲಿಕ್ಕೆ ಕೋಟಿ ಕೋಟಿ ಸಸಿಗಳನ್ನು ನೆಟ್ಟಿದ್ದೇವೆ. ಆದರೆ ಮತ್ತೊಂದು ಕಡೆ ಕಾಡನ್ನೇ ನಾಶ ಮಾಡುತ್ತಿದ್ದಾರೆ. ಕಾಡಿನಲ್ಲಿ ಎಲ್ಲಿ ನೋಡಿದರೂ ಪ್ರಕೃತಿ ಸೌಂದರ್ಯವನ್ನು ಕಾಣಲು ಸಾಧ್ಯವಾಗಿಲ್ಲ. ಎಲ್ಲಿ ನೋಡಿದರೂ ಕಾಡುಗಳನ್ನು ಕಡಿದು ನಾಶ ಮಾಡಿಬಿಟ್ಟಿದ್ದಾರೆ. ಆದ್ದರಿಂದ ಈ ವನಸಂಪತ್ತು ಬೆಳೆಯಬೇಕಾದರೆ ಈ ಕಾಡನ್ನ ಕಡಿಯತಕ್ಕಂಥ ಈ ಒಂದು ವಿಚಾರವನ್ನು ಸಂಪೂರ್ಣವಾಗಿ ಸರ್ಕಾರದವರು ನಿಲ್ಲಿಸತಕ್ಕಂಥ ಒಂದು ಕಾರ್ಯಕ್ರಮವನ್ನು ಸರ್ಕಾರ ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಎಷ್ಟು ಸಸಿಗಳನ್ನು ನೆಟ್ಟರೂ ಪ್ರಯೋಜನ ಇಲ್ಲ. ಈ ಸಸಿಗಳನ್ನು ನೆಟ್ಟು ಸುಮ್ಮನೆ ಕುಳಿತರೆ ಆಗುವುದಿಲ್ಲ. ಅದಕ್ಕೆ ನೀರು ಬೇಕು ಬೇಲಿ ಹಾಕಬೇಕು ದನಗಳು ಜಾನವಾರುಗಳು ಮೇಯದ ಹಾಗೆ ನೋಡಿಕೊಳ್ಳಬೇಕು. ಇಷ್ಟೆಲ್ಲಾ ಆದರೆ ಸಸಿಗಳು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಹತ್ತು ಸಾವಿರ ಸಸಿಗಳನ್ನು ನೆಟ್ಟರೆ ಕೊನೆಗೆ ಹತ್ತು ಉಳಿಯುವುದು ಕಷ್ಟ. ಬೆಳೆಯುವಂತಹ ಒಳ್ಳೆಯ ಮರಗಳನ್ನು ಒಳ್ಳೆಯ ಹಸಿರು ವನಗಳನ್ನು ಈ ರೀತಿ ಕೆಲವೇ ಜನ ಲಾಭವನ್ನು ಮಾಡಲಿಕ್ಕೆ ಕಾಡುಗಳ್ಳರು ಕಡಿದುಕೊಂಡು ಹೋಗುತ್ತಾರೆ ಇದರ ಬಗ್ಗೆ ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಮಾತ್ರ ಈ ವನಸಂಪತ್ತಿಗೆ ಬೆಲೆ ಬಂದೀತು ಎಂದು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಮೀನುಗಾರರ ಬಗ್ಗೆ ಈ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ೨೫೦ ಕಿಲೋ ಮೀಟರ್‌ಗೂ ಹೆಚ್ಚಿನ ಈ ಒಂದು ಕರಾವಳಿಯಲ್ಲಿ ಮೀನುಗಾರರು ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ಎಷ್ಟೋ ಕೋಟಿ ರೂಪಾಯಿಗಳನ್ನು ನಮಗೆ ತಂದು ಕೊಡತಕ್ಕಂಥದ್ದು ಇದೆ. ಅಲ್ಲದೇ ಈ ಜನರು ಬಹಳ ಬಡವರು. ಕ್ಷಾಮ ಬೇರೆ ಬಂದಿದೆ. ಮೀನುಗಾರರಿಗೆ ಇನತ್ತು ಮೀನು ಸಿಗುತ್ತಿಲ್ಲ. ಜನ ಬೊಬ್ಬೆ ಹೊಡೆಯುತ್ತಿದ್ದಾರೆ. ಅವರಿಗೆ ಬೋಟಿಗೆ ಆಗಲೀ, ಡೀಸೆಲ್ ಎಣ್ಣೆಗಾಗಲೀ ಸಬ್ಸಿಡಿ ಏನೂ ಕೊಟ್ಟಿಲ್ಲ ಅವರಿಗೆ ಸಾಲದ ಕಂತುಗಳನ್ನು ಕೊಡಲಿಕ್ಕೂ ಸಹಾ ಸಾಧ್ಯವಾಗಿಲ್ಲ. ಮೀನುಗಾರರ ಬಗ್ಗೆ ಅವರಿಗೆ ಬೇಕಾದಂಥ ಸಹಾಯ ಸಹಕಾರದ ವ್ಯವಸ್ಥೆಯನ್ನು ಈ ಬಜೆಟ್‌ನಲ್ಲಿ ತೋರಿಸಿದ್ದರೆ ಒಳ್ಳೆಯದಾಗುತಿತ್ತು, ಆದರೆ ಅಂಥಾದ್ದು ಇದರಲ್ಲಿ ಏನೂ ಕಾಣುತ್ತಿಲ್ಲ. ಆದ್ದರಿಂದ ಇವರ ಬಗ್ಗೆ ಆಲೋಚನೆ ಮಾಡಿ ಈ ಮೀನುಗಾರರ ಕಷ್ಟವನ್ನು ಪರಿಹರಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ ಇನ್ನು ಶ್ರೀಮಂತರು ಶ್ರೀಮಂತರಾಗುತ್ತಾ ಇದ್ದಾರೆ, ಬಡವರು ಬಡವರಾಗುತ್ತಿದ್ದಾರೆ. ಪ್ರತಿಯೊಬ್ಬರೂ ಬಡವರ ಬಗ್ಗೆಯೇ ಮಾತನಾಡುವುದು. ಗ್ರಾಹಕರು, ಮಧ್ಯಮ ವರ್ಗದವರು ಕೆಲಸಗಾರರನ್ನು ನೋಡಿದರೆ ಶ್ರೀಮಂತರಿಗೆ ಮಾತ್ರ ಯಾವ ಅಡೆತಡೆಯೂ ಬರುತ್ತಿಲ್ಲ. ಅವರು ಶ್ರೀಮಂತರಾಗಿ ಬೆಳೆಯುತ್ತಿದ್ದಾರೆ, ಹಿಂದೆ ನಮ್ಮಲ್ಲಿ ಕವಿಗಳು ಹೇಳಿದ್ದುದು ನೆನಪಿಗೆ ಬರುತ್ತದೆ, ೬೦ ವರ್ಷಗಳ ಹಿಂದೆಯೇ ನಮ್ಮ ಕವಿಗಳು ಹೇಳಿದ್ದಾರೆ. ನಮ್ಮ ಕವಿ ರಾಜರತ್ನಂ ಈ ರೀತಿ ಹೇಳಿದ್ದಾರೆ.

"ನಾಯ್ನ ನಾಯೇತಿನ್ನಾದಂತೆ
ಮೀಗ್ಗೆ ಮೀನೆ ತಿಂಡಿ
ಮನ್ಸನ್ ಮನ್ಸ ತಿನ್ನ್ತಾನೀಗ
ಜೀವ ಪೂರ ಹಿಂಡಿ"

ನಾಯಿಯನ್ನು ನಾಯಿ ಕಚ್ಚಿ ಕಚ್ಚಿ ತಿನ್ನುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ದೊಡ್ಡ ಮೀನು ಸಣ್ಣ ಮೀನನ್ನು ಗುಳುಂ ಎಂದು ನುಂಗುವುದನ್ನು ನಾವು ಕಾಣುತ್ತಿದ್ದೇವೆ. ಅನೇಕ ಜಹಗೀರುದಾರರು ಬಡವರು, ಮಧ್ಯಮ ವರ್ಗದವರನ್ನು ಶೋಷಣೆ ಮಾಡಿ ಎರಡು ರೂಪಾಯಿಗಳ ಚಿಮಣಿಯನ್ನು ನಾಲ್ಕು ರೂಪಾಯಿಗೆ ಕಾಳಸಂತೆಯಲ್ಲಿ ಮಾರಿ ಹಣ ಮಾಡಿ ಜನರನ್ನು ಇಷ್ಟರಮಟ್ಟಿಗೆ ಸೂರೆ ಮಾಡುತ್ತಿದ್ದಾರೆ ಎಂದು ಭವಿಷ್ಯವನ್ನು ೫೦ ವರ್ಷಗಳ ಹಿಂದೆಯೇ ಹೇಳಿದ್ದಾರೆ.

ಇದನ್ನು ಕವಿಗಳು ೫೦ ವರ್ಷದಿಂದಲೂ ಹೇಳುತ್ತಿದ್ದಾರೆ. ಈ ರೀತಿಯಾಗಿ ಸುಧಾರಣೆ ಮಾಡಿದರೆ ಮಾತ್ರ ಬಡತನವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯ ಎಂದು ಕವಿಕುವೆಂಪುರವರು ಏನು ಹೇಳಿದ್ದಾರೆ ಅವರ ಒಂದು ವಾಕ್ಯವನ್ನು ತಮ್ಮ ಮುಂದೆ ಇಡುತ್ತೇನೆ. ಅವರು ಈ ರೀತಿ ಹೇಳಿದ್ದಾರೆ. ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ-ಬಡತನವ ಬಾಜದ ಮಟ್ಟ ಕೀಳಬನ್ನಿ ಎಂದು ಹೇಳಿದ್ದಾರೆ ಅಂದರೆ ಗುಡಿ ಮಸೀದಿ ಚರ್ಚುಗಳಲ್ಲಿ ಕುಳಿತರೆ ಬಡತನ ನಿರ್ಮೂಲವಾಗುವುದಿಲ್ಲ. ಇದರ ಬುಡ ಮಟ್ಟ ಕೀಳಲು ಎಲ್ಲರೂ ಹೊರಬನ್ನಿ ಎಂದು ಅವರು ಆಗಲೇ ನಮಗೆಲ್ಲಾ ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಸರ್ಕಾರ ಈವೊತ್ತಿನ ಬಡ್ಜೆಟ್ಟಿನಲ್ಲಿ ರೈತರ ಬಗ್ಗೆ ಬಡವರ ಬಗ್ಗೆ ಎಷ್ಟರ ಮಟ್ಟಿಗೆ ಅನುಕಂಪ ತೋರಿಸಬೇಕಾಗಿತ್ತೋ ಅಷ್ಟರ ಮಟ್ಟಿಗೆ ತೋರಿಸಿಲ್ಲ, ನಮ್ಮ ಭಾರತದಲ್ಲಿ ಹಿಂದೆ ೩೩ ಕೋಟಿ ಪ್ರಜಾಸಂಖ್ಯೆ ಇತ್ತು, ಈಗ ೭೩ ಕೋಟಿ ಆಗಿದೆ. ಪ್ರಜಾಸಂಖ್ಯೆ ಬೆಳೆದ ಹಾಗೆಯೇ ಕೂಲಿಗಾರರ ಸಂಖ್ಯೆಯೂ ಬೆಳೆಯುತ್ತಾ ಇದೆ. ಅದನ್ನೆಲ್ಲಾ ಅಳವಡಿಸಿಕೊಂಡು ಯೋಜನೆ ತಯಾರು ಮಾಡಿದರೆ ಮಾತ್ರ ಬಡವರ ಉದ್ಧಾರ ಮಾಡುವುದಕ್ಕೆ ರೈತರ ಉದ್ಧಾರ ಮಾಡುವುದಕ್ಕೆ ಸಾಧ್ಯ, ಇಲ್ಲದಿದ್ದರೆ ಸಾಧ್ಯವಿಲ್ಲ, ಇವರ ಬಗ್ಗೆ ಏನು ಮಾಡುತ್ತೇವೆನ್ನುವುದನ್ನು ಈ ಬಡ್ಜೆಟ್ಟಿನಲ್ಲಿ ತೋರಿಸಬೇಕಾಗಿತ್ತು ಬಡವರ ಬಗ್ಗೆ ಹೆಚ್ಚಿನ ಕಳಕಳಿ ತೋರಿಸಲಿಲ್ಲ ತೋರಿಸುವುದಕ್ಕೆ ಸಾಧ್ಯ ಇತ್ತು ತೋರಿಸಲಿಲ್ಲ ಅದೇ ರೀತಿಯಲ್ಲಿ ನಮ್ಮ ಗ್ರಾಹಕರ ಬಗ್ಗೆ ಇವರು ಏನು ಹೇಳಿದ್ದಾರೆ ? ಆ ಪ್ರಕಾರ ನಮ್ಮ ಗ್ರಾಹಕರಿಗೆ ಸರಿಯಾಗಿ ಸುಖ ಸಿಕ್ಕುವುದಿಲ್ಲ. ಇವೊತ್ತಿನ ದಿವಸ ನಾವು ಯಾವ ಪ್ರದೇಶದಲ್ಲಿ ನೋಡಿದರೂ ಕೂಡ ಕಾಳ ಸಂತೆ ಕೋರರನ್ನೂ ಕಳ್ಳ ಸಾಗಾಣಿಕೆದಾರರನ್ನೂ ನೋಡುತ್ತಿದ್ದೇವೆ. ಇದು ಕಡಿಮೆಯಾಗಿಲ್ಲ, ಈ ಬಗ್ಗೆ ಮಾನ್ಯ ಕಡಪಟ್ಟಿಯವರು ಹೇಳಿದ್ದಾರೆ. ಈ ಕಾಳಸಂತೆಕೋರರು, ಕಳ್ಳ ಸಾಗಾಣಿಕೆದಾರರು ಬರೀ ನಮ್ಮ ಕರಾವಳಿಯಲ್ಲೇ ಇದ್ದಾರೆ ಎಂದಲ್ಲ ಎಲ್ಲಾ ಕಡೆಯೂ ಇದ್ದಾರೆ. ಈ ಕಾಳಸಂತೆಕೋರರದ್ದು ಹಾಗೂ ಕಳ್ಳ ಸಾಗಾಣಿಕೆದಾರರದ್ದೂ ಒಂದು ಪಟ್ಟಿ ಮಾಡಿ ಇವರನ್ನು ಕಂಡು ಹಿಡಿದಿದ್ದರೆ, ಅವರ ಮೇಲೆ ಧಾಳಿ ಗೀಳಿ ಮಾಡಿದ್ದರೆ ಅನೇಕ ಕೋಟ್ಯಾಂತರ ರೂಪಾಯಿಗಳು ಸಿಗುತ್ತಿತ್ತು. ಅವರ ಬಗ್ಗೆ 'ಚಕಾರ' ವನ್ನು ಎತ್ತುವುದಕ್ಕೂ ಯಾರು ಹೋಗುವುದಿಲ್ಲ ಕಾಳಸಂತೆಕೋರರನ್ನೂ ಮತ್ತು ಕಳ್ಳ ಸಾಗಾಣಿಕೆದಾರರನ್ನೂ ಮತ್ತು ದೊಡ್ಡ, ದೊಡ್ಡ ಉದ್ದಿಮೆಗಾರರು ಯಾರು ಇದ್ದಾರೆ ಅವರ ಬಗ್ಗೆ ಹೆಚ್ಚಿನ ತೆರಿಗೆಯನ್ನು ಹಾಕಬೇಕಾಗಿತ್ತು ಎಂದು ಹೇಳುತ್ತೇನೆ. ಇನ್ನು ಅನುಬಂಧ ೨೧ರಲ್ಲಿ ಮೋಟಾರ ವೆಹಿಕಲ್ಸ್‌ಗೆ ೩ ತಿಂಗಳಿಗೊಂದು ಸಾರಿ ತೆರಿಗೆ ಜಾಸ್ತಿ ಮಾಡಿದ್ದಾರೆ ೧೨ ಸಾವಿರ ಕಿಲೋಗ್ರಾಂ ಮೀರಿದ್ದರೆ ೧೪೩೫ ಇದ್ದುದನ್ನು ೧೬೬೦ ಮಾಡಿದ್ದಾರೆ. ಹಾಗೆಯೇ ೧೩,೫೦೦ ಕಿಲೋಗ್ರಾಂ ಮೀರಿದ್ದರೆ ೧೫೬೦ ಇದ್ದುದನ್ನು ೧೮೮೫ ಮಾಡಿದ್ದಾರೆ ಹಾಗೆಯೇ ೧೫ ಸಾವಿರ ಕಿಲೋಗ್ರಾಂ ಮೀರಿದ್ದರೆ ೧೫೬೦ ಇದ್ದುದನ್ನು ಪ್ರತಿ ೨೫೦ ಕಿಲೋಗ್ರಾಂ ಅಥವಾ ಅದರ ಒಂದು ಭಾಗಕ್ಕೆ ೩ ತಿಂಗಳಿಗೆ ೬೦ ರೂಪಾಯಿಗಳು ಎಂದು ಮಾಡಿದ್ದಾರೆ. ಜನರನ್ನು ಹೊತ್ತು ಕೊಂಡು ಹೋಗತಕ್ಕಂಥ ವಾಹನಕ್ಕೆ ಈ ರೀತಿಯಾಗಿ ತೆರಿಗೆ ಹೆಚ್ಚಿಸಿರುವುದು ಬಹಳ ಕಷ್ಟವಾಗುತ್ತದೆಂದು ನಾನು ಹೇಳುತ್ತೇನೆ. ಇನ್ನು ಕೆಲವು ದಿನನಿತ್ಯ ಬಳಕೆಯ ವಸ್ತುಗಳಿಗೆ ಕೆಲವು ತೆರಿಗೆಗಳನ್ನು ಕಡಿಮೆ ಮಾಡಿದ್ದಾರೆ. ಉದಾಹರಣೆ ಹೇಳುವುದಾದರೆ ಹುಣಿಸೆ ಹುಳಿಗೆ ಕಡಿಮೆ ಮಾಡಿದ್ದಾರೆ, ಕೈ ಮಗ್ಗದ ನೂಲಿಗೆ ಕಡಿಮೆ ಮಾಡಿದ್ದಾರೆ. ಕಾಫಿ ವನಸ್ಪತಿಗೆ ಕಡಿಮೆ ಮಾಡಿದ್ದಾರೆ ದಿನನಿತ್ಯ ಮಹಿಳೆಯರು ಬಳಸುವ ವಸ್ತುಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡಿದ್ದಾರೆ ಆದರೆ ಬಡವರಿಗೂ ಮತ್ತು ರೈತರಿಗೂ ಉಪಕಾರ ಮಾಡುವ ದೃಷ್ಟಿಯಿಂದ ಇದು ಇದೆ ಎನ್ನುವುದು ಕಾಣಲಿಲ್ಲ. ಇದು ಹೆಚ್ಚಿಗೆ ಹೋಟೇಲ್ ಉದ್ದಿಮೇದಾರರಿಗೆ ಹಾಗೂ ಶ್ರೀ ಮಂತರಿಗೆ ಅನುಕೂಲವಾಗುತ್ತದೆ ಎಂದು ಹೇಳಿ ಮಾನ್ಯ ಸಭಾಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಸಾಲಿನ ಆಯವ್ಯಯ ಪತ್ರವನ್ನು ವಿಶ್ಲೇಷಣೆ ಮಾಡುವಾಗ ನಾವು ಗಮನಿಸಬೇಕಾಗಿರುವಂತಹ ಮುಖ್ಯ ಅಂಶವೆಂದರೆ, ಜಿಲ್ಲಾಪರಿಷತ್‌ಗಳಿಗೆ ಮತ್ತು ಮಂಡಲ್ ಪಂಚಾಯತ್‌ಗಳಿಗೆ ಇವರು ಕೊಟ್ಟಿರುವಂತಹ

ಒಟ್ಟು ಗ್ರ್ಯಾಂಟ್‌ನ್ನು ಗಮನಿಸುವುದು ಈ ಸಂಸ್ಥೆಗಳಿಗೆ ಪ್ಲಾನ್‌ನಲ್ಲಿ ೩೫೦ ಕೋಟಿ ರೂಪಾಯಿಗಳನ್ನು ಮತ್ತು ನಾನ್ ಪ್ಲಾನ್‌ನಲ್ಲಿ ೬೦೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಹಣವನ್ನು ಇಪ್ಪತ್ತು ಜಿಲ್ಲೆಗಳಿಗೆ ಮತ್ತು ೧೭೫ ತಾಲ್ಲೂಕುಗಳಿಗೆ ಸಮನಾಗಿ ಹಂಚಿಕೆ ಮಾಡಿದರೆ ಪ್ರತಿಯೊಂದಕ್ಕೂ ಒಂದೂ ಮುಕ್ಕಾಲು ಕೋಟಿ ರೂಪಾಯಿಗಳು ಬರುತ್ತದೆ. ಇಷ್ಟು ಕಡಿಮೆ ಹಣದಲ್ಲಿ ಮಂಡಲ್ ಪಂಚಾಯಿತಿಗಳು ಯಾವ ರೀತಿ ಆಡಳಿತ ನಡೆಸಲು ಸಾಧ್ಯವಾಗುತ್ತದೆ ? ಇವುಗಳ ಅಧೀನದಲ್ಲಿ ಬರುವಂತಹ ಸ್ಕೂಲುಗಳು, ಆಸ್ಪತ್ರೆಗಳು ಹಾಗೂ ಇನ್ನಿತರ ವ್ಯವಸ್ಥೆಗಳನ್ನೆಲ್ಲಾ ಮೇಂಟೇನ್ ಮಾಡಲು ಈ ಹಣ ಸಾಲುತ್ತದೆಯೇ ? ಈ ಕಾರಣದಿಂದ ಈ ಒಂದು ಯೋಜನೆಯೇ ಫೇಲ್ ಆಗಬಹುದೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಲದ ಬಡ್ಜೆಟ್‌ನ ಪ್ರಾರಂಭದಲ್ಲಿ ನಮ್ಮ ರಾಜ್ಯದ ಸುಮಾರು ೬೦,೦೦೦ ಮಂದಿ ಜನತೆಯ ಚುನಾಯಿತ ಪ್ರತಿನಿಧಿಗಳು ಸೇರಿದ್ದ ಬೃಹತ್ ಸಭೆಯು ಭವ್ಯ ದೃಶ್ಯ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ ಎಂದು ಹೇಳಿದ್ದಾರೆ. ಅವರೆಲ್ಲರೂ ಇಲ್ಲಿಗೆ ಬಂದು ಹೋಗದಿದ್ದರೆ ಈ ಒಂದು ವ್ಯವಸ್ಥೆಯ ಪರಿಚಯ ಅವರಿಗೆ ಆಗುತ್ತಿರಲಿಲ್ಲ ಎಂಬುದು ಇವರ ಅಭಿಪ್ರಾಯ ಆಗಿರಬಹುದು. ಆದರೆ ಇಷ್ಟೆಲ್ಲಾ ಆದ ಮೇಲೂ ಪ್ರಧಾನರ ಮತ್ತು ಉಪ–ಪ್ರಧಾನರ ಚುನಾವಣೆಗಳು ನಡೆಯಲಿಲ್ಲ. ಅದು ಮುಂದಕ್ಕೆ ಹೋಯಿತು. ಇದಕ್ಕೆ ಕಾರಣ ಎಲ್ಲರಿಗೂ ಗೊತ್ತು. ಕೆಲವರನ್ನು ನಾಮಕರಣ ಮಾಡಬೇಕಾದ ಕಾರಣದಿಂದ ಇದು ಮುಂದಕ್ಕೆ ಹೋಯಿತು. ಈ ನಾಮಕರಣ ವ್ಯವಸ್ಥೆಯನ್ನು ತಪ್ಪಿಸಿ ಪ್ರಧಾನರ ಮತ್ತು ಉಪಪ್ರಧಾನರ ಚುನಾವಣೆಗೆ ವ್ಯವಸ್ಥೆ ಮಾಡಿದ್ದರೆ ಇವು ಇಷ್ಟರ ಹೊತ್ತಿಗೆ ತಮ್ಮ ಕೆಲಸಗಳನ್ನು ಪ್ರಾರಂಭ ಮಾಡುತ್ತಿದ್ದವು. ಆದರೆ ಇವು ಮುಂದುವರೆಯಲು ತಾವು ಬಿಡಲಿಲ್ಲ. ಮುಖ್ಯವಾಗಿ ನೀವು ಪ್ಲಾನ್‌ನಲ್ಲಿ ೩೫೦ ಕೋಟಿ ರೂಪಾಯಿಗಳನ್ನು ಏನು ಕೊಟ್ಟಿದ್ದೀರಿ, ಇದು ಬಹಳ ಕಡಿಮೆ ಎಂದು ನನ್ನ ಅನಿಸಿಕೆ.

ಇನ್ನು ನಮ್ಮ ದೇಶದಲ್ಲಿ ಶೇಕಡಾ ೮೦ರಷ್ಟು ಜನರು ಹಳ್ಳಿಗಳಲ್ಲಿದ್ದಾರೆ. ಇವರು ಹೆಚ್ಚಾಗಿ ವ್ಯವಸಾಯವನ್ನೇ ಅವಲಂಭಿಸಿದ್ದಾರೆ. ಈ ಸರ್ಕಾರದವರು ವ್ಯವಸಾಯಕ್ಕೆ ಏನು ಅನುಕೂಲ ಮಾಡಿ ಕೊಟ್ಟಿದ್ದಾರೆಂಬುದನ್ನು ಸ್ವಲ್ಪ ನೋಡಬೇಕಾಗಿದೆ. ಈ ಕರ್ನಾಟಕ ಡ್ರಾಫ್ಟ್ ಆನ್ಯುಯಲ್ ಪ್ಲಾನ್‌ನಲ್ಲಿ ೭ನೇ ಪಂಚವಾರ್ಷಿಕ ಯೋಜನೆಯ ೮೬ನೇ ವರ್ಷಕ್ಕೆ ೮.೬ ಕೊಟ್ಟಿದ್ದರೆ ಈ ಸಲ ೬.೦ ಕೊಟ್ಟಿದ್ದಾರೆ ಅಂದರೆ ೧.೬ ರಷ್ಟು ವ್ಯವಸಾಯಕ್ಕೆ ಕಡಿಮೆ ಮಾಡಿದ್ದಾರೆ. ಮತ್ತೆ ರೂರಲ್ ಡೆವಲಪ್‌ಮೆಂಟ್‌ಗೆ ೧೯೮೬ರಲ್ಲಿ ೪.೯ ಕೊಟ್ಟಿದ್ದರು. ಆದರೆ ಈ ಸಲ ೪.೦ ಕೊಟ್ಟಿದ್ದಾರೆ ಇದರಿಂದಲೇ ಇವರು ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿಲ್ಲವೆಂದು ತಿಳಿದು ಬರುತ್ತದೆ. ವ್ಯವಸಾಯದ ಅಭಿವೃದ್ಧಿ ಆಗದೆ ಮತ್ತು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಆಗದೆ ಈ ದೇಶದ ಅಭಿವೃದ್ಧಿ ಆಗುವುದಿಲ್ಲ. ವ್ಯವಸಾಯದ ಅಭಿವೃದ್ಧಿ ಆಗದಿದ್ದರೂ ಈ ರಾಜ್ಯದ ಅಭಿವೃದ್ಧಿ ಆಗುತ್ತದೆಂದು ಇವರು ಹೇಳಿದರೆ, ಅದು ಶುದ್ಧ ಸುಳ್ಳಾಗುತ್ತದೆ. ನಮ್ಮ ಹಳ್ಳಿಗಳು ಮುಂದುವರೆಯಬೇಕಾದರೆ, ಮೊದಲು ಪಂಚಾಯತ್ ರಾಜ್ ವ್ಯವಸ್ಥೆ ಚೆನ್ನಾಗಿ ಬೆಳೆಯಬೇಕು. ಬಡವರಿಗೆ ಭೂಮಿಯನ್ನು ಹಂಚಬೇಕು. ಈ ಬಡ ಜನರು ಸ್ವಂತವಾಗಿ ನಿಲ್ಲುವಂತಹ ಒಂದು ಅವಕಾಶವನ್ನು ಕಲ್ಪಿಸಬೇಕು. ಇದನ್ನೆಲ್ಲಾ ಮಾಡದೆ ವ್ಯವಸಾಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುತ್ತೇವೆಂದು ಹೇಳುವುದು ಸರಿಯಲ್ಲ. ಇವರು ತೆರಿಗೆ ಜಾಸ್ತಿ ಮಾಡಿರುವ ಬಗ್ಗೆ ಪ್ರಸ್ತಾಪ ಮಾಡಿದಾಗ ಮುಖ್ಯ ಮಂತ್ರಿಗಳಿಗೆ ಬಹಳ ಕೋಪ ಬಂತು, ಪತ್ರಿಕೆಗಳಲ್ಲಿ ತೆರಿಗೆ ಜಾಸ್ತಿ ಮಾಡಿರುವ ಬಗ್ಗೆ ದೊಡ್ಡದಾಗಿ ಪ್ರಸ್ತಾಪವಾಗಿದೆಯೇ ಹೊರತು ಕೆಲವೊಂದು ಪದಾರ್ಥಗಳ ಮೇಲೆ ತೆರಿಗೆ ಕಡಿಮೆ ಮಾಡಿರುವುದನ್ನು ಪ್ರಸ್ತಾಪ ಮಾಡಿಲ್ಲ ಎಂದು ಹೇಳಿದರು. ಇಲ್ಲಿ ಇವರು ಯಾವುದಕ್ಕೆ ತೆರಿಗೆ ಜಾಸ್ತಿ ಮಾಡಿದ್ದಾರೆಂಬುದನ್ನು ನೋಡಿದರೆ ಮಾನ್ಯ ಇದಿನಬ್ಬ ಅವರು ಹೇಳಿದಂತೆ ಸಾರಿಗೆ ವ್ಯವಸ್ಥೆಯ ಮೇಲೆ ತೆರಿಗೆ ಹೆಚ್ಚು ಮಾಡಿದ್ದಾರೆ. ಅಖಿಲ ಭಾರತ ಪ್ರವಾಸಿ ಅಮ್ನಿ ಬಸ್ಸುಗಳವರು ಪ್ರತಿ ಮೂರು ತಿಂಗಳಿಗೆ ಪ್ರತಿ ಸೀಟಿಗೆ ೫೦೦ ರೂಪಾಯಿಗಳ ಪ್ರಕಾರ ಕೊಡಬೇಕಾಗಿದ್ದ ತೆರಿಗೆಯನ್ನು ೨,೫೦೦ ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಅಂದರೆ ಒಂದಕ್ಕೆ ಐದರಷ್ಟು ಜಾಸ್ತಿ ಮಾಡಿದ್ದಾರೆ. ಈ ಲೆಕ್ಕದಲ್ಲಿ ಒಂದು ತಿಂಗಳಿಗೆ ೮೯ ಸಾವಿರ ರೂಪಾಯಿಗಳಷ್ಟು ಹೆಚ್ಚು ತೆರಿಗೆ ಕೊಡಬೇಕಾಗುತ್ತದೆ. ಅದೇ ರೀತಿ ಅಂತರ ರಾಜ್ಯ ಮಂಜಲು ಗಾಡಿಗಳ ಮೇಲಿನ ತೆರಿಗೆಯನ್ನು ಸಹ ಜಾಸ್ತಿ ಮಾಡಿದ್ದಾರೆ. ಕೊನೆಗೆ ಇದರ ಒಂದು ಭಾಗ ಪ್ರಯಾಣ ಮಾಡುವ ಬಡ ಜನರ ಮೇಲೆ ಬೀಳುತ್ತದೆ.

ಇನ್ನು ಅನುಬಂಧ ೧೯ ರಲ್ಲಿ ಹೇಳಿರುವ ಪ್ರಕಾರ ಅಬಕಾರಿಗೆ ಸಂಬಂಧ ಪಟ್ಟಂತೆ ಲೈಸನ್ ಶುಲ್ಕವನ್ನು ಸಹ ಜಾಸ್ತಿ ಮಾಡಿದ್ದೀರಿ.

ಈ ಸಾರಾಯಿ ದರವನ್ನು ಕಂಟ್ರೋಲ್ ಮಾಡದೆ ಬಿಟ್ಟು ಬಿಟ್ಟಿದ್ದೀರಿ ಇಷ್ಟು ದಿವಸ ಒಂದು ಲೀಟರ್‌ಗೆ ೩೦ ರೂಪಾಯಿ ಹಾಕಿದ್ದರು. ಕಂಟ್ರಾಕ್ಟರ್ಸ್ ೩೦ ರೂಪಾಯಿ ಅಲ್ಲ ಎಷ್ಟಕ್ಕೆ ಬೇಕಾದರೂ ಮಾಡಿಕೊಳ್ಳಬಹುದು. ಇದರ ಜೊತೆಗೆ ಒಂದೇ ಒಂದು ವಿಷಯವನ್ನು ಯೋಚನೆ ಮಾಡೋಣ. ಪೆಟ್ರೋಲ್ ಬೆಲೆ ಜಾಸ್ತಿ ಮಾಡಿದರು, ಡೀಸಲ್ ಬೆಲೆ ಜಾಸ್ತಿ ಮಾಡಿದರು. ಕಾಫಿ ಬೆಲೆ ಜಾಸ್ತಿ ಮಾಡಿದರು. ಹೀಗೆ ಸಾಮಾನ್ಯ ಜನ ಉಪಯೋಗಿಸುವ ವಸ್ತುಗಳ ಮೇಲೆ ಕರ ಜಾಸ್ತಿಯಾಗಿದೆ. ಹೀಗೆ ಜಾಸ್ತಿಮಾಡಿ ಈಗ ೧೪೫ ಕೋಟಿ ರೂಪಾಯಿಗಳ ಕಂದಾಯ ಜಾಸ್ತಿ ಕೊಡಿ ಎಂದು ಹೇಳಿದ್ದಾರೆ. ಬಡವರ ಮೇಲೆ ಕರ ಜಾಸ್ತಿ ಹಾಕಿದ್ದಾರೆಯೇ ಹೊರತು ಸಾಹುಕಾರರ ಮೇಲೆ ಜಾಸ್ತಿ ಹಾಕಲಿಲ್ಲ. ವಿಲಾಸಿ ತೆರಿಗೆ ಮಾತ್ರ ಕಡಿಮೆ ಮಾಡಿದ್ದಾರೆ. ಇದಕ್ಕೆ ಒಂದೇ ಒಂದು ಕಾರಣ ಕೊಟ್ಟಿರುವುದು, ಟೂರಿಸ್ ಡೆವಲಪ್‌ಮೆಂಟ್ ಜಾಸ್ತಿಯಾಗಲಿ ಎನ್ನುವ ಉದ್ದೇಶದಿಂದ ವಿಲಾಸಿ ತೆರಿಗೆ ಕಡಿಮೆ ಮಾಡಿದ್ದೇವೆಂದು ಹೇಳಿದ್ದಾರೆ. ಅದೂ ಕೂಡ ನ್ಯಾಯವಲ್ಲ. ಸಾಹುಕಾರರಿಗೆ ಮಾತ್ರ ತೆರಿಗೆ ಕಡಿಮೆಮಾಡಿ ಬಡವರ ಮೇಲೆ ವಿಪರೀತ ತೆರಿಗೆ ಹಾಕಿದ್ದಾರೆ, ಇದು ಅನ್ಯಾಯ. ಇನ್ನು ಕರ್ನಾಟಕದ ಪ್ರಗತಿಯ ಬಗ್ಗೆ ಯೋಚನೆ ಮಾಡೋಣ. ಒಂದೊಂದು ವಿಷಯವನ್ನು ತೆಗೆದುಕೊಳ್ಳೋಣ. ವಿದ್ಯುಚ್ಛಕ್ತಿ, ಇದು ನಮಗೆ ಬೇಕಾಗಿರುವ ಮುಖ್ಯವಾದ ವಸ್ತು. ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ ಹಳ್ಳಿಗಾಡಿನಲ್ಲಿ ದಿವಸಕ್ಕೆ ಐದಾರು ಸಾರಿ ವಿದ್ಯುಚ್ಛಕ್ತಿ ಕಡಿತ ಆಗುತ್ತದೆ. ಈ ಸಮಸ್ಯೆಯನ್ನು ಪರಿಹಾರಮಾಡಿ ಎಂದರೆ ಹೋದಸಾರಿ ಬಡ್ಜೆಟ್‌ನಲ್ಲಿ ರಾಯಚೂರು, ಬೀದರ್, ಕೋಲಾರದಲ್ಲಿ ಡೀಸೆಲ್ ಜನರೇಟರ್ ಸೆಟ್ಸನ್ನು ಹಾಕುತ್ತೇವೆ ಎಂದು ಹೇಳಿದರು. ಈಗ ಕೇಳಿದರೆ ಇದಕ್ಕೆ ಸೆಂಟ್ರಲ್ ಗವರ್ನ್‌ಮೆಂಟ್ ಪರ್ಮಿಷನ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಸೆಂಟ್ರಲ್ ಗವರ್ನ್‌ಮೆಂಟ್‌ಗೆ ಪ್ರೊಟೆಸ್ಟ್ ಮಾಡಿಯಾದರೂ ತರಿಸಬಹುದಾಗಿತ್ತು. ಏಕೆಂದರೆ ನಮಗೆ ಆಗಿರುವ ತೊಂದರೆ ಇದು. ನಿನ್ನೆ ನಾನು ಒಂದು ಹಳ್ಳಿಗೆ ಹೋಗಿದ್ದೆ. ರಾತ್ರಿ ೯ ಗಂಟೆಗೆ ಎಲೆಕ್ಟ್ರಿಸಿಟಿ ಬಂದಿದೆ, ರಾತ್ರಿಯೆಲ್ಲಾ ಅವರು ವ್ಯವಸಾಯ ಮಾಡಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿ ಇದೆ. ಆದುದರಿಂದ ವಿದ್ಯುತ್ ನಿಗಮ ಇಂಡಿ, ಜಮಖಂಡಿ, ಕೋಲಾರ ಮುಂತಾದ ಕಡೆಗಳಲ್ಲಿ ಡೀಸಲ್ ಜನರೇಟರ್ ಸ್ಥಾಪನೆ ಬಗ್ಗೆ ಸೆಂಟ್ರಲ್ ಗವರ್ನ್‌ಮೆಂಟ್ ಮೇಲೆ ಹೋರಾಡಿಯಾದರೂ ಕೂಡ ಅದನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಮೆನ್‌ಷನ್ ಮಾಡಿರುವ ಇನ್ನೊಂದು ವಿಷಯವೆಂದರೆ, ಕೇಂದ್ರ ಸರ್ಕಾರ ನಮಗೆ ಏನು ಕೊಡಬೇಕೋ. ಯೋಜನಾಬದ್ಧವಾಗಿ ಅನುಕೂಲಗಳು, ಕೇಂದ್ರದ ನೆರವು ಏನೇನು ಕೊಡಬೇಕೋ ಅದನ್ನು ಕೊಟ್ಟಿಲ್ಲ, ೭೯೦೦ ಕೋಟಿ ರೂಪಾಯಿಗಳನ್ನು ನಿರೀಕ್ಷಿಸಲಾಗಿತ್ತು. ಆದರೆ ಬಹಳ ಕಡಿಮೆ ಕೊಟ್ಟಿದ್ದಾರೆ ; ಇದರ ಬಗ್ಗೆ ಹೇಳದೇ ಇದ್ದರೂ ಕೂಡ ನಾನ್ ಕಾಂಗ್ರೆಸ್ ಗವರ್ನ್‌ಮೆಂಟ್ಸ್ ಎಲ್ಲಿದೆ ಅವರಿಗೆ ನ್ಯಾಯವಾಗಿ ಏನು ಕೊಡಬೇಕೋ ಅದನ್ನು ಕೊಡುತ್ತಾ ಇಲ್ಲ ಎಂದು ಹೇಳಿದರು. ಇದರ ಬಗ್ಗೆ ಮುಖ್ಯ ಮಂತ್ರಿಗಳು ಒತ್ತಾಯ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಚೀಫ್ ಮಿನಿಸ್ಟರ್ಸ್ ಕಾನ್‌ಫರೆನ್ಸ್‌ನಲ್ಲಿ ಅಟೆಂಡ್ ಆಗಿದ್ದಾರೆ. ವಿಜಯವಾಡ, ಕಲ್ಕತ್ತದಲ್ಲಿ ಅಟೆಂಡ್ ಮಾಡಿದ್ದಾರೆ. ಅಲ್ಲಿ ಫರೂಕ್ ಅಬ್ದುಲ್ಲಾರವರೂ ಕೂಡ ಇದ್ದರು. ನಾನ್ ಕಾಂಗ್ರೆಸ್ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ, ಕೇಂದ್ರ ಸರ್ಕಾರ ದೇಶಕ್ಕೆಲ್ಲಾ ಒಂದೇ ತರಹ ನೋಡಬೇಕು ಎಂದು ಹೇಳಿದರು. ಇದರ ಬಗ್ಗೆ ಇದರಲ್ಲಿಯೂ ಹೇಳಬೇಕಾಗಿತ್ತು ; ಈ ಸಾರಿ ಬಿಟ್ಟಿದ್ದಾರೆ. ಕೇಂದ್ರದಮೇಲೆ ಎಷ್ಟು ಹೇಳುತ್ತಿದ್ದರೋ ಅಷ್ಟು ಈಗ ಹೇಳುತ್ತಾ ಇಲ್ಲ, ದಾರಿ ಮಾಡಿಕೊಳ್ಳುತ್ತಿದ್ದಾರೆ. ಇನ್ನು ನೀರಾವರಿ ಬಗ್ಗೆ ಹೆಚ್ಚು ಗಮನ ಕೊಡಬೇಕಾಗಿತ್ತು. ಅವರು ಕೊಟ್ಟಿರುವ ಪ್ರಕಾರ ನಮಗೆ ೨೫ ಪರ್ಸೆಂಟ್......

ಶ್ರೀ ಎಂ. ಎಸ್. ಕೃಷ್ಣನ್.—ನೀವು ದಾರಿ ಮಾಡಿಕೊಳ್ಳುತ್ತಾ ಇದ್ದೀರಿ ಎಂದು ಹೇಳುತ್ತಾ ಇದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರ ಬಗ್ಗೆ ಔಟ್ ಆಫ್ ದಿ ವೇ ಹೇಳಬೇಕು ಎಂದರೆ ಮುಖ್ಯ ಮಂತ್ರಿಗಳು ಇಲ್ಲಿ ಕರ್ನಾಟಕ ರಾಜ್ಯವನ್ನು ಬಿಟ್ಟು ಸೆಂಟರ್‌ಗೆ ಹೋಗುತ್ತಾರೆ, ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆಗೆ ನಿಲ್ಲುತ್ತಾರೆ ಎಂದು ಎಲ್ಲಾ ಪೇಪರ್‌ನಲ್ಲಿಯೂ ಬಂದಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಕರ್ನಾಟಕದವರು ಹೋಗುತ್ತಾರೆ ಅಂದರೆ ಸಂತೋಷವಲ್ಲವೇ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಏನು ಮಾಡುತ್ತೀರೋ ಎಂದು ಅನುಮಾನವಲ್ಲ ನಿಜವಾಗಿ ಅಧ್ಯಕ್ಷರಾದರೆ ಬಹಳ ಒಳ್ಳೆಯದು. ಅವರು ಅಧ್ಯಕ್ಷರಾದರೆ ಒಳ್ಳೆಯದು, ಆದರೆ ಕಾಂಗ್ರೆಸ್ ಮಹಾನುಭಾವರು ಬಿಡಬೇಕಲ್ಲ. ಇಲ್ಲೂ ಇಲ್ಲದೆ, ಅಲ್ಲೂ ಇಲ್ಲದೆ ತೊಂದರೆಯಾದರೆ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನತಾ ಪಕ್ಷದ ಅಧ್ಯಕ್ಷ ಗಿರಿ ಖಾಲಿ ಇರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಅದಕ್ಕೋಸ್ಕರ, ಕರ್ನಾಟಕ ಬಿಟ್ಟು ಹೋಗಬೇಕೆ ?

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದೇ ಇಲ್ಲ. ಯಾವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಕಳೆದ ಮೂರು ವರ್ಷಗಳಿಂದ ಕಾಂಗ್ರೆಸ್ ಸರ್ಕಾರದೊಂದಿಗೆ ಹೋರಾಡಿ, ಎಷ್ಟು ಹೇಳಿದರು ಕೇಳುವುದಿಲ್ಲವೆಂದು ಸುಮ್ಮನಾಗಿ ಬಿಟ್ಟಿದ್ದಾರೇನೂ ಗೊತ್ತಿಲ್ಲ. ಕೇಂದ್ರದಿಂದ ಎಷ್ಟು ನೆರವು ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲವೆಂದು ಹೇಳಿದ್ದಾರೆ. ಆದರೆ, ಪ್ರತಿಭಟನೆ ಸೂಚಿಸುವ ಮನೋಭಾವಕ್ಕೆ ಹೋಗಿಲ್ಲ ಮೊದಲು ಇದ್ದ ರೀತಿ ಅವರು ನಡೆದು ಕೊಳ್ಳುತ್ತಿಲ್ಲ ನೀರಾವರಿ ವಿಚಾರದಲ್ಲಿ ಮಾನ್ಯ ದೇವೇಗೌಡರು ಬೆಳಗ್ಗೆ ಹೇಳಿದರು ; ಇನ್ನು ೧೩,೦೦೦ ಕೋಟಿ ರೂಪಾಯಿ ಬೇಕಾಗುತ್ತದೆಂದು ಇವರು ಕೃಷ್ಣ ಬೇಸಿನ್‌ಗೆ ೨೦೦ ಕೋಟಿ ಕಾವೇರಿ ಬೇಸಿನ್‌ಗೆ ೧೮೦ ಕೋಟಿ ಕೊಟ್ಟಿದ್ದಾರೆ. ಇನ್ನು ೨೫ ವರ್ಷವಾದರೂ ಕೂಡ ಹಾಲಿ ಇರುವಂಥ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಆಗುವುದಿಲ್ಲ. ಕರ್ನಾಟಕದಲ್ಲಿ ನಮಗೆ ತಿಳಿದಂತೆ ನೀರಾವರಿಯಲ್ಲಿ ಹಿಂದೆ ಬಿದ್ದಿದ್ದೇವೆ. ರಾಜಸ್ಥಾನದಲ್ಲಿ ಇಂದಿರಾಗಾಂಧಿಯವರ ಕಾಲುವೆಯನ್ನು ಮುಗಿಸಿದರೆ, ಅವರು ನಮಗಿಂತ ಮುಂದೆ ಹೋಗುತ್ತಾರೆ ಅದು ಅಲ್ಲಿ ಆದರೆ, ಕರ್ನಾಟಕ ನೀರಾವರಿ ವಿಷಯದಲ್ಲಿ ಕಟ್ಟ ಕಡೆಯ ರಾಜ್ಯವಾಗುತ್ತದೆ. ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಹಣ ಕೊಡುತ್ತೇವೆಂದು ಹೇಳಿದರೂ ಕೊಟ್ಟಿಲ್ಲದಿರುವುದು ಇಲ್ಲಿ ಕಾಣುತ್ತದೆ. ದುರದೃಷ್ಟದ ಪರಿಸ್ಥಿತಿ ಎಂದರೆ, ಬೆಂಗಳೂರು ತುಮಕೂರು ಕೋಲಾರ ಹಾಗೂ ಚಿತ್ರದುರ್ಗದಂತಹ ಬಯಲುಸೀಮೆ ಪ್ರದೇಶಗಳ ಬಗ್ಗೆ ಹೆಚ್ಚು ಗಮನ ಕೊಟ್ಟಿಲ್ಲ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದಾರೆ ; ಅದು ನಿಜವಾಗಿಯೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದು ಎಲ್ಲಿದೆ ಎಂದು ಮೈಕ್ರೋ ಸ್ಕೋಪ್ ಹಾಕಿಕೊಂಡು ಹುಡುಕಬೇಕಾಗಿದೆ. ಅದಕ್ಕೆ ಯಾರು ಅಧ್ಯಕ್ಷರಿದ್ದಾರೋ ಗೊತ್ತಿಲ್ಲ. ಇನ್ನು ನೂರು ವರ್ಷಗಳು ಕಳೆದರೆ ಕರ್ನಾಟಕ ರಾಜಸ್ಥಾನದ ತರಹ ಆಗುತ್ತದೆನ್ನುವ ಭಯ ನಮಗಿದೆ, ಸರ್ಕಾರ ಡ್ರೈಲ್ಯಾಂಡ್ ಬೋರ್ಡುಗಳನ್ನು ಚುರುಕುಗೊಳಿಸಬೇಕು. ಅವುಗಳಿಗೆ ಜಾಸ್ತಿ ಹಣ ಕೊಡಬೇಕು. ಇನ್ನು ಕೆಲವು ವಸ್ತುಗಳಿಗೆ ರಿಯಾಯಿತಿ ಕೊಟ್ಟಿರುವುದನ್ನು ಕೂಡ ಹೇಳಿದ್ದಾರೆ. ಆದರಿಂದ ಹೆಚ್ಚಿನ ಅನುಕೂಲವಾಗುವುದಿಲ್ಲ. ನಿರೋಧ್ ಮತ್ತು ಗರ್ಭ ನಿರೋಧಕ ವಸ್ತುಗಳು ; ರಾಷ್ಟ್ರಧ್ವಜ, ಮಾನವ ರಕ್ತ ಅಂಗವಿಕಲರಿಗಾಗಿ ನಿಯೋಜಿಸಿದ ಕಾರುಗಳು, ಯಂತ್ರಚಾಲಿತ ತ್ರಿಚಕ್ರ ವಾಹನಗಳು, ವೀರ್ಯ, ರಬರ್ ಬಲೂನುಗಳು, ಸಂಗೀತ ಉಪಕರಣಗಳು, ಸೌದೆ ಉರಿಸುವ ಒಲೆಗಳು ಇವುಗಳಿಂದ ಅಂಥ ಹೇಳುವಂಥ ಅನುಕೂಲ ಗಳೇನೂ ಇಲ್ಲ. ಲಾಟರಿ ಟಿಕೆಟ್ ಮೇಲೆ ರಿಯಾಯಿತಿ ಕೊಟ್ಟಿದ್ದೀರಿ. ತಾವು ಲಾಟರಿ ಮತ್ತು ಜೂಜನ್ನು ತೆಗೆದುಹಾಕಿದರೆ ತುಂಬಾ ಒಳ್ಳೆಯದಾಗುತ್ತದೆ. ಇದೊಂದು ರೀತಿಯ ಗ್ಯಾಂಬ್ಲಿಂಗ್. ತಮಗೆ ಇದರಿಂದ ಆರು ಕೋಟಿ ಆದಾಯ ಬರಬಹುದು. ಇದರಿಂದ ಆಗತಕ್ಕ ಅನಾಹುತ ; ಎಷ್ಟು ಕುಟುಂಬಗಳು ಹಾಳಾಗುತ್ತವೆ ಎಂಬುದರ ಬಗ್ಗೆ ತಾವು ಯೋಚನೆ ಮಾಡಬೇಕು. ತಮ್ಮ ಸ್ನೇಹಿತರಾದ ತಮಿಳುನಾಡಿನ ಮುಖ್ಯಮಂತ್ರಿ ಎಂ. ಜಿ. ರಾಮಚಂದ್ರನ್‌ರವರು ಇದನ್ನು ರದ್ದು ಮಾಡಿದ್ದಾರೆ. ಅವರು ಕೂಡ ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಯೋಚನೆ ಮಾಡಿ ರದ್ದು ಮಾಡಿದ್ದಾರೆಂದು ಕಾಣುತ್ತದೆ. ತೆರಿಗೆ ವಸೂಲಿ ವಿಚಾರದಲ್ಲಿ ತಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡರೆ ; ನೂರಾರು ಕೋಟಿ ರೂಪಾಯಿಗಳು ನಿಮಗೆ ಬರುತ್ತದೆ.

ಸೇಲ್ಸ್‌ಟ್ಯಾಕ್ಸ್ ಇವೇಷನ್ ಮಾಡುವುದು ಬೇಡ. ಅವರು ೧,೨೦೦ ಕೋಟಿ ರೂಪಾಯಿಗಳು ಬೇಕಾದರೂ ಕೊಡುತ್ತಾರೆ. ಜೂಜು ಲಾಟರಿ ಇಂಥಾದ್ದರ ಮೇಲೆ ಟ್ಯಾಕ್ಸ್ ಹಾಕುವುದು ಅದನ್ನು ಎನ್‌ಕರೇಜ್ ಮಾಡುವುದು, ಅನ್ಯಾಯ ಮಾಡುತ್ತೇವೆಂದು ಅನಿಸುತ್ತದೆ. ಇನ್ನು ನೋಂದಣಿ ಶುಲ್ಕ ೧೦ ಪರ್ಸೆಂಟ್, ಅದು ಬಹಳ ಜಾಸ್ತಿ. ಹೋದ ಸೇಟಪ್‌ನಲ್ಲಿ ಇದ್ದ ಹಾಗೆ ಇಲ್ಲ. ಇವೊತ್ತು ಬೆಂಗಳೂರು. ಕೋಲಾರದಲ್ಲಿ 'ಏರಿಯಾವೈಸ್ ಸೈಟ್‌ಗೆ ಇಷ್ಟು ಬೇಲೆ ಎಂದು ಫಿಕ್ಸ್ ಮಾಡಿದ್ದಾರೆ. ಈ

ನೋಂದಣಿ ಶುಲ್ಕ ೧೦ ಪರ್‌ಸೆಂಟ್ ಜೊತೆಗೆ ಸಬ್‌ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಎಷ್ಟು ಖರ್ಚು ಮಾಡಬೇಕೆಂದು ಎಲ್ಲರಿಗೂ ಗೊತ್ತು, ಅದು ಮಾನ್ಯ ಮಂತ್ರಿಗಳಾದ ಬೊಮ್ಮಾಯಿಯವರಿಗೂ ಗೊತ್ತು. ಅಲ್ಲಿ ೧೦ ಪರ್‌ಸೆಂಟ್ ಲಂಚ ಕೊಡಬೇಕಾಗುತ್ತದೆ. ಅದನ್ನು ಕೊಡದೇ ಹೋದರೆ ೨೫ ತರಹ ಕ್ವೈರಿಸ್ ಹಾಕಿ ಎರಡು ತಿಂಗಳಾದರೂ ಅಲ್ಲಿ ರಿಜಿಸ್ಟರ್ ಆಗುವುದಿಲ್ಲ. ಆದ್ದರಿಂದ ೧೦ ಪರ್‌ಸೆಂಟ್ ಜಾಸ್ತಿ ಮಾಡಿರುವುದು ಬಹಳ ಜಾಸ್ತಿ ಆಯಿತು. ಇದು ನನ್ನ ಮನಸ್ಸಿಗೆ ನಿಜವಾಗಿಯೂ ವಿಪರೀತ ಜಾಸ್ತಿ ಮಾಡಿದ್ದಾರೆ ಎಂದು ಅನಿಸುತ್ತದೆ. ಇನ್ನು ಜನತಾ ಮನೆಗಳ ಬಗ್ಗೆ ಜಾಸ್ತಿ ಹಣ ಕೊಡಬೇಕೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಒಂದು ತಾಲ್ಲೂಕಿನಲ್ಲಿ ೩೦೦ ಹಳ್ಳಿಗಳು ಇದ್ದರೆ ೨೦೦ ಮನೆಗಳನ್ನು ಕೊಟ್ಟಿಲ್ಲ. ಈ ವರ್ಷ ಆದರೂ ಜಾಸ್ತಿ ಮನೆಗಳನ್ನು ಕೊಡಬೇಕಾಗಿತ್ತು. ಹೋದಸಾರಿ ಜನತಾ ಮನೆಗಳನ್ನು ಎಷ್ಟು ಕೊಟ್ಟಿದ್ದರು ಅಷ್ಟನ್ನೇ ಕೊಟ್ಟಿದ್ದಾರೆಯೇ ಹೊರತು ಜಾಸ್ತಿ ಮಾಡಿಲ್ಲ, ಇನ್ನು ಹುಡ್ಕೋ ಮನೆಗಳಿಗೆ ೫ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಿರಿ. ರಾಯಲ್ಟಿ ಎಂದು ಐದು ನೂರು ರೂಪಾಯಿ ವಾಪಸ್ಸು ಪಡೆಯುತ್ತೀರಿ ಜೊತೆಗೆ ೮೦ ರೂಪಾಯಿ ಮತ್ತೆ ಕಾಂಟ್ರಿಬ್ಯೂಷನ್ ಎಂದು ೫೦೦ ರೂ. ಅದನ್ನು ಈ ಸಾರಿ ೬,೨೦೦ ರೂಪಾಯಿಗಳಿಗೆ ಮಾಡಿದ್ದೀರಿ. ಇದು ಬಹಳ ಕಡಿಮೆ. ಮನೆಗಳನ್ನು ಕಟ್ಟಲಿಕ್ಕೆ ಈ ಹಣದಿಂದ ಸಾಧ್ಯವಿಲ್ಲ. ಇದರಿಂದ ಏನಾಗುತ್ತದೆ ಎಂದರೆ ಬಡವರು ಬೇರೆಯವರ ಹತ್ತಿರ ಹೋಗಿ ಎರಡು ಮೂರು ಸಾವಿರ ರೂಪಾಯಿ ಸಾಲವನ್ನು ಮಾಡಿ ಮನೆ ಕಟ್ಟಿಸಿರುತ್ತಾರೆ. ಆದ್ದರಿಂದ ಹತ್ತು ಸಾವಿರದವರೆಗಾದರು ಜಾಸ್ತಿ ಮಾಡಬೇಕು. ಹಾಗೆಯೇ ಪ್ರತಿಯೊಂದು ತಾಲ್ಲೂಕಿಗೂ ಒಂದು ಸಾವಿರ ಮನೆಗಳನ್ನು ಕೊಡುವಂತೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಆಗಲೇ ಹೇಳಿದೆ ಡೀಸೆಲ್ ಜನರೇಟರ್ ತಕ್ಷಣ ಆಗಬೇಕು, ಅದು ಇಲ್ಲದೇ ವ್ಯವಸಾಯ ಕ್ಷೇತ್ರದಲ್ಲಿ ಪೂರ್ತಿ ಏಟು ಬಿದ್ದಿದೆ. ಜೊತೆಗೆ ಕೈಗಾರಿಕೆಗೂ ಸಹ ಬಹಳ ಏಟು ಬಿದ್ದಿದೆ. ಇದು ನಮ್ಮ ಮುಖ್ಯ ಮಂತ್ರಿಯವರಿಗೂ ಸಹ ಗೊತ್ತಿದೆ. ಇದೂ ಅಲ್ಲದೆ. ಇಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಬಹಳ ಜಾಸ್ತಿಯಾಗಿದೆ, ಅದೇ ಹೊಸೂರು ಗೌರಿಬಿದನೂರು ಬಿಟ್ಟು ಹಿಂದೂಪುರಕ್ಕೆ ಹೋದರೆ ಆಂಧ್ರದಲ್ಲಿ ವಿದ್ಯುಚ್ಛಕ್ತಿ ಸುಲಭವಾಗಿ ಸಿಕ್ಕುತ್ತದೆ. ಆದ್ದರಿಂದ, ಅಲ್ಲಿ ನೂರಾರು ಇಂಡಸ್ಟ್ರಿಗಳು ಪ್ರಾರಂಭವಾಗುತ್ತಿವೆ. ಅದೇ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡದೆ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಜಾಸ್ತಿ ಮಾಡುತ್ತಿದ್ದೀರಿ. ಈ ಬಗ್ಗೆ ಜಾಸ್ತಿ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿಯ ಬಗ್ಗೆ ಇನ್ನು ಹತ್ತು ವರ್ಷಗಳಲ್ಲಿ ಇದೇ ರೀತಿ ಖೋತಾ ಇದ್ದರೆ ಏನು ಆಗಬಹುದು ಎನ್ನುವುದನ್ನು ಯೋಚನೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ವಿದ್ಯುಚ್ಛಕ್ತಿ ಮತ್ತು ನೀರಾವರಿ ಬಗ್ಗೆ ಜಾಸ್ತಿ ಗಮನಕೊಡಬೇಕು. ಅದನ್ನು ಒಂದು ಆದ್ಯತೆಯ ಮೇಲೆ ತೆಗೆದುಕೊಂಡು ಕೆಲಸ ಬೇಗ ಮಾಡಿದರೆ ನಮ್ಮ ಕರ್ನಾಟಕ ಅಭಿವೃದ್ಧಿ ಆಗುವುದಕ್ಕೆ ಸಾಧ್ಯ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು ಬಡವರ ಬಗ್ಗೆ ಒಂದು ಮಾತು ಹೇಳಿದರು. ಹೋದಸಾರಿ ಈ ಪಟ್ಟಣದಲ್ಲಿರುವ ಬಡವರಿಗೆ ಒಂದು ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರು. ಅದನ್ನು ನಾವು ನೋಡುವಾಗ ನಮ್ಮ ಔಟ್‌ಲೇ ಎಷ್ಟು, ನಮ್ಮ ಗ್ರೋತ್ ರೇಟ್ ಎಷ್ಟು ಎಂದು ಅವರೇ ಹೇಳುತ್ತಾರೆ. Sir, I am referring to the Karnataka Draft Annual Plan 1987-88 published by the Planning Department wherein, in respect of Outlay it is observed thus :

> " The approved outlay for the Annual Plan 1986-87 is Rs. 765 crores. On the basis of available indications, it is anticipated that the plan expenditure may exceed the approved outlay during the year. However, it is too early to assess clearly the realisation of planned investment in real terms and so also the growth of State Income. Excess plan expenditures have to be met by larger resource mobilisation effort. Available trends in respect of the growth assumptions seem to hint at possible fulfilment of the projected growth rate of around 5,0 percent during 1986-87. "

೩-೩೦ ಪಿ. ಎಂ.

೫ ಪರ್ಸೆಂಟ್ ಎಂದು ಹೇಳುತ್ತೀರಿ. ಆದರೆ ನಮಗೆ ಫೈನಾನ್ಸಿಯಲ್ ಔಟ್‌ಲೇ ಎರಡೂವರೆ ಪರ್ಸೆಂಟ್ ಆಗುತ್ತದೆ. ಎರಡೂವರೆ ಪರ್ಸೆಂಟ್ ಪಾಪುಲೇಷನ್ ಗ್ರೋತ್, ೫ ಪರ್ಸೆಂಟ್ ಇನ್‌ಫ್ಲೇಷನ್ ಹೋಗುವುದರಿಂದ ನಮಗೇನು ಅನುಕೂಲವಾಗುವುದಿಲ್ಲ. ಎನ್ನುವ ಅನುಮಾನ ನಮಗೆ ಇದೆ. ಗ್ರೋತ್ ರೇಟ್ ಏನೂ ಇರುವುದಿಲ್ಲ. ಸ್ಟೇಟಸ್ಕೋ ಆಗುತ್ತದೆ. ಅಭಿವೃದ್ಧಿಯಾಗುತ್ತೇವೆಂದು ನಾವು ಏನು ಅಂದುಕೊಂಡಿದ್ದೇವೆ. ಅದು ಆಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ ಇನ್ನು ವ್ಯವಸಾಯದ ವಿಷಯದಲ್ಲಿ ಹೇಳುವುದಾದರೆ.—

" It can be seen that in rispect of distribution of seeds, area under high yielding varieties, distribution of pesticides and chemical fertilisers, anticipated achievement is only slightly less than the target. "

ಎಂದು ಹೇಳಿದ್ದೀರಿ, ಅದರ ಅರ್ಥ ಏನಾಗುತ್ತದೆ ? ನಿಜವಾಗಿಯೂ ಕೂಡ ವ್ಯವಸಾಯ ಕ್ಷೇತ್ರಕ್ಕೆ ಎಷ್ಟೊಂದು ಅನುಕೂಲ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿಲ್ಲ. ಇದರಿಂದ ನಾವು ತೊಂದರೆಗೆ ಒಳಗಾಗುತ್ತೇವೆ. ರೂರಲ್ ಎಲೆಕ್ಟ್ರಿಫಿಕೇಷನ್ ವಿಚಾರದಲ್ಲಿಯೂ

" Out of 27,028 inhabited villages (1981 Census) in the state, electricity is provided to 24645 villages. "

ಇದನ್ನು ಮುಗಿಸಬೇಕಾದರೆ, ಇನ್ನು ೫ ವರ್ಷಗಳಾಗುತ್ತದೆಂದು ಹೇಳಿದ್ದೀರಿ ಇದರಲ್ಲಿ ಹ್ಯಾಮ್ಲೆಟ್‌ಗಳನ್ನು ಮೆನ್‌ಷನ್ ಮಾಡಿಲ್ಲ. ಅಂದರೆ, ನಾವು ಈ ವಿಚಾರದಲ್ಲಿಯೂ ಹಿಂದುಳಿದಿದ್ದೇವೆ. ಜಿಲ್ಲಾವಾರು ಅಭಿವೃದ್ಧಿ ಬಗ್ಗೆ ಹೇಳುವಾಗ, ೧೯೮೬-೮೭ನೇ ಸಾಲಿನ ಎಕನಾಮಿಕ್ ಸರ್ವೆನಲ್ಲಿ ನಮೂದಿಸಿರುವಂತೆ ಸುಮಾರು ೧೩ ಜಿಲ್ಲೆಗಳು ಹಿಂದುಳಿದಿವೆ ಎಂದು ಹೇಳಿದ್ದೀರಿ. ಚಿತ್ರದುರ್ಗ, ಕೋಲಾರ, ಧಾರವಾಡ ಕೊಡಗು ಹಾಗೂ ಉತ್ತರ ಕನ್ನಡ ಹೀಗೆ ಹೇಳುತ್ತಾ ಅತೀ ಹಿಂದುಳಿದ ಜಿಲ್ಲೆ ಗುಲ್ಬರ್ಗ ಎಂದು ಹೇಳಿದ್ದೀರಿ. ಹಿಂದುಳಿದ ಜಿಲ್ಲೆಗಳ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸ್ಪೆಷಲ್ ಗ್ರಾಂಟ್ಸ್ ಕೊಡಬೇಕಾಗಿತ್ತು. ಅದನ್ನು ಕೂಡ ಇಲ್ಲಿ ಮೆನ್‌ಷನ್ ಮಾಡಿಲ್ಲ.

ವೈಸ್ ಛೇರ್ಮನ್.—ತಮ್ಮ ಭಾಷಣ ೨೦ ನಿಮಿಷ ಆಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ೫ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಇನ್‌ಫ್ಲೇಷನ್ ಕಂಟ್ರೋಲ್‌ಗೆ ಬಂದಿದೆ ಎಂದು ಹೇಳಿದ್ದೀರಿ ಆಲ್ ಇಂಡಿಯಾ ಲೆವೆಲ್‌ನಲ್ಲು ಬಂದಿಲ್ಲ, ಇಲ್ಲಿಯೂ, ಬಂದಿಲ್ಲ ಇದು ಶುದ್ಧ ತಪ್ಪು ಎಕನಾಮಿಕ್ ಸರ್ವೆನಲ್ಲಿ ಹೇಳಿದ್ದೀರಿ.

" Price at the wholesale level increased by 5.5 per-cent during April-November 1986 in the country"

ಪ್ರೈಸ್ ಕಂಟ್ರೋಲ್ ಮಾಡುವುದರಲ್ಲಿಯೂ ಕೂಡ ಯಾವ ಕ್ರಮ ಕೂಡ ತೆಗೆದುಕೊಂಡಿಲ್ಲ. ಪುಟ ೩೨ ರಲ್ಲಿ ನಿರುದ್ಯೋಗದ ಬಗ್ಗೆ ಹೇಳಿದ್ದೀರಿ. Estimated Unemployed: Rural males rural females, urban males ಇದು ಜಾಸ್ತಿಯಾಗುತ್ತಾ ಹೋಗಿದೆ. ಪೋಸ್ಟ್ ಗ್ರಾಜುಯೇಟ್ಸ್‌ಗಳು ಉದ್ಯೋಗ ಇಲ್ಲದೇ ಇರುವವರು ಕೂಡ ಜಾಸ್ತಿಯಾಗಿದ್ದಾರೆ. ಮಾರ್ಚ್ ೧೯೮೬ರಿಂದ ನವೆಂಬರ್ ೧೯೮೬ರ ವರೆಗೆ ೧೪.೩ ಒಂದು ರೇಟ್ ಕೊಟ್ಟಿದ್ದೀರಿ. ನಿರುದ್ಯೋಗ ನಿವಾರಿಸುವ ವಿಚಾರದಲ್ಲಿ ಜನತಾ ಪಾರ್ಟಿಯವರು ಒಂದು ಶ್ಲೋಗನ್ ಕೊಟ್ಟಿದ್ದರು. ನಾವು ಅಧಿಕಾರಕ್ಕೆ ಬಂದಮೇಲೆ, ಮನೆಗೆ ಒಬ್ಬರಿಗೆ ಕೆಲಸ ಕೊಡುತ್ತೇವೆಂದೂ, ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡಿದಂತೆ ಕಾಣುತ್ತಿಲ್ಲ. ಈ ವಿಚಾರದಲ್ಲಿ ಕೂಡ ಮಾನ್ಯ ಮುಖ್ಯ ಮಂತ್ರಿಯವರು ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ನಿರುದ್ಯೋಗಿ ಪದವೀಧರರು ಏನಿದ್ದಾರೆ, ಅವರಿಗೂ ಕೂಡ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಜನತಾ ಪಾರ್ಟಿ ಪ್ರಣಾಳಿಕೆ ಪ್ರಕಾರ ವೃದ್ಧಾಪ್ಯ ವೇತನ ಒಂದು

ಅನುಕೂಲ ಮಾಡಿಕೊಟ್ಟಿದ್ದಾರೆ. ಒಬ್ಬರಿಗೆ ೫೦ ರೂಪಾಯಿ ಕೊಡುತ್ತಿದ್ದಾರೆ. ಒಂದು ತಾಲ್ಲೂಕಿನಲ್ಲಿ ಕನಿಷ್ಠ ೭-೮ ಸಾವಿರ ಜನ ಬಡವರಿಗೆ, ವಿಧವೆಯುವರಿಗೆ, ವೃದ್ಧರಿಗೆ ಇದರಿಂದ ಅನುಕೂಲವಾಗುತ್ತದೆ.

> " Under old age pension, all destitute old persons, aged 65 years are provided pension at the rate of Rs.50 per month. A monthly pension of Rs. 50 is provided to widows who are not supported by their relatives and have an income not exceeding Rs 1500.

ನಿಜವಾಗಿಯೂ ಸರ್ಕಾರದವರು ತಂದಿರತಕ್ಕಂಥ ಈ ಯೋಜನೆ ಬಹಳ ಒಳ್ಳೆಯದಾಗಿರುತ್ತದೆ. ನಾನಾದರೂ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೇ. ಈಗ ಏನು ೫೦ ರೂಪಾಯಿಗಳನ್ನು ಅವರಿಗೆ ಕೊಡುತ್ತಿರುತ್ತೀರಿ ಇದು ಬಹಳ ಕಡಿಮೆಯಾಗಿರುತ್ತದೆ ಸ್ವಲ್ಪ ಜಾಸ್ತಿ ಬರುವಂತೆ ಎಂದರೆ ನೂರು ರೂಪಾಯಿಗಳನ್ನಾದರೂ ಮಾಡಿ ಎಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಒಂದು ಮುಖ್ಯವಾದ ವಿಚಾರವೆಂದರೆ ತೆರಿಗೆಗಳನ್ನು ಹಾಕಿರತಕ್ಕಂಥದ್ದು. ಈ ತೆರಿಗೆಗಳನ್ನು ಪುನರ್ ವಿಮರ್ಶೆ ಮಾಡಬೇಕು. ಇದು ಬಡವರ ಬಗ್ಗೆ ಬಹಳ ಜಾಸ್ತಿಯಾದಂತಾಗುತ್ತದೆ. ಇದನ್ನು ತಪ್ಪಿಸಿ ವಾಪಸ್ ಪಡೆಯಬೇಕೆಂದು ಹೇಳುತ್ತಾ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ತುಂಗಲ್ (ಬೀಳಗಿ).—ಸನ್ಮಾನ್ಯ ಅಧ್ಯಕ್ಷರೇ ರಾಜ್ಯದ ಮುಖ್ಯ ಮಂತ್ರಿಗಳೂ ಜೊತೆಗೆ ಆರ್ಥಿಕ ಜವಾಬ್ದಾರಿಯನ್ನು ಹೊತ್ತಿರುವ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮಂಡಿಸಿರುವ ಮುಂಗಡ ಪತ್ರವನ್ನು ಹಲವಾರು ಕಾರಣಗಳಿಂದ ನಾನು ಬೆಂಬಲಿಸುತ್ತೇನೆ. ಏತಕ್ಕೆಂದರೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನೆಯ ಘಟಕ ೩ರ ಕೆಲಸದ ಪ್ರಾರಂಭಕ್ಕೋಸ್ಕರವಾಗಿ ೨೫ ಕೋಟಿ ರೂಪಾಯಿಗಳನ್ನು ಒದಗಿಸಿರುವ ಬಗ್ಗೆ, ಕರ್ನಾಟಕ ವಿದ್ಯುತ್ ನಿಗಮದಿಂದ ಇಂಡಿ, ಜಮಖಂಡಿ, ಕೋಲಾರ ಮತ್ತು ಬೀದರ್‌ನಲ್ಲಿ ಡೀಸೆಲ್ ಜನರೇಟರುಗಳ ಸ್ಥಾಪನೆ ಮಾಡಲು ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರಕಿದ್ದು ಇದನ್ನು ಅತಿ ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆಂದು ಹೇಳಿರುವ ಬಗ್ಗೆ ಮತ್ತು ರಾಜ್ಯ ವಿಶ್ರಾಂತಿ ವೇತನ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ, ಅವರ ಜೀವಿತಾವಧಿಯಲ್ಲಿ ಒಮ್ಮೆ ಎರಡನೇ ದರ್ಜೆ ರೈಲಿನಲ್ಲಿ ಯಾವುದೇ ಎರಡು ಸ್ಥಳಗಳ ನಡುವೆ ಉಚಿತವಾಗಿ ಪ್ರಯಾಣ ಮಾಡುವ ಸೌಲಭ್ಯವನ್ನು ಕಲ್ಪಿಸಿರುವ ಬಗ್ಗೆ ಮತ್ತು ಹುಡ್ಕೋ ಸಹಯೋಗದಿಂದ ರಬಕವಿಯ ನೇಕಾರರಿಗಾಗಿ ಗೃಹ ನಿರ್ಮಾಣ ಯೋಜನೆ, ಈಗಿರುವ ಮಾಸಿಕ ಗೌರವಧನಕ್ಕೆ ಬದಲಾಗಿ ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿ ವಿಜೇತ ನಿವೃತ್ತ ಉಪಾಧ್ಯಾಯರಿಗೆ ಅನುಕ್ರಮವಾಗಿ ೨೫,೦೦೦ ರೂಪಾಯಿಗಳ ಮತ್ತು ೧೦,೦೦೦ ರೂಪಾಯಿಗಳ ಇಡಿಗಂಟು ಮೊಬಲಗಿನ ಸಂದಾಯ ಯೋಜನೆಯ ವಿಸ್ತರಣೆ. ಪ್ರತಿಯೊಂದು ಮಂಡಲವು ಗ್ರಂಥಾಲಯವನ್ನು ಹೊಂದುವಂತೆ ಮತ್ತು ಅದು ಮಂಡಲದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗುವಂತೆ ಮಾಡುವ ಉದ್ದೇಶದಿಂದಾಗಿ ಕರ್ನಾಟಕದಲ್ಲಿ ಹೊಸ ಗ್ರಂಥಾಲಯ ಚಳುವಳಿಯ ಪ್ರಾರಂಭ, ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ. ಅಲ್ಪಸಂಖ್ಯಾತರಿಗಾಗಿ ಉರ್ದು ನಿರ್ದೇಶನಾಲಯದ ಸ್ಥಾಪನೆ, ಬೆಳಗಾವಿಯಲ್ಲಿ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯದ ಸ್ಥಾಪನೆ ಮಹಿಳೆಯರಿಗಾಗಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಹೀಗೆ ಅನೇಕ ವಿಚಾರಗಳನ್ನು ತಮ್ಮ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿರುತ್ತಾರೆ. ಇವೆಲ್ಲಾ ಯೋಜನೆಗಳನ್ನು ಅವರು ಈಡೇರಿಸುತ್ತಾರೆಂಬ ಹಲವಾರು ಕಾರಣಗಳಿಂದ ಈ ಮುಂಗಡ ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಇದರ ಜೊತೆಗೆ ಹಲವಾರು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. ಒಂದು ಕಡೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹಿಂದಿನ ವರ್ಷ ೫೬ ಲಕ್ಷ ಟನ್ ಆಹಾರ ಉತ್ಪಾದನೆಯ ಗುರಿಯನ್ನು ಇಟ್ಟುಕೊಂಡಿದ್ದರೆ, ಈ ವರ್ಷ ೭೨ ಲಕ್ಷ ಟನ್‌ಗಳ ಆಹಾರ ಉತ್ಪಾದನೆಯ ಗುರಿಯನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಸ್ವಲ್ಪ ಸಂದೇಹವನ್ನು ವ್ಯಕ್ತಪಡಿಸಬೇಕಾಗಿದೆ. ಏತಕ್ಕೆಂದರೆ ಆಹಾರದ ಉತ್ಪಾದನೆಯನ್ನು ಕೇವಲ ಕಾಗದದ ಮೇಲೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ವ್ಯವಸ್ಥಿತವಾಗಿ ಯೋಜನೆಗಳನ್ನು ಮಾಡಬೇಕು. ಅವರು ನೇರವಾಗಿ ರೈತರ ಜಮೀನುಗಳು ನೀರಾವರಿಯಾಗುವಂತೆ ಮುಂಚೂಣಿಯ ವೇಗದಲ್ಲಿ ಪ್ರಯತ್ನ ಮಾಡಬೇಕು. ರೈತರ ಜಮೀನುಗಳು ನೀರಾವರಿಯಾಗದಿದ್ದರೆ, ದೊಡ್ಡ

ಪ್ರಮಾಣದಲ್ಲಿ ನೀರಾವರಿಗೆ ಜಮೀನುಗಳನ್ನು ಒಳಪಡಿಸದೆ ಹೋದರೆ ೫೬ ಲಕ್ಷ ಟನ್ ಆಹಾರ ಉತ್ಪಾದನೆಯನ್ನು ೭೨ ಲಕ್ಷಕ್ಕೆ ಏರಿಸುವುದು ನಿಸ್ಸಂದೇಹದ ಮಾತಾಗುತ್ತದೆ. ಈ ವಿಷಯದಲ್ಲಿ ಮುಂದೆ ಮತ್ತೊಂದು ಮಾತನ್ನು ತಮ್ಮ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದೇನೆಂದರೆ ೯೦ ಸಾವಿರ ಹೆಕ್ಟೇರ್ ಜಮೀನನ್ನು ಎರಡು ವರ್ಷದಲ್ಲಿ ನೀರಾವರಿ ಮಾಡತಕ್ಕಂಥ ಒಂದು ಬೃಹತ್ ಗುರಿಯನ್ನು ಇಟ್ಟುಕೊಂಡಿದ್ದೇವೆನ್ನುವುದು. ಈ ಮಹತ್ತರ ಗುರಿಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರ ಬಗ್ಗೆ ಒಂದು ಸಂದೇಹವನ್ನು ವ್ಯಕ್ತಪಡಿಸಬೇಕಾಗಿದೆ. ಅದೇನೆಂದರೆ ಈಗಿರುವ ರೀತಿಯಲ್ಲಿ ಈಗಿರುವ ಧಾಟಿಯಲ್ಲಿಯೇ ನೀರಾವರಿ ಯೋಜನೆಗಳು ಮುಂದುವರಿದರೆ ೯೦ ಸಾವಿರ ಹೆಕ್ಟೇರ್ ಜಮೀನನ್ನು ನೀರಾವರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಮಲೆನಾಡು ಕ್ಷೇತ್ರದಿಂದ ಬಂದಿರತಕ್ಕಂಥವರಾಗಿದ್ದೀರಿ. ನಮ್ಮ ರಾಜ್ಯದಲ್ಲಿ ಅಸ್ತಿತ್ವದಲ್ಲಿರತಕ್ಕಂಥ ಏತ ನೀರಾವರಿ ಯೋಜನೆಗಳು, ಚಿಕ್ಕ ನೀರಾವರಿ ಯೋಜನೆಗಳು ಅವ್ಯವಸ್ಥಿತವಾಗಿ ನಡೆಯುತ್ತಿವೆ ಎಂಬ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳ ಜೊತೆಯಲ್ಲಿಯೂ ಹೇಳಿದ್ದೇನೆ. ಹೊಸ ಯೋಜನೆಗಳನ್ನು ಹಣದ ಕೊರತೆ ಇರುವುದರಿಂದ ತೆಗೆದುಕೊಳ್ಳುವುದನ್ನು ಬಿಟ್ಟು ಅವ್ಯವಸ್ಥೆಯಲ್ಲಿರತಕ್ಕಂಥ ಏತ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಟ್ಟರೆ ೯೦ ಸಾವಿರ ಹೆಕ್ಟೇರ್ ನೀರಾವರಿಯನ್ನು ಮಾಡತಕ್ಕಂಥ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಈ ಹಿಂದೆ ಮುಖ್ಯ ಮಂತ್ರಿಗಳು ನನ್ನ ಜಿಲ್ಲೆಗೆ ಬಂದಾಗ ಮತ್ತು ಇತ್ತೀಚೆಗೆ ದೇವೇಗೌಡರು ನನ್ನ ಜಿಲ್ಲೆಗೆ ಬಂದಾಗ ಒಂದು ಮಾತು ಹೇಳಿದ್ದೆ. ಈ ವಿಷಯದಲ್ಲಿ ಸರ್ಕಾರಕ್ಕೆ ಸಂಪನ್ಮೂಲದ ಕೊರತೆ ಏನಾದರೂ ಇದ್ದರೆ ಜನತೆಯ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳಬಹುದು ಎಂದು ನಾನು ತಿಳಿಸಿದ್ದೆನು. ಈಗ ಚಿಕ್ಕ ನೀರಾವರಿ ಅಥವಾ ಏತ ನೀರಾವರಿ ಯೋಜನೆಗಳನ್ನು ಮಾಡುವುದಾದರೆ ಅದಕ್ಕೆ ಬೇಕಾದಷ್ಟು ಜನ ರೈತರು ವಂತಿಗೆ ಕೊಡಲು ಮುಂದೆ ಬಂದಿದ್ದಾರೆ. ನನ್ನ ಕ್ಷೇತ್ರದಲ್ಲಿ ಚಿಕ್ಕಪರಸನಗಿ ಎಂಬ ಗ್ರಾಮದ ರೈತರು ೫ ಲಕ್ಷ ರೂಪಾಯಿಗಳನ್ನು ಕೂಡಿಸಿಟ್ಟಿದ್ದಾರೆ. ಈ ಜನಶಕ್ತಿಯನ್ನು ಉಪಯೋಗ ಮಾಡಿಕೊಂಡು ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಒಂದು ಆಜ್ಞೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಒತ್ತಾಯ ಮಾಡುತ್ತೇನೆ, ಮತ್ತು ನೀರಾವರಿ ಮಂತ್ರಿಗಳ ಮೇಲೆ ವಿಶೇಷವಾಗಿ ಒತ್ತಾಯ ತರುತ್ತೇನೆ. ಯಾವುದಾದರೂ ಒಂದು ಯೋಜನೆಗೆ ಹತ್ತು ಲಕ್ಷ ರೂಪಾಯಿ ಇದ್ದಾಗ ೪ ಲಕ್ಷ ರೂಪಾಯಿಗಳನ್ನು ರೈತರು ಕೊಡಲಿಕ್ಕೆ ಮುಂದೆ ಬಂದರೆ ಚಿಕ್ಕಪುಟ್ಟ ಕೆರೆ ಅಥವಾ ಏತ ನೀರಾವರಿಗಳನ್ನು ಆದ್ಯತೆ ಮೇಲೆ ಮಾಡಲಿಕ್ಕೆ ಸರ್ಕಾರಿ ಆಜ್ಞೆಯನ್ನು ಏಕೆ ಮಾಡಬಾರದೆಂದು ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ. ನಾನು ಬೃಹತ್ ಯೋಜನೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಯುಕೆಪಿ. ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ೧೯೫೬ರಿಂದ ನಾನು ೧೯೬೭ರವರೆಗೆ ನಾನು ವಿದ್ಯಾರ್ಥಿಯಾಗಿದ್ದೆ ಅವತ್ತು ಅಂತರರಾಜ್ಯ ನೀರಿನ ತಂಟೆ ಎಂದು ಹೇಳುತ್ತಿದ್ದರು. ಆಗ ನನಗೆ ೨೦ ವರ್ಷ ವಯಸ್ಸು, ಈಗ ೪೫ ವರ್ಷ. ಈ ದೀರ್ಘ ವಯಸ್ಸಿನಲ್ಲಿ ಅಂತರ ರಾಜ್ಯ ನೀರಿನ ತಂಟೆ ಇನ್ನು ಬಗೆ ಹರಿದಿಲ್ಲ. ಬೃಹತ್ ಯೋಜನೆಗಳು ವಿಳಂಬವಾಗುತ್ತವೆ. ಇದನ್ನು ತಪ್ಪಿಸುವ ಸಲುವಾಗಿ ಚಿಕ್ಕ ಚಿಕ್ಕ ಕೆರೆಗಳನ್ನು, ಏತ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸುಲಭ ಸಾಧ್ಯತೆ ಇದೆ. ರೈತರು ವಂತಿಗೆ ಕೊಡಲು ಮುಂದೆ ಬರುತ್ತಿರುವಾಗ ಅಪರ ಶಕ್ತಿಯನ್ನು ಉಪಯೋಗ ಮಾಡಿಕೊಂಡು ಚಿಕ್ಕ ನೀರಾವರಿ ಕಡೆಗೆ ಹೆಚ್ಚಿನ ಗಮನ ಕೊಟ್ಟು ಮಿಂಚಿನ ವೇಗದಲ್ಲಿ ಕೆಲಸ ಮಾಡಿದರೆ ನಮ್ಮ ಜಮೀನುಗಳಿಗೆ ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆಯವ್ಯಯದಲ್ಲಿ ಮುಖ್ಯ ಮಂತ್ರಿಗಳು ೯೦ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಕೊಡುವ ಗುರಿ ಇಟ್ಟುಕೊಂಡಿದ್ದೇವೆಂದು ಏನು ಹೇಳಿದ್ದಾರೆ ಅದು ಸಾಧ್ಯವಾಗುತ್ತದೆ. ಇವೊತ್ತು ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ಉದಾಹರಣೆಗೆ ನಮ್ಮ ಊರಿನಲ್ಲಿ ಒಂದು ಏತ ನೀರಾವರಿ ಯೋಜನೆ ಇದೆ. ಅದು ಹತ್ತು ವರ್ಷದ ಹಿಂದೆ ಯಾವ ಸ್ಥಿತಿಯಲ್ಲಿತ್ತೋ ಇವೊತ್ತಿಗೂ ಅದೇ ಸ್ಥಿತಿಯಲ್ಲಿದೆ. ಸಿಬ್ಬಂದಿ ಮಾತ್ರ ಹೆಚ್ಚಾಗುತ್ತಿದೆ, ಕಾರ್ಯ ಆಗುತ್ತಿಲ್ಲ. ಏನಾದರೂ ಯೋಜನೆಗಳನ್ನು ಗ್ರಾಮ ಅಥವಾ ತಾಲ್ಲೂಕು ಮಟ್ಟದಲ್ಲಿ ತೆಗೆದುಕೊಳ್ಳಬೇಕಾದರೆ ಅಧಿಕಾರಿಗಳು, ಮಂತ್ರಿಗಳನ್ನು ದಿಕ್ಕು ತಪ್ಪಿಸುವ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಅದು ತಪ್ಪಬೇಕು. ಮಿಸ್ಸಾಗಿರುವ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಯತ್ನಿಸಬೇಕು. ಮುಖ್ಯ ಮಂತ್ರಿಗಳು ಬಜೆಟ್ಟಿನಲ್ಲಿ ಇನ್ನೊಂದು ಮಾತು ಹೇಳಿದ್ದಾರೆ. ಈಗಾಗಲೇ ಕರ್ನಾಟಕ ಸರ್ಕಾರ ಶೇಕಡ ೯೪ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ ಎಂದು. ಆದಕ್ಕಾಗಿ ವಿದ್ಯುತ್ ಮಂತ್ರಿಗಳನ್ನು, ಅರ್ಥ ಸಚಿವರನ್ನು ಹಾಗೂ

ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೆ ಇಂದಿಗೂ ಹಿಂದುಳಿದ ಪ್ರದೇಶಗಳಲ್ಲಿ ಹರಿಜನ ಕಾಲೋನಿಗಳು, ಲಂಬಾಣ ತಾಂಡಾಗಳನ್ನು ಕತ್ತಲಲ್ಲಿ ಇಟ್ಟಿದ್ದಾರೆ. ಅವರಿಗೆ ವಿದ್ಯುತ್ ಕೊಡುವ ಅವರ ಬೀದಿಗಳಿಗೆ ಬೆಳಕು ಕೊಡುವ ಕಾರ್ಯ ಆಗಬೇಕು. ಜಮಖಂಡಿ ಮತ್ತು ಇಂಡಿಯಲ್ಲಿ ವಿದ್ಯುತ್ ಕೊರತೆ ನೀಗಿಸುವ ಸಲುವಾಗಿ ವಿದ್ಯುತ್ ಜನರೇಟರ್‌ಗಳನ್ನು ಸ್ಥಾಪಿಸುತ್ತೇವೆಂದು ಕಳೆದ ವರ್ಷ ಆಯವ್ಯಯದಲ್ಲಿ ಪ್ರಸ್ತಾಪವಾಗಿತ್ತು. ಅದಕ್ಕೆ ಕೇಂದ್ರ ಸರ್ಕಾರದಿಂದ ಮನ್ನಣೆ ಕೂಡ ಸಿಕ್ಕಿದೆ. ಅದನ್ನು ಆರಂಭಿಸಲಿಕ್ಕೆ ಹಸಿರು ಬಾವುಟ ದೊರೆತಿದೆ ಎಂದು ಮುಖ್ಯ ಮಂತ್ರಿಗಳೂ ಹೇಳಿದ್ದಾರೆ. ಅದಕ್ಕಾಗಿ ಮುಖ್ಯ ಮಂತ್ರಿಗಳನ್ನು ಬಿಜಾಪುರ ಜಿಲ್ಲೆಯ ಜನತೆಯ ಪರವಾಗಿ ಅಭಿನಂದಿಸುತ್ತೇನೆ. ಆ ಕಾರ್ಯ ಬೇಗನೆ ಆರಂಭವಾಗಬೇಕು. ಮಳೆಯ ಅಭಾವದಿಂದ ನಮ್ಮ ಜಿಲ್ಲೆಯಲ್ಲಿ ಬಹಳ ಹಾನಿ ಉಂಟಾಗುತ್ತಿದೆ. ನಾನು ಸಣ್ಣವನಿದ್ದಾಗ ನಮ್ಮ ಮಾಸ್ತರು ಪಾಠ ಹೇಳುತ್ತಿದ್ದರು. ಬಿಜಾಪುರ ಜಿಲ್ಲೆಯಲ್ಲಿ ಸರಾಸರಿ ಮಳೆಯ ಪ್ರಮಾಣ ೨೪ ಇಂಚು ಎಂದು. ಕಳೆದ ೪ ವರ್ಷಗಳಿಂದ ೪ ಇಂಚು ಕೂಡ ಆಗಿಲ್ಲ. ವರ್ಷದಿಂದ ವರ್ಷಕ್ಕೆ ಮಳೆ ಕ್ಷೀಣಿಸುತ್ತಿದೆ. ನಮ್ಮ ಸರ್ಕಾರ ಬಂದಮೇಲೆ ಅಂದರೆ ಹೆಗಡೆಯವರ ಸರ್ಕಾರ ಬಂದಮೇಲೆ ಒಣ ಬೇಸಾಯ ಅಭಿವೃದ್ಧಿಗಾಗಿ ವಿಭಾಗಕ್ಕೆ ಒಂದೊಂದು ನಿಗಮ ಗಳನ್ನು ಸ್ಥಾಪಿಸಿದ್ದಾರೆ,

ಈ ನಿಯಮಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಸಿಂಧಗಿ ತಾಲ್ಲೂಕಿನಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ಕೆಲವು ಆಯ್ದ ಕ್ಷೇತ್ರಗಳಲ್ಲಿ ಒಣ ಬೇಸಾಯ ಮಂಡಲಿಯವರು ಒಳ್ಳೆಯ ಕೆಲಸ ಮಾಡಿದ್ದಾರೆ. ಸಿಂಧಗಿ ತಾಲ್ಲೂಕಿನಲ್ಲಿ ಮೂರು ಸಾವಿರ ಎಕರೆ ಜಮೀನಿನಲ್ಲಿ ಪ್ರಯೋಗ ಮಾಡಿದ್ದಾರೆ. ಇದರಿಂದ ರೈತರಿಗೆ ಅತ್ಯಂತ ಸಂತೋಷ ಉಂಟಾಗಿದೆ. ಒಣ ಬೇಸಾಯ ಮಂಡಳಿ ಅಧ್ಯಕ್ಷರಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕು, ಅದರ ಜೊತೆಗೆ ಹಣಕಾಸಿನ ಸೌಲಭ್ಯ ಮತ್ತು ಸಿಬ್ಬಂದಿ ವರ್ಗದವರನ್ನೂ ಕೊಡಬೇಕೆಂದು ತಮ್ಮ ಮುಖಾಂತರ ಈ ಸಭೆಯಲ್ಲಿ ಉಪಸ್ಥಿತರಿರುವ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಕೇವಲ ಎರಡೇ ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಐದು ನದಿಗಳು ಹರಿಯುತ್ತಿವೆ. ಯಾವ ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲೂ ಇಷ್ಟೊಂದು ನದಿಗಳು ಹರಿಯುವುದಿಲ್ಲ. ಕೃಷ್ಣ, ಮಲಪ್ರಭ, ಘಟಪ್ರಭ, ಭೀಮ, ದೋಣ ನದಿಗಳು ಅಲ್ಲಿ ಹರಿಯುತ್ತವೆ. ಈ ಐದು ನದಿಗಳ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವ ಸಲುವಾಗಿ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿದ್ದೆವು. ಅದಕ್ಕಾಗಿ ಏತನೀರಾವರಿ ನಿಗಮವನ್ನು ಮಾಡಿದ್ದಾರೆ. ಮಾನ್ಯ ದೇವೇಗೌಡರು ನಮ್ಮ ಜಿಲ್ಲೆಗೆ ಬಂದಿದ್ದಾಗ ಹೇಳಿದ್ದೆ, ಸಮರ್ಥವಾದ ಚೀಫ್ ಇಂಜಿನಿಯರ್ ಅವರನ್ನು ಕುರ್ಚಿ ಮೇಲೆ ಕೂಡಿಸಿದ್ದೀರಿ. ಆದರೆ ಅವರಿಗೆ ಕಚೇರಿ ಇಲ್ಲ, ಸಿಬ್ಬಂದಿ ಇಲ್ಲ, ದುಡ್ಡಿಲ್ಲ. ಅವರು ಸುಮ್ಮನೆ ಎದುರಿಗಿರುವ ದರ್ದಾ ನೋಡುತ್ತ ಕುಳಿತುಕೊಳ್ಳತಕ್ಕ ಪರಿಸ್ಥಿತಿ ಬಂದಿದೆ. ಸಮರ್ಥವಾದ ಅಧಿಕಾರಿಗಳ ಕೈಯಿಂದ ಸರಿಯಾದ ಕೆಲಸವನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಏತ ನೀರಾವರಿ ನಿಗಮಕ್ಕೆ ಸಿಬ್ಬಂದಿ ಮತ್ತು ಆರ್ಥಿಕ ಸಹಾಯವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಇನ್ನೊಂದು ಮಾತನ್ನು ಹೇಳುತ್ತೇನೆ, ರೈತರಿಗೆ ಬೇರೆ ಬೇರೆ ಮಾರ್ಗಗಳ ಮುಖಾಂತರ ೧೦೦ ಕೋಟಿ ರೂಪಾಯಿಗಳ ಪರಿಹಾರ ಕೊಟ್ಟಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಈ ವಿಷಯದಲ್ಲಿ ಬಹಳಷ್ಟು ಸಂದೇಹ ಇದೆ. ಒಂದು ಸಣ್ಣ ವಿಷಯ ಹೇಳುತ್ತೇನೆ. ಒಬ್ಬ ರೈತ ಬ್ಯಾಂಕಿನಿಂದ ಸಾಲ ತಂದು ಬಾವಿ ತೋಡುತ್ತಾನೆ. ಬಾವಿ ಫೇಲಾದರೆ ಸಾಲ ಕೊಡಬೇಕಾದ ಅಗತ್ಯವಿಲ್ಲ ಎಂದು ಸರ್ಕಾರ ದಲ್ಲಿ ಯೋಜನೆ ಇದೆ, ವಿಫಲವಾದ ಬಾವಿಗಳ ಸಾಲ ಮನ್ನಾ ಮಾಡಬೇಕೆಂದು ಇದೆ. ಆದರೆ ಬ್ಯಾಂಕಿನವರು ಏನೇನೋ ಕೊಕ್ಕೆ ಹಾಕಿ ಜನರಿಗೆ ಆ ಸೌಲಭ್ಯ ಸಿಗದಂತೆ ಮಾಡುತ್ತಿದ್ದಾರೆ. ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರು, ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರ್ ಅವರು ಮೂರು ಜನರೂ ಸಂದರ್ಶನ ಮಾಡಬೇಕು ಎಂದು ನಿಯಮವಿದೆ, ಈ ಮೂರು ಜನರೂ ಒಂದೊಂದು ರೀತಿ ಹೇಳಿ ಸರ್ಕಾರದವರು ಕೊಡತಕ್ಕ ಪರಿಹಾರ ರೈತರಿಗೆ ಮುಟ್ಟದಂತೆ ಮಾಡುತ್ತಿದ್ದಾರೆ. ಇದರಲ್ಲೂ ಕೂಡ ಕೆಂಪು ಕತ್ತರಿ ಪ್ರಯೋಗ ಆಗುತ್ತಿದೆ. ಸರ್ಕಾರ ಕೊಡುವ ಪರಿಹಾರಗಳು ಏನಿವೆ ಅದಕ್ಕೆ ಕೆಂಪು ಕತ್ತರಿಗೆ ಅವಕಾಶ ಇಲ್ಲದೆ ಜನರಿಗೆ ಮುಟ್ಟುವ ವ್ಯವಸ್ಥೆ ಆಗಬೇಕು. ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮೂರು ದಿವಸದಿಂದ ಎಂದರೆ ೨೮ನೇ ತಾರೀಖಿನಿಂದ ಬೆಳಗಾವಿ ಮತ್ತು ಧಾರವಾಡದಲ್ಲಿ ರೈತರು ಜೈಲ್‌ಭರೊ ಸತ್ಯಾಗ್ರಹ ಮಾಡುತ್ತಿದ್ದಾರೆ. ೧ ರಿಂದ

೭ ಸಾವಿರ ಜನ ಜೈಲಿಗೆ ಹೋಗಿದ್ದಾರೆ. ಅವರು ಏತಕ್ಕೆ ಸತ್ಯಾಗ್ರಹ ಮಾಡುತ್ತಿದ್ದಾರೆ, ಇದರ ಬಗ್ಗೆ ತಾವು ಆಳವಾಗಿ ಯೋಚನೆ ಮಾಡಬೇಕು. ಬಜೆಟ್ಟಿನಲ್ಲಿ ಸರ್ಕಾರಿ ನೌಕರರಿಗೆ ಬೇಕಾದಷ್ಟು ಸೌಲಭ್ಯಗಳನ್ನು ಕೊಟ್ಟಿದ್ದೀರಿ. ಸರ್ಕಾರಿ ನೌಕರರಿಗೆ ಕೊಡುವಂತೆ ಸೌಲಭ್ಯಗಳನ್ನು ರೈತಾಪಿ ವರ್ಗದವರಿಗೂ ಕೊಡಬೇಕು. ಅವರ ಉತ್ಪನ್ನಗಳಿಗೆ ಬೆಂಬಲ ಬೆಲೆ ಕೊಡಬೇಕು. ಅವರ ಮೇಲೆ ಪರೋಕ್ಷವಾಗಿ ತೆರಿಗೆ ಹೇರಿದ್ದೀರಿ. ರೈತರು ಉಪಯೋಗ ಮಾಡುವ ಟ್ರ್ಯಾಕ್ಟರ್‌ಗೆ ಉಪಯೋಗಿಸುವ ಡೀಜೆಲ್ ಪೆಟ್ರೋಲ್‌ಗಳಿಗೆ, ರಸಗೊಬ್ಬರಕ್ಕೆ ತೆರಿಗೆ ಹೆಚ್ಚಿಸಿದ್ದೀರಿ. ಆದ್ದರಿಂದ ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಿ ಅವರ ಮೇಲೆ ಹೇರಿರುವಂಥ ಕರಭಾರವನ್ನು ತೆಗೆಯಬೇಕು. ಬೆಂಗಳೂರಿನಲ್ಲಿ ಕರ ತಪ್ಪಿಸಿಕೊಳ್ಳುವವರು ಸಾವಿರಾರು ಜನರಿದ್ದಾರೆಂದು ಕಡಪಟ್ಟಿಯವರು ಹೇಳಿದ್ದಾರೆ. ಇಲ್ಲಿ ತೆರಿಗೆಗಳ್ಳತನ ಮಾಡುವವರಿಂದ ಸರಿಯಾಗಿ ತೆರಿಗೆ ವಸೂಲಿ ಮಾಡಿದರೆ ರೈತರ ಮೇಲೆ ಹಾಕುವುದು ತಪ್ಪುತ್ತದೆ ಎಂದು ಕಡಪಟ್ಟಿಯವರು ಹೇಳಿದರು. ಮಾನ್ಯ ಕಡಪಟ್ಟಿಯವರ ಮಾತನ್ನು ಸಮರ್ಥಿಸಿ ಹೇಳಬೇಕೆಂದರೆ ಒಂದು ವಿಚಾರ ನೆನಪಿಗೆ ಬರುತ್ತದೆ. ಬಿಜಾಪುರದಲ್ಲಿ ಒಬ್ಬ ಮೊಮ್ಮಗ ಶಾಲೆಯಲ್ಲಿ ಕಲಿಯುತ್ತಿದ್ದವನು ಒಂದು ಸಾರಿ ಅಜ್ಜಿ ಮನೆಗೆ ಹೋದ. ಬಹಳ ದಿವಸಕ್ಕೆ ಮೊಮ್ಮಗ ಬಂದ ಎಂದು ಅಜ್ಜಿ ಬಾರೋ ನನ್ನ ಮಗನೆ, ಸಕ್ಕರೆ ಚಹಪುಡಿ ಇಲ್ಲ, ಹಾಲೊಂದಿದ್ದರೆ ಚಹ ಮಾಡುತ್ತೇನೆ ಎಂದು ಹೇಳಿದಳಂತೆ. ಹಾಗೆ ನಾವು ರಿಯಾಯಿತಿ ಕೊಟ್ಟರೂ ಯಾರಿಗೆ ತಲುಪಬೇಕೋ ಅವರಿಗೆ ತಲುಪದೆ ಮಧ್ಯವರ್ತಿಗಳು ಕತ್ತರಿ ಪ್ರಯೋಗ ಮಾಡಿ ಲಪಟಾಯಿಸುತ್ತಿದ್ದಾರೆ. ಇದನ್ನು ನಿಲ್ಲಿಸಬೇಕು. ಮತ್ತು ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಯಾವುದೇ ರೀತಿಯ ಕ್ರಮ ತೆಗೆದುಕೊಂಡರೂ, ಈ ಮನೆಯ ಈ ಕಡೆಯ ಸದಸ್ಯರಾಗಲಿ, ಆ ಕಡೆಯ ಸದಸ್ಯರಾಗಲಿ ಅದರ ಬಗ್ಗೆ ಆಕ್ಷೇಪ ಎತ್ತುವುದಕ್ಕೆ ಸಾಧ್ಯವಿಲ್ಲ. ಆ ಕೆಲಸವನ್ನು ಯಾರೂ ಮಾಡುವುದಿಲ್ಲ. ಅದೇ ರೀತಿ ಸಾಮಾನ್ಯ ಜನರ ಮೇಲೆ ತೆರಿಗೆಯನ್ನು ಹಾಕುವುದನ್ನು ತಪ್ಪಿಸಬೇಕೆಂಬ ವಿಚಾರವನ್ನು ಹೇಳುತ್ತಾ, ಕೊನೆಯದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದ ಶಾಲಾ ಮಕ್ಕಳಿಗೆ ಒಂದು ಕರೆ ಕೊಟ್ಟಿದ್ದಾರೆ. ಮಕ್ಕಳು ಅವರ ಕರೆಯನ್ನು ಕೇಳಿ ಹಳ್ಳಿಗಾಡಿನಲ್ಲಿ ಬಹಳ ತೀವ್ರ ರೀತಿಯ ಪ್ರತಿಕ್ರಿಯೆ ತೋರಿಸುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲೂ ಆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವನ ನಿರ್ಮಾಣ ಕಾರ್ಯದ ಬಗ್ಗೆ ಖಾಸಗೀಯವರು ಯಾರಾದರೂ ಮುಂದೆ ಬಂದಲ್ಲಿ ಅವರಿಗೆ ಸರ್ಕಾರ ಸಿ, ಮತ್ತು ಡಿ. ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ಕೊಡುವುದಾಗಿ ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಶಿಕ್ಷಿತ ಎಜುಕೇಟೆಡ್ ನಿರುದ್ಯೋಗಿಗಳು ಇದ್ದಾರೆ. ಅವರಿಗೆ ಈ ಒಂದು ಕೆಲಸವನ್ನು ವಹಿಸಿಕೊಡಿ. ಮತ್ತೆ ಮಹಿಳಾ ಮಂಡಳಕ್ಕೆ ಈ ಕೆಲಸವನ್ನು ವಹಿಸಿ ಎಂಬುದಾಗಿ ನಾನು ಸಲಹೆ ಮಾಡುತ್ತಿದ್ದೇನೆ. ಅದೇ ರೀತಿ ಶಾಲಾ ಕಾಲೇಜುಗಳ ಆವರಣದಲ್ಲಿ ವನ ನಿರ್ಮಾಣ ಮಾಡುವುದಕ್ಕೆ ವಿದ್ಯಾರ್ಥಿಗಳಿಗೂ ಉತ್ತೇಜನ ನೀಡಬೇಕು. ಕಳೆದ ೪–೫ ವರ್ಷಗಳಿಂದ ಸಾಲು ಮರಗಳ ನೆಡುವಿಕೆ ಹಾಗೂ ಸಾಮಾಜಿಕ ಅರಣ್ಯವನ್ನು ಬೆಳೆಸುವುದರಲ್ಲಿ ಸರ್ಕಾರ ಹೆಚ್ಚು ಆಸಕ್ತಿ ಹೊಂದಿದೆ. ನಾವು ಎತ್ತ ನೋಡಿದರೂ ಮರಗಳು ಕಾಣಸಿಗುತ್ತವೆ. ಆದರೆ ಈ ಹಿಂದೆ ಇದ್ದ ಯಾವ ಸರ್ಕಾರ ಕೂಡ ಈ ರೀತಿಯ ವಿಶೇಷ ಗಮನ ಕೊಟ್ಟಿರಲಿಲ್ಲ. ನ್ಯಾಚುರಲ್ ಫಾರೆಸ್ಟನ್ನು ನಾವು ಬೆಳೆಸಬೇಕಾಗಿದೆ. ನಮ್ಮ ಸರ್ಕಾರ ಆ ಬಗ್ಗೆ ಪ್ರಯತ್ನ ಮಾಡುತ್ತಿದೆ, ಪ್ರಯತ್ನ ಮಾಡಿದೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೂಜಿಗೆ, ಹಾಗೂ ವೀಡಿಯೋಗಳಿಗೆ ತೆರಿಗೆಯನ್ನು ಹೆಚ್ಚಿಸಿದ್ದೀರಿ. ಅದೇ ರೀತಿ ಸಾರಾಯಿ ಬೆಲೆಯನ್ನು ಹೆಚ್ಚು ಮಾಡಿದ್ದೀರಿ. ಅದಕ್ಕಾಗಿ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅದರ ಜೊತೆಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಅವರ ಮುಂಗಡ ಪತ್ರದಲ್ಲಿ ಇನ್ನೊಂದು ಭಯಾನಕವಾದ ಪ್ರಸ್ತಾಪ ಒಂದನ್ನು ಮಾಡಿದ್ದಾರೆ. ಅದೇನೆಂದರೆ, ಸಹಕಾರಿ ಸಂಘಗಳು ಸಾರಾಯಿಯನ್ನು ಮಾರಾಟ ಮಾಡಬಹುದು ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನಾವು ಗಾಂಧೀ ತತ್ವವನ್ನು ಬಿಟ್ಟು ಬಹಳ ದೂರ ಹೋಗುತ್ತಿದ್ದೇನೇನೊ ಎಂದೆನ್ನಿಸುತ್ತದೆ. ಮಹಾತ್ಮಾ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ನಡೆಯುವವರು ನಾವು. ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರಿಗೆ ಸಹಕಾರಿ ಸಂಘಗಳ ವಿಚಾರ ಚೆನ್ನಾಗಿ ಗೊತ್ತಿದೆ. ಅವರು ಸಹಕಾರ ಸಂಘಗಳನ್ನು ನಡೆಸುವುದರಲ್ಲಿ ಬಹಳ ಅನುಭವವನ್ನು ಹೊಂದಿರುವವರು. ನಾಳೆ ಸೇವಾ ಸಹಕಾರಿ ಸಂಘಗಳಲ್ಲಿ ಸಾರಾಯಿ ಮಾರಾಟ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇ ಆದರೆ, ಅವು ಸಾರಾಯಿ ಸಹಕಾರಿ ಸಂಘಗಳು ಆಗುತ್ತವೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಸಹಕಾರಿ ಸಂಘಗಳಲ್ಲಿ ಸಾರಾಯಿಯನ್ನು ಮಾರಾಟ ಮಾಡುವುದಕ್ಕೆ ಅವಕಾಶ

ಕೊಡಬೇಡಿ. ಅದಕ್ಕೆ ಬೇರೆ ಅಂಗಡಿಗಳನ್ನು ಬೇಕಾದರೆ ನೇಮಕ ಮಾಡಿ. ಮತ್ತೆ ಪೆಟ್ರೋಲ್, ಡೀಸೆಲ್ ಹಾಗೂ ರಸ ಗೊಬ್ಬರದ ಮೇಲೆ ಹಾಕಿರುವಂತಹ ತೆರಿಗೆಯನ್ನು ಕಡಿಮೆ ಮಾಡಬೇಕು. ಆ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಂಪನ್ಮೂಲವನ್ನು ರೂಢಿಸಿ ಕೊಳ್ಳುವಂತಹ ಮುಂಗಡ ಪತ್ರವನ್ನು ನಮ್ಮ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ನಮ್ಮಲ್ಲಿ ಇರತಕ್ಕ ಆರ್ಥಿಕ ಪರಿಸ್ಥಿತಿಯಲ್ಲಿ, ಕಳೆದ ೪-೫ ವರ್ಷಗಳಿಂದ ಆದಂತಹ ಭೀಕರ ಬರಗಾಲ ಇಡೀ ಆರ್ಥಿಕ ಶಕ್ತಿಯನ್ನೇ ಜರ್ಜರಿಸಿದೆ. ನಮ್ಮ ಸಂಪನ್ಮೂಲಗಳನ್ನು ರೂಢಿಸಿಕೊಳ್ಳದಿದ್ದರೆ, ಅದು ನಮ್ಮ ಆರ್ಥಿಕ ಸ್ಥಿತಿಯ ಮೇಲೆ ಬಹಳ ದುಷ್ಪರಿಣಾಮವಾಗುತ್ತದೆ. ಶ್ರೀಮಾನ್ ರಾಮಕೃಷ್ಣ ಹೆಗಡೆ ಯವರೇ ರಾಜ್ಯದ ಮುಖ್ಯಮಂತ್ರಿಗಳು ಆಗಿಲ್ಲವೆ ಇನ್ನೊಬ್ಬರು ಮುಖ್ಯಮಂತ್ರಿಗಳಾಗಿದ್ದರೆ, ಇಂತಹ ಒಂದು ಭೀಕರ ಪರಿಸ್ಥಿತಿಯಲ್ಲಿ ೪ ಮಳೆ ಅಗ್ಗ ತೆಗೆದುಕೊಂಡು ಹೋಗಿ ಗಿಡಕ್ಕೆ ಉರುಲು ಹಾಕಿಕೊಳ್ಳುತ್ತಿದ್ದರು. ಆದರೂ ಇವರು ಇಂತಹ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಇದರ ಬಗ್ಗೆ ಬೇರೆ ಯಾರೂ ಆಕ್ಷೇಪಣೆ ಮಾಡುವಂತಹ ಪ್ರಮೇಯ ಇಲ್ಲ. ಅತ್ಯಂತ ಜಾಣ್ಮೆಯಿಂದ ಎಲ್ಲಾ ಹಿತರಕ್ಷಣೆ ಯನ್ನು ಕಾಪಾಡುವಂತಹ ಮುಂಗಡ ಪತ್ರವನ್ನು ಮಂಡಿಸಿದ್ದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಬಿಜಾಪುರ ಜಿಲ್ಲೆಗೆ ಕಳೆದ ಡಿಸೆಂಬರ್ ತಿಂಗಳಲ್ಲಿ ಶ್ರೀಮಾನ್ ದೇವೇಗೌಡರ ಜೊತೆಯಲ್ಲಿ ಬಂದಿದ್ದಾಗ ಬಿಜಾಪುರಕ್ಕೆ ವರದಾನವಾಗಿರುವ ಮುಳುವಾಡಿ ಏತ ನೀರಾವರಿ ಯೋಜನೆಗೆ ಅಡಿಗಲ್ಲು ಹಾಕಿ ಬಂದಿದ್ದಾರೆ. ಆ ಒಂದು ಕೆಲಸ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿರುವಾಗ ಶ್ರೀ ದೇವೇಗೌಡರು ನೀರಾವರಿ ಮಂತ್ರಿಗಳಾಗಿರುವ ಕಾಲದಲ್ಲೇ ಆಗಬೇಕು. ಅವರ ಕಾಲದಲ್ಲಿ ಆಗದಿದ್ದರೆ ಇನ್ನಾವ ಕಾಲದಲ್ಲೂ ಅದು ಆಗುವುದಿಲ್ಲ ಎನ್ನುವ ನಿರ್ಣಯಕ್ಕೆ ಜನ ಬಂದಿದ್ದಾರೆ. ನಮ್ಮ ಜಿಲ್ಲೆಗೆ, ಮುಳವಾಡಿ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿ ಯಾವಾಗಲೂ ಬರಗಾಲದಲ್ಲೇ ಇರುತ್ತಿದ್ದ ನಮ್ಮ ಜಿಲ್ಲೆಯನ್ನು ಸಮೃದ್ಧ ಜಿಲ್ಲೆಯನ್ನಾಗಿ ಮಾಡ ಬೇಕು. ಆ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ದೃಷ್ಟಿ ಬೀರಿದ್ದಾರೆ. ನೀರಾವರಿ ಮಂತ್ರಿಗಳೂ ಕೃಪೆ ತೋರಿಸಿದ್ದಾರೆ. ಅದನ್ನು ಜಾಗ್ರತೆ ಮಾಡಿಸಿಕೊಡಬೇಕೆಂದು ಹೇಳಿ ಅತ್ಯಂತ ಸಮತೋಲನ ಮುಂಗಡ ಪತ್ರವನ್ನು ನಮ್ಮ ಎದುರಿಗೆ. ಅರ್ಥಸಚಿವರು ಹಾಗೂ ಮುಖ್ಯಮಂತ್ರಿಗಳು ಮಂಡಿಸಿದ್ದಕ್ಕಾಗಿ ಅವರಿಗೆ ಅಭಿನಂದಿಸಿ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೂ ಅಭಿನಂದಿಸಿ ನನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್ ಪಾಟೀಲ್ (ಗದಗ್) — ಸನ್ಮಾನ್ಯ ಅಧ್ಯಕ್ಷರೇ, ನಾನು ವಿಶೇಷವಾಗಿ ಈ ಬಡ್ಜೆಟ್ ಭಾಷಣದ ಬಗ್ಗೆ ವಿವರವಾಗಿ ಮಾತನಾಡುವುದಕ್ಕೆ ಇಚ್ಛಿಸುವುದಿಲ್ಲ. ಕಾರಣ ಏನೆಂದರೆ, ಅನೇಕ ವಿವಿಧ ಖಾತೆಗಳ ವಿಷಯದ ಬಗ್ಗೆ ಮಾತನಾಡುವಾಗ ನನ್ನ ಪಾಲಿಗೆ ನನ್ನ ಲೀಡರ್ ಕೊಡತಕ್ಕ ಖಾತೆ ಮೇಲೆ ನಾನು ಮಾತನಾಡುತ್ತೇನೆ. ಆದರೆ ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ನಾನು ಇಲ್ಲಿ ಹೇಳಲೇಬೇಕಾಗುತ್ತದೆ. ಮಾನ್ಯ ತುಂಗಲ್ ಅವರು ಮಾತನಾಡುವಾಗ ಬಹಳ ಅತ್ಯುತ್ತಮವಾದ ಎರಡು ಮಾತುಗಳನ್ನು ಆಡಿದ್ದಾರೆ. ಮೊದಲನೆಯದಾಗಿ, ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರ ಹೊರತು ಇನ್ನು ಯಾರೇ ಮುಖ್ಯ ಮಂತ್ರಿಗಳಾಗಿದ್ದರೂ ಸಹಾ ಈಗಿರುವ ಅಧಿಕಾರ ವರ್ಗದ ಜೊತೆ, ಈಗಿರುವ ಸಂಪನ್ಮೂಲದ ಜೊತೆಗೆ ಅವರು ಉರುಲು ಹಾಕಿಕೊಳ್ಳುವುದು ಒಂದೇ ಬಾಕಿ ಇತ್ತು ಎಂದು. ಅದನ್ನು ತಪ್ಪಿ ನಗೆಮುಗದಿಂದ ಕಂಳಿತ ವ್ಯಕ್ತಿ ರಾಮಕೃಷ್ಣ ಹೆಗ್ಡೆಯವರು ಆಗಿರುವುದರಿಂದ ನಾನು ಅದಕ್ಕೆ ಒಪ್ಪಿಗೆ ಸಲ್ಲಿಸುತ್ತೇನೆ. ಅವರು ಇನ್ನೊಂದು ಮಾತನ್ನು ಹೇಳಿದರು. ರಾಮಕೃಷ್ಣ ಹೆಗ್ಡೆಯವರು ಉತ್ತಮವಾದ ಕಾರ್ಯಗಳನ್ನು ಮಾಡುವುದರ ಜೊತೆಗೆ ಜನರಲ್ಲಿ ಉತ್ಸಾಹವನ್ನು ಮೂಡಿಸಿದ್ದಾರೆ ಎಂದು. ಬರಗಾಲ ಇದ್ದರೂ ಕೂಡಾ ಗಲಾಟೆ ಮಾಡಬೇಡಿ, ನೀರು ಕೊಡುತ್ತೇನೆ, ನಾನು ಆಹಾರ ಧಾನ್ಯ ಕೊಡುತ್ತೇನೆಂದು ಹೇಳಿದ್ದಾರೆ. ಒಂದು ಪ್ರಜಾಪ್ರಭುತ್ವದಲ್ಲಿ ಹಿರಿಯವನಾದವನಿಗೆ ಇರತಕ್ಕ ಒಂದು ಸದ್ಗುಣ ಇದು. ಮಾನ್ಯ ಮುಖ್ಯ ಮಂತ್ರಿಯವರಿಗೆ ಈ ಗುಣ ಇದೆ. ನಾನು, ಈಗಾಗಲೇ ಬಹಳ ಕಂಗೆಟ್ಟಿರುವ ಈ ಅಧಿಕಾರ ವರ್ಗದ ಬಗ್ಗೆ ವಿವಿಧ ವಿವರಣೆ ಕೊಟ್ಟು ಅವರ ಮನಸ್ಸನ್ನು ಕೆಡಿಸುವುದಕ್ಕೆ ಹೋಗುವುದಿಲ್ಲ. ಹಾಗೂ ಜನರ ಮನಸ್ಸನ್ನು ಪ್ರಕ್ಷುಬ್ಧ ವಾತಾವರಣಕ್ಕೆ ಕೊಂಡೊಯ್ಯುವುದಿಲ್ಲ. ನಾನು ಬೇರೆಯಾಗಿಯೇ ಚರ್ಚೆ ಮಾಡುತ್ತೇನೆ. ಇವತ್ತು ನಾನು ಒಂದು ಮಾತನ್ನು ಹೇಳುತ್ತೇನೆ. ಇಂದು ಯಾರಿಂದ ಈ ರಾಜ್ಯ ನಡೆದಿದೆ ಎಂಬುದನ್ನು ತಿಳಿದುಕೊಳ್ಳಬೇಕು.

ನೀವು ನಿಜವಾಗಿ ಅಲ್ಲಿ ಹೋಗುತ್ತೀರೋ ಇಲ್ಲಿ ಹೋಗುತ್ತೀರೋ ಅದು ನನಗೆ ಸಂಬಂಧ ಇಲ್ಲ. ನೀವು ದೊಡ್ಡ ಸ್ಥಾನಕ್ಕೆ ಹೋದರೆ ನನಗೂ ಆನಂದವಾಗುತ್ತದೆ. ಕರ್ನಾಟಕದ ಒಬ್ಬ ಮನುಷ್ಯ ದೊಡ್ಡ ಸ್ಥಾನದಲ್ಲಿ ಇರಲಿ, ರಾಜೀವ್ ಗಾಂಧಿಯವರ ಬಲಗಡೆಯೇ ಇರಲಿ, ಎಡಗಡೆಯೇ ಇರಲಿ, ಹಿಂದೆಯೇ ಇರಲಿ, ಮುಂದೆಯೇ ಇರಲಿ ನಮ್ಮವರು ಒಬ್ಬರು ಅಲ್ಲಿಗೆ ಹೋಗಿದ್ದಾರೆ ಎಂದರೆ ನನಗೆ ಆನಂದವಾಗುತ್ತದೆ. ಆ ಆನಂದ ಯಾರಿಗಿಂತಲೂ ಕಡಿಮೆಯದೇನಲ್ಲ. ಈ ವಿಷಯವಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ವೈಯುಕ್ತಿಕ ವಿಷಯದಲ್ಲಿ ನಾನು ರಾಜಕೀಯ ತರುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಒಂದು ಮಾತು ನಿಜ. ಯಾವುದೇ ಸ್ಥಾನದಲ್ಲಿ ಇದ್ದರೂ ಕೂಡಾ ಹೊಣೆಗಾರಿಕೆ ಇವರಲ್ಲಿ ಇವೊತ್ತಿನ ದಿವಸ ಹೆಚ್ಚು ಇದೆ. ಉಳಿದವರಿಗಿಂತಲೂ ಹೆಚ್ಚು ಇದೆ. ಮುಖ್ಯ ಮಂತ್ರಿಗಳು ರಾಮಕೃಷ್ಣ ಹೆಗ್ಡೆಯವರು ಆಗಿರುವುದರಿಂದ ನಾನು ಇದನ್ನು ಹೇಳುತ್ತಿದ್ದೇನೆಯೇ ಹೊರತು ಬೇರೆಯವರು ಮುಖ್ಯ ಮಂತ್ರಿಗಳಾಗಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. ಹೆಗ್ಡೆಯವರು ಯಾವ ಒಂದು ಮನೆತನದಿಂದ ಬಂದಿರುವವರೆಂಬುದರ ಬಗ್ಗೆ ಇವತ್ತು ಗಮನ ಸೆಳೆಯಬೇಕು. ಒಂದು ಉದಾತ್ತವಾದ ಮನೆತನದಿಂದ, ಗಾಂಧೀವಾದವನ್ನು ಹೊಂದಿರುವ, ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ತತ್ವಗಳನ್ನು ಅನುಕರಣೆ ಮಾಡಿ ತ್ಯಾಗ ಮಾಡಿ ಬಂದ ಮನೆತನದಿಂದಲೇ ಬಂದ ಆ ಒಂದು ಪುಣ್ಯದಿಂದ ಇವತ್ತು ಇವರು ಸ್ಥಾನಮಾನದಲ್ಲಿ ಮೇಲಿಂದ ಮೇಲೆ ಹೋಗಿ ಮುಖ್ಯ ಮಂತ್ರಿಗಳಾಗಿದ್ದಾರೆ. ಈ ಮುಖ್ಯ ಮಂತ್ರಿಯವರ ಕಡೆಯಿಂದ ನಾವು ಗಾಂಧೀವಾದವನ್ನು ಹೆಚ್ಚು ನಿರೀಕ್ಷೆ ಮಾಡಿದರೆ ತಪ್ಪು ಭಾವನೆ ಆಗುವುದಿಲ್ಲ. ಇವರ ಭಾಷಣವನ್ನು ನೋಡಿದರೆ ಏಕೆ ಇಷ್ಟು ಸಿಟ್ಟಿನಿಂದ ಮಾಡಿದ್ದಾರೆ ಅಥವಾ ಜನತೆಯ ಮೇಲೆ ಏನು ಕೋಪಕಾರಬೇಕೆಂದು ಮಾಡಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಕರ್ನಾಟಕದ ಜನತೆಯನ್ನು ಕೆಣಕಲು ಈ ರೀತಿ ಮಾಡಿದ್ದಾರೋ ಏನೋ. ಒಮ್ಮೊಮ್ಮೆ ಅವರು ಕೆಣಕುತ್ತಾರೆ. ನಾವು ಸುಮ್ಮನಿದ್ದರೂ ಕೆಣಕಿ ಕೆಣಕಿ ನಮ್ಮಿಂದ ಉತ್ಸಾಹವನ್ನು ಹರಿಸುವ ಸ್ವಭಾವ ಅವರದ್ದು. ಅದನ್ನು ಮಾಡಿದ್ದಾರೋ ಏನೋ ಗೊತ್ತಿಲ್ಲ. ಈ ಸಹಕಾರಿ ರಂಗದ ಬಗ್ಗೆ ನಾನು ಅವರಿಗೆ ಅನೇಕ ದಿವಸಗಳಿಂದ ಹೇಳುತ್ತಿದ್ದೇನೆ. ನಾನು ಈಗ ಸಹಕಾರಿ ರಂಗದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಸಹಕಾರಿ ರಂಗದಲ್ಲಿ ಅವರ ಕೀರ್ತಿ ಹೆಚ್ಚಾಗಿದೆ. ಹಿಂದೊಮ್ಮೆ ಅನೇಕ ರಾಜಕೀಯ ಧುರೀಣರು ಪಟ್ಟು ಹಿಡಿದು ಕುಳಿತಾಗ ನಾನೂ ವಿರೋಧ ಪಕ್ಷದಲ್ಲಿ ಇದ್ದೆ. ಆಗ ಇವರು ಸದನದಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟರು. ಪಾಟೀಲರೇ, ಆಕ್ಟಿನಲ್ಲಿ ಸೆಕ್ಷನ್ ೨೯ರಲ್ಲಿ ೨೩ರಕ್ಕೆ ೩ ನಾಮಿನೇಷನ್ ಮಾಡುವುದಿಲ್ಲ ಕೆಲವರಿಗೆ ಮಾತ್ರ ಅದು ಇರುತ್ತದೆ, ಅವಶ್ಯಕ ಇದ್ದರೆ ಮಾತ್ರ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದರು, ಅಲ್ಪಸಂಖ್ಯಾತರ ಬಗ್ಗೆ, ಎಸ್.ಸಿ. ಎಸ್.ಟಿ.ಯವರ ರೆಪ್ರಸೆಂಟೇಷನ್ ಇಲ್ಲದಿದ್ದರೆ ಜಾಲಪ್ಪನವರ ಕಿವಿಯಲ್ಲಿ ಹೇಳಬಹುದಿತ್ತು. ಆದರೆ ಇವತ್ತು ಮಾಡಿರುವುದಾದರೂ ಏನು? ಗ್ರಾಮೀಣ ಸ್ವರಾಜ್ಯದಲ್ಲಿ ನಂಬಿಕೆ ಇರುವ ನಜೀರ್ ಸಾಬ್‌ರವರ ಕೈನಿಂದ ತಂದ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳಿಗೆ ನಾಮಿನೇಷನ್ ಮಾಡುವುದಕ್ಕೆ ಹೊರಟಿದ್ದೀರಿ.

೪-೦೦ ಪಿ.ಎಂ.

ನಮ್ಮ ಪಕ್ಷದವರನ್ನೆ ನೇಮಿಸುತ್ತೇವೆಂದು ಮಾನ್ಯ ಜೆ. ಎಚ್. ಪಟೇಲರು ಹೇಳುತ್ತಿರುತ್ತಾರೆ. ನಮಗೆ ಯಾರು ಬೆಂಬಲ ಕೊಡುತ್ತಾರೆ ಅವರ ಸಲುವಾಗಿ ಮಾಡುತ್ತೇವೆಂದು ಅವರು ಹೇಳುತ್ತಾರೆ. ಹಾಗೆ ಹೇಳಿದರೆ ಯಾರದೂ ಉಪದ್ರವ ಇರುತ್ತಿರಲಿಲ್ಲ. ಚುನಾವಣೆಯನ್ನು ಏತಕ್ಕೆ ಮಾಡುವುದು ? ಮಾನ್ಯ ಪಟೇಲರು ಹೇಳುವಹಾಗೆ ಸ್ಪಷ್ಟವಾಗಿ ನಾವು ನಾಮಿನೇಷನ್ ಮಾಡುತ್ತೇವೆಂದು ಆಕ್ಟ್ ಮಾಡಿಬಿಟ್ಟರೆ, ಯಾರದು ಅಡ್ಡಿ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೊಸದಾಗಿ ಹೇಳಿಸುತ್ತಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಅದನ್ನು ಪಟೇಲರ ಬಾಯಲ್ಲಿ ರಾಮಕೃಷ್ಣ ಹೆಗಡೆಯವರು ಹೇಳಿಸಿದ್ದಾರೆನ್ನುವ ಆ ಮಾತನ್ನು ನಾನು ಒಪ್ಪುವುದಿಲ್ಲ. ಜೆ. ಎಚ್. ಪಟೇಲರದೇ ಒಂದು ತತ್ವ ರಾಮಕೃಷ್ಣ ಹೆಗಡೆಯವರದೇ ಒಂದು ತತ್ವ ಇದೆ. ಪಟೇಲರಿಗೂ ಹೆಗಡೆಯವರಿಗೆ ವ್ಯತ್ಯಾಸವಿದೆ. ಮಾನ್ಯ ಪಟೇಲರ ಕೀರ್ತಿ ಸುವಾಸನೆ ಕರ್ನಾಟಕಕ್ಕೆ ಹತ್ತಬೇಕು. ರಾಮಕೃಷ್ಣ ಹೆಗಡೆಯವರ ಕೀರ್ತಿ ಮತ್ತು ಸುವಾಸನೆ ಸಾಧ್ಯವಾದರೆ ಜಗತ್ತಿಗೆ ಮುಟ್ಟಬೇಕೆಂದು ಹೇಳುತ್ತೇನೆ. ನಾನು ಅವತ್ತು ವಿನಂತಿ

ಮಾಡಿಕೊಂಡಿದ್ದೇನೆ, ಇವತ್ತೂ ವಿನಂತಿ ಮಾಡಿಕೊಳ್ಳುತ್ತೇನೆ, ನಿಮಗೆ ಇಷ್ಟಬಂದರೆ ನಮಗೆ ಗುಂಡು ಹಾಕಿ ಹೊಡೆದರೂ ನಮಗೆ ದುಃಖವಾಗುವುದಿಲ್ಲ, ಆದರೆ ನೀವು ಸಹಕಾರ ಸಂಘಗಳ ಮುಖಾಂತರ ಸೆರೆ ಮಾರುತ್ತೇವೆಂದು ಹೇಳಿದ್ದೀರಿ, ನೀವು ಮಾರಿ ಬಿಡಿ ಅದು ಒತ್ತಟ್ಟಿಗೆ ಬಿಡಿ, ಆದರೆ ನಿಮ್ಮ ಭಾಷಣದೊಳಗೆ ಅದು ಬಂದದ್ದು, ಮಾನ್ಯ ಹೆಗಡೆಯವರ ಭಾಷಣದೊಳಗೆ ಬಂದಿರುವುದಕ್ಕೆ ನನಗೆ ಬಹಳ ವಿಷಾದ ಅನ್ನಿಸಿದೆ. ಆ ರೀತಿ ಮಾಡುವುದು ಸರಿಯಲ್ಲ. ಜನಗಳಿಗೆ ಕುಡಿಯುವುದನ್ನು ಬಂದ್ ಮಾಡಿಯೆಂದು ಹೇಳುವುದಕ್ಕೆ ಆಗುವುದಿಲ್ಲ, ಕುಡಿಯಬೇಡಿರಿ ಕುಡಿಯುವುದನ್ನು ಬಂದ್ ಮಾಡಿರಿ ಅಂದರೆ ಹುಚ್ಚನೆಂದು ಹೇಳುತ್ತಾರೆ. ಕುಡಿಯುವವರು ಮಿತಿಯಾಗಿ ಕುಡಿಯಿರಿ ಎಂದು ಹೇಳಿ. ಪೋಲೀಸರು ಕುಡಿಯಲಿಕ್ಕೆ ಹತ್ತಿ ಜನರಿಗೆ ಗುಂಡು ಹಾಕಲಿಕ್ಕೆ ಹತ್ತಿದ್ದಾರೆ. ನಮ್ಮ ಕೈಯಲ್ಲಿ ಏನೂ ಇಲ್ಲ. ಜನರು ಸಾಯುತ್ತಾರೆ, ಸಾಯುವುದನ್ನು ತಪ್ಪಿಸುವುದಕ್ಕೆ ನೀವು ನಿಜವಾಗಿಯೂ ಪ್ರಯತ್ನ ಮಾಡುವುದಾದರೆ ಸಾಧ್ಯವಾದಮಟ್ಟಿಗೆ ಕುಡುಕತನವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ಸಹಕಾರ ಸಂಘದೊಳಗೆ ಮದ್ಯವನ್ನು ಮಾರಾಟ ಮಾಡುತ್ತೇವೆಂದರೆ ನಿಜವಾಗಿಯೂ ನಿಮ್ಮ ವ್ಯಕ್ತಿತ್ವಕ್ಕೆ ನೀವು ಒಂದಂತಹ ಮನತನಕ್ಕೆ ಭೂಷಣಾ ಪ್ರಾಯವಲ್ಲವೆಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಬಡವರಿಗೆ ನಿಜವಾದ ಸೆರೆ ಸಿಗಲಿ, ಕಲಬೆರಕೆ ಕುಡಿಯದಿರಲಿ ಎಂದು ಆ ರೀತಿ ಮಾಡಲಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಮನುಷ್ಯ 'ತನ್ನನ್ನು ತನ್ನಂತೆ ಪರರಿಗೆ ಬಗೆದೊಡೆ ಬಿನ್ನಾಣವಕ್ಕು ಕೈಲಾಸ' ಅಂದಹಾಗೆ ಯಾವ್ಯಾವ ದೃಷ್ಟಿಯಿಂದ ಹೇಳಬೇಕೋ ಆದೃಷ್ಟಿಯಿಂದ ಮಾತನಾಡುತ್ತಾರೆ. ನನಗಂತೂ ಕುಡಿಯುವುದು ಬೇಡ. ನನ್ನ ಸ್ನೇಹಿತರೆಲ್ಲರೂ ಕುಡುಕತನದಿಂದ ಏನಾಗುತ್ತದೆನ್ನುವುದನ್ನು ತಿಳಿಸಿದ್ದಾರೆ. ಯಾವುದಕ್ಕೂ ಮಿತಿಯಿರಬೇಕು. ಚುಟ್ಟ ಸೇದುವವನು ತನ್ನ ಮಗನ ಎದುರಿಗೆ ಸೇದಬಾರದು, ಏಕೆಂದರೆ ಮಗನು ಸಹ ಸೇದಲಿಕ್ಕೆ ಶುರು ಮಾಡುತ್ತಾನೆ. ಚುಟ್ಟ ಸೇದುವವನು ಕದ್ದು ಸೇದಬೇಕು ಆ ದೃಷ್ಟಿಯಿಂದ ಹೇಳಿದ್ದೇನೆ. ಗೋರ್ಕಲ್ಲಮೇಲೆ ಮಳೆಗರೆದರೆ ಕಲ್ಲು ನೀರು ಕುಡಿಯುವುದೇ' ನಿಮಗೆ ಯಾವುದು ಸಿಹಿ ಅನಿಸುತ್ತದೆಯೋ ಅದನ್ನು ತೆಗೆದುಕೊಳ್ಳಿ, ಯಾವುದು ಸಿಹಿ ಅನಿಸುವುದಿಲ್ಲ ಅದನ್ನು ಬಿಟ್ಟು ಬಿಡಿ ಆ ಸ್ವಾತಂತ್ರ್ಯ ನಿಮಗೆ ಇದೆ. ಜನತಾ ಅಧಿಕಾರಕ್ಕೆ ಬಂತು ನೀವು ಅಧಿಕಾರಕ್ಕೆ ಬರುವಾಗ ಅನೇಕ ವಚನಗಳನ್ನು ಜನರಿಗೆ ಕೊಟ್ಟಿದ್ದಾರೆ. ಅನೇಕ ಮಾತುಗಳನ್ನು ಆಡಿದ್ದಾರೆ, ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಿದ್ದಾರೆ. ಇವರು ಅಧಿಕಾರಕ್ಕೆ ಬಂದದ್ದು ತಪ್ಪೆಂದು ನಾನು ಹೇಳುತ್ತಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಒಂದು ಪಕ್ಷ ಚುನಾವಣೆಯಲ್ಲಿ ಸೋಲುತ್ತದೆ, ಒಂದು ಪಕ್ಷ ಗೆಲ್ಲುತ್ತದೆ. ನಾನು ಅಧ್ಯಕ್ಷನಾಗಿದ್ದಾಗಲೇ ಇವರು ಗೆದ್ದು ಬಂದಿದ್ದಾರೆ. ಅದಕ್ಕಾಗಿ ನಾನು ಅಭಿನಂದನೆಗಳನ್ನು ಆಗಲೂ ಸಲ್ಲಿಸಿದ್ದೇನೆ.ಈಗಲೂ ಸಲ್ಲಿಸುತ್ತಿದ್ದೇನೆ. ಬಹುಸಂಖ್ಯಾ ಅಭಿಲಾಷೆಯಿಂದ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಅಧಿಕಾರಕ್ಕೆ ಬಂದಿದ್ದೀರಿ. ನಿಮ್ಮನ್ನು ನಾನು ದ್ವೇಷದಿಂದ ಬೈಯ್ಯಲಿಕ್ಕೆ ಆಗುವುದಿಲ್ಲ. ನೀವು ಒಂದು ಮಾತು ಅರಿಯಬೇಕು. ನಾವು ಹಿಂದೂಸ್ಥಾನದ ಸಂವಿಧಾನವನ್ನು ಒಪ್ಪಿದ ಮೇಲೆ ಆಳುವ ಪಕ್ಷಕ್ಕೆ ಇರುವಷ್ಟೆ ಅಧಿಕಾರ. ಎದುರು ಪಕ್ಷಕ್ಕೂ ಇದೆ. ಕೇಳುವ ಪಕ್ಷಕ್ಕೂ ಇದೆ. 'ಕೇಳುವವರು ಇಲ್ಲದೆ ಆಳುವವರು ಹಾಳಾಗಿ ಹೋದರು' ಎನ್ನುವ ಗಾದೆಯ ಮಾತನ್ನು ಸ್ಪಷ್ಟವಾಗಿ ಅರಿಯಬೇಕು. ಆ ದೃಷ್ಟಿಯಿಂದ ಕೆಲವು ಮಾತುಗಳನ್ನು ತಮ್ಮ ಗಮನಕ್ಕೆ ತಂದರೆ ತಾವು ನಿಜವಾಗಿಯೂ ಯಾವುದೇ ತರಹ ದ್ವೇಷ ಅಸೂಯೆಯಿಂದ ಹೇಳಿದ್ದಾರೆಂದು ತಿಳಿಯಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊಟ್ಟಮೊದಲನೆಯದಾಗಿ ಜನತಾ ಪಕ್ಷಕ್ಕೆ ಹೆಚ್ಚು ಬೆಂಬಲ ಕೊಟ್ಟವರು ಯಾರೆಂದರೆ ರೈತಾಪಿ ಜನ. ರೈತರು ಓಹೋ ಅಂದರು, ಏತಕ್ಕೆ ಅಂದರು? ಕಾಂಗ್ರೆಸ್ ಸರ್ಕಾರ ರೈತರ ಬಗ್ಗೆ ಸರಿಯಾದ ರೀತಿಯಲ್ಲಿ ವರ್ತನೆ ಮಾಡಲಿಲ್ಲವೆನ್ನುವ ಭಾವನೆ ಅಂದು ಮೂಡಿತ್ತು. ತಪ್ಪು ಇರಬಹುದು, ಒಪ್ಪು ಇರಬಹುದು ಇಲ್ಲವೆಂದು ನಾನು ಅದನ್ನು ಡಿಫೈಂಡ್ ಮಾಡಲಿಕ್ಕೆ ತಯಾರಾಗಿಲ್ಲ. ಆ ಭಾವನೆಯಿಂದ ರೈತರೆಲ್ಲಾ ಜನತಾಪಕ್ಷಕ್ಕೆ ಬೆಂಬಲವಾಗಿ ನಿಂತರು. ಜನರಲ್ಲಿ ಪ್ರಚಂಡವಾದ ಅಭಿಪ್ರಾಯವನ್ನು ಮೂಡಿಸಿದರು. ಜನತಾಪಕ್ಷ ಅಧಿಕಾರಕ್ಕೆ ಬಂದರೆ ನಮಗೆ ಎಲ್ಲಾ ರೀತಿಯ ಸೌಲಭ್ಯ ಸೌಕರ್ಯಗಳು ಸಿಗುತ್ತವೆ, ಎನ್ನುವ ನಂಬಿಕೆ ಹುಟ್ಟಿ ರೈತರು ಅವರಿಗೆ ಬಹುಮತ ಕೊಟ್ಟರು. ಬಹಳ ಸಂತೋಷ ಶ್ರೀ ರಾಮಕೃಷ್ಣ ಹೆಗಡೆಯವರು ಒಬ್ಬರೇ ಎಲ್ಲವನ್ನೂ ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ಇದ್ದ ಹಣದಲ್ಲೇ ಬಜೆಟ್ಟಿನಲ್ಲಿ ಸದುಪಯೋಗಪಮಾಡಬೇಕಾಗುತ್ತದೆ. ನಾವು ನೂರು ರೂಪಾಯಿಗಳನ್ನು ಕೊಟ್ಟು ಹತ್ತು ಸಾವಿರ ರೂಪಾಯಿ ಕಾಮಗಾರಿಗಳನ್ನು ಮುಗಿಸಿರಿ ಎಂದು

ಹೇಳಿದರೆ ಶ್ರೀ ರಾಮಕೃಷ್ಣ ಹೆಗಡೆಯವರಿಂದ ಅದು ಸಾಧ್ಯವಿಲ್ಲ, ಆ ದೇವರಿಗೂ ಕೂಡ ಸಾಧ್ಯವಿಲ್ಲ. ಈ ರೀತಿಯ ಅವಿವೇಕತನದ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಶ್ರೀ ರಾಮಕೃಷ್ಣ ಹೆಗಡೆಯವರು ಮಾಡಬೇಕು, ಏನು ಮಾಡಬೇಕು ಎಂದರೆ ಅವರು ತಯಾರು ಮಾಡಿದಂಥ ಬಡ್ಜೆಟ್ಟಿಗೂ, ಹೇಳುವಂತಹ ಹೇಳಿಕೆಗಳು, ಹಿಂದಿನವರ್ಷವಾಗಲೀ. ಮುಂದಿನ ವರ್ಷವಾಗಲಿ., ಮೊದಲವರ್ಷವಾಗಲೀ. ಅವರು ಅಧಿಕಾರಕ್ಕೆ ಬರುವಾಗ ಕೊಟ್ಟ ಚುನಾವಣಾ ಪ್ರಣಾಳಿಕೆ ಇವೆಲ್ಲಕ್ಕೂ ಹೊಂದಾಣಿಕೆಯಾಗುವಂಥ ಬಡ್ಜೆಟ್ಟನ್ನು ತಯಾರು ಮಾಡಿದ್ದೇನೆಯೇ ಎಂದು ಅವರು ಅರ್ಥ ಮಾಡಿಕೊಳ್ಳಬೇಕು. ಈ ಬಡ್ಜೆಟ್ಟಿಗೂ ಅವರ ಹೇಳಿಕೆಗೂ ತದ್ವಿರುದ್ಧವಾಗಿದೆ. ಇವತ್ತು ರೈತಾಪಿ ಜನರಿಗೆ ಹೆಚ್ಚು ನೀರಾವರಿ ಬೇಕು ನೀರಾವರಿ ಆಗಬೇಕು ಎಂದಾಕ್ಷಣಕ್ಕೆ ನಮ್ಮ ಶ್ರೀ ದೇವೇಗೌಡರು ಎರಡುಸಾವಿರ ಕೋಟಿ ರೂಪಾಯಿಗಳುಬೇಕು ಎಂದುಹೇಳುತ್ತಾರೆ ಎಂದಾದರೂ ಈ ಸದನದಲ್ಲಿ ಎರಡುಸಾವಿರ ಕೋಟಿ ಕೊಡುವುದಕ್ಕೆ ಒಲ್ಲೆ ಎಂದು ಹೇಳಿದ್ದೇವೆಯೆ? ಏನಾಗಿದೆ ಎಂದರೆ ಬಹುಕಾಲದ ನಂತರ ಬರುವುದಕ್ಕೂ, ಈಗ ಬರುವುದಕ್ಕೂ ವಿಚಾರ ಮಾಡುವುದಕ್ಕೆ ಶ್ರೀ ರಾಮಕೃಷ್ಣ ಹೆಗಡೆಯವರು ತೊಡಗಿದ್ದಾರೆ. ರೈತಾಪಿ ಜನ ನಮಗೂ, ನಿಮಗೆ ಅನ್ನ ಕೊಡುವ ಜನ. ನಮಗೂ ನಿಮಗೂ ಸಂಬಳ ಕೊಡುವ ಜನ. ಅವರು ಮಾಲೀಕರು. ನಾವು ದುಡಿಯುವವರು ಇದ್ದೇವೆ. ಈ ಮಾಲೀಕರು ಸರಿಯಿದ್ದರೆ ಮಾತ್ರ ನಮಗೆ ತಿನ್ನಲಿಕ್ಕೆ ಅನ್ನ ಸಿಗುತ್ತದೆ. ಇಲ್ಲದಿದ್ದರೆ ಇಲ್ಲ. ಈ ದೃಷ್ಟಿಯಿಂದ ಆಲೋಚನೆ ಮಾಡಬೇಕಾಗುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ನಾವು ನಿಜವಾದ ಕಾರ್ಯಕ್ರಮಗಳನ್ನು ಯಾರ ಸಲುವಾಗಿ ಹಾಕಿಕೊಳ್ಳಬೇಕೆಂದರೆ, ರೈತರ ಸಲುವಾಗಿ ಹಾಕಬೇಕು. ಈಗ ಮಾತುಮಾತಿಗೂ ಕಮಿಟಿಗಳ ನೇಮಕ ಪ್ರಾರಂಭವಾಗಿದೆ. ಕೃಷಿ ವಿಷಯಬಂದಾಗ ಶಂಕರಿಕೊಪ್ಪ ಕಮಿಟಿ, ಕನ್ನಡ ಬೇಕು ಎಂದರೆ ಪಾಟೀಲ್ ಪುಟ್ಟಪ್ಪ ಕಮಿಟಿ, ಲೇಬರರ್ಸ್ ಎಂದರೆ ಮಹಿಷಿ ಕಮಿಟಿ ನೇಮಕ ಮಾಡಿದ್ದಾರೆ. ತಪ್ಪು ನಡೆದಿದೆ ಎಂದರೆ ಎದ್ದುನಿಂತು ಎನ್‌ಕ್ವೈರಿ ಕಮೀಶನ್ ನೇಮಕ ಮಾಡಿದ್ದೇವೆ ಎಂದು ಹೇಳಿಬಿಡುತ್ತಾರೆ. ಕಡೆಗೆ ಏನು ಉಳಿಯಿತು ಎಂದರೆ ಬರೀ ಬಡ್ಜೆಟ್ ಉಳಿಯಿತು. ಈ ಎಲ್ಲಾ ಕಮಿಷನ್‌ಗಳಿಗೂ ಹಣ ಹೋಯಿತು. ಎನ್‌ಕ್ವೈರಿ ಕಮಿಶನ್‌ಗೆ ಹಣ ಹೋಯಿತು. ಇವರು ಶಾಣೆ ಜನ ಇದ್ದಾರೆ. ನಮ್ಮನ್ನು ಏನು ಮಾಡುತ್ತಾರೆ ಎಂದರೆ ಮಂಕು ಮಾಡಿ ಬಿಡುತ್ತಾರೆ. ನಾವೇನಾದರೂ ಹೇಳಿದರೆ ಎನ್‌ಕ್ವೈರಿ ಕಮೀಶನ್ ನೇಮಿಸುತ್ತೇವೆ ಎಂದು ಹೇಳಿಬಿಡುವುದು ಅದು ಮುಗಿಯಬೇಕಾದರೆ ಆರು ವರ್ಷ ಬೇಕು, ಅಷ್ಟರಲ್ಲಿ ನಾವು ಇಲ್ಲಿ ಇರುವುದೇ ಇಲ್ಲ. ಸ್ವಾಮಿ, ನಿಜವಾಗಿಯೂ ಇವತ್ತಿನ ದಿವಸ ಯಾವುದೇ ಖಾತೆಯನ್ನು ತೆಗೆದುಕೊಳ್ಳಿ ಬೇಕಾದ ಖಾತೆಯನ್ನು ತೆಗೆದುಕೊಳ್ಳಿ. ವಿವರಕ್ಕೆ ನಾನು ಹೋಗುವುದಿಲ್ಲ. ಕೃಷಿ ಇಲಾಖೆಯನ್ನು ತೆಗೆದುಕೊಂಡರೆ, ಹೊಸ ಮಂತ್ರಿಯನ್ನು ನೇಮಿಸಿದರು. ಹಿಂದೆ ಇದ್ದಂಥ ಶ್ರೀ ಪ್ರಕಾಶ್‌ರವರು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದರು. ಈಗ ಇವರು ಯಾವ್ಯಾವುದೋ ಸ್ಕೀಮ್‌ಗಳನ್ನು ತೆಗೆದುಕೊಂಡು ಬರುತ್ತಿದ್ದಾರೆ. ಏನೆಂದು ನಾವು ಟೀಕೆ ಮಾಡುವುದು? ಅಧಿಕಾರಿಗಳು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾಡತಕ್ಕಂಥ ಕೆಲಸ ಇದಲ್ಲ. ಅಗ್ರಿಕಲ್ಚರಲ್ ಸೆಕ್ರೆಟೆರಿಯೇಟ್ ಏನು ಮಲಗಿದೆಯೇ ಕಾಟನ್ ಡೆವಲಪ್‌ಮೆಂಟ್ ಸ್ಕೀಮ್ ಆಯಿಲ್ ಡೆವಲಪ್‌ಮೆಂಟ್ ಸ್ಕೀಮಿಗೆ ಯಾವುದೇ ಹಣವನ್ನು ಮಂಜೂರು ಮಾಡಿಲ್ಲ.

ಇವತ್ತು ಆಯಿಲ್ ಡೆವಲಪ್‌ಮೆಂಟ್ ಸ್ಕೀಮ್ ಮತ್ತು ಕಾಟನ್ ಡೆವಲಪ್‌ಮೆಂಟ್ ಸ್ಕೀಮ್‌ಗಳಿಗೆ ಕೇಂದ್ರಸರ್ಕಾರದವರು ಹೇರಳವಾಗಿ ಹಣವನ್ನು ಕೊಡುತ್ತಿದ್ದಾರೆ. ಆದರೂ ಸಹ ನಿಮ್ಮ ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪ ಇಲ್ಲ. ಇದಕ್ಕೆ ಸಂಬಂಧಪಟ್ಟ ಇನ್‌ಸ್ಟಿಟ್ಯೂಷನ್‌ಗಳವರಿಗೆ ಪರ್ಮಿಷನ್ ಕೊಡುವುದರಲ್ಲೂ ಸಹಿತ ಅಧಿಕಾರಿ ವರ್ಗ ಕಣ್ಣುಮುಚ್ಚಿದ್ದಾರೆ. ನಾವು ಎಲ್ಲದಕ್ಕೂ ತಮಗೆ ಹೇಗೆ ತೋರಿದರೆ ಕೊಡೋಣ. ಎಷ್ಟು ಜನರು ನಿಮ್ಮ ಭೇಟಿ ಆಗುವುದಕ್ಕೆ ಸಾಧ್ಯವಿದೆ. ತಾವೇನೋ ಮುಂಜಾನೆ, ಮತ್ತು ಸಂಜೆ ಖುಲ್ಲಾ ಸಿಗುತ್ತೇನೆಂದು ಹೇಳಿದ್ದೀರಿ. ಆದರೆ ಸಾಮಾನ್ಯ ಜನ ಎಷ್ಟು ಜನರು ಬಂದು ನೋಡುವುದಕ್ಕೆ ಸಾಧ್ಯವಾಗುತ್ತಿದೆ. ಹಿಂದೆ ಇದ್ದವರು ಪೋಲೀಸಿನವರನ್ನು ಇಟ್ಟುಕೊಂಡು ಭೇಟಿ ಕೊಡುತ್ತಿದ್ದರು, ನೀವು ಪೋಲೀಸಿನವರು ಇಲ್ಲದೇ ಭೇಟಿಯಾಗುತ್ತೀರಿ. ಆದರೆ ಅಧಿಕಾರವರ್ಗದಲ್ಲಿ ಇರತಕ್ಕಂಥವರು ಜನರಿಗೆ ಇರತಕ್ಕಂಥ ಸಮಸ್ಯೆಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಿಜವಾಗಿಯೂ ಒಂದೇ ಕಣ್ಣಿನಿಂದ ನೋಡಬೇಡಿ, ಇವತ್ತು ತಾವು ಒಂದೇ ಕಣ್ಣಿನಿಂದ ನೋಡುತ್ತಿದ್ದೀರಿ. ಏನೋ ಜನತಾ ಪಕ್ಷಕ್ಕೆ ಬಹುಮತ ಇದೆ ಎಂದು ತಾವು ತಿಳಿಯಬಹುದು. ಆದರೆ, ಇದೇರೀತಿ ಬಹುಮತ ಇಟ್ಟುಕೊಂಡು ಹಿಂದೆ ನಿಮಗಿಂತ ಹೆಚ್ಚು ಕಾಲ

ಅಧಿಕಾರವನ್ನು ನಡೆಸಿದಂಥ ಜನ ಈ ಕಡೆ ಇರಲಿಲ್ಲವೇ ? ಇದ್ದವರು ಮಾಯವಾಗಿಲ್ಲವೇ ? ಆದ್ದರಿಂದ ದೇಶದ ಹಿತದೃಷ್ಟಿಯಿಂದ ಯಾವುದನ್ನು ವಿಚಾರ ಮಾಡಬೇಕೆನ್ನುವ ಬಗ್ಗೆ ಪೂರ್ತಿಯಾದ ಮನಸ್ಸನ್ನು ಹರಿಸಿಲ್ಲ. ನಮ್ಮಲ್ಲಿ ಉತ್ತಮವಾದ ಚೀಫ್ ಸೆಕ್ರೆಟರಿ ಇದ್ದಾರೆ, ಅವರು ಇನ್ನೊಂದು ೨೫ ದಿವಸದಲ್ಲಿ ಮನೆಗೆ ಹೋಗುತ್ತಾರೆ. ಅವರು ಇರುವ ಅವಧಿಯೊಳಗೆ, ಸೆಕ್ರೆಟರಿ ವರ್ಗದೊಳಗೆ ಯಾವ ಯಾವ ಕೆಲಸವನ್ನು ಯಾರು ಯಾರು ಮಾಡಬೇಕೆಂಬುದನ್ನು ಸೂಚನೆ ಮಾಡಬೇಕಾಗಿದೆ. ಖಾತೆಗಳನ್ನು ಮಾತ್ರ ನಿರ್ಮಾಣ ಮಾಡಿದ್ದಾಯಿತು. ಜಾಯಿಂಟ್ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ, ಸ್ಪೆಷಲ್ ಸೆಕ್ರೆಟರಿ ಎಂದು ಮಾಡಿರುತ್ತೀರಿ. ಆದರೆ ಇವತ್ತು ಕೆಲಸ ಏನಾಗುತ್ತಿದೆ. ಒಂದೇ ಒಂದು ತಾವು ಬರೆದಂಥ ಆರ್ಡರ್ ಇವತ್ತಿಗೂ ಆಗಿಲ್ಲ ಒಂದು ವರ್ಷದ ಮೇಲಾಯಿತು. ನಾನೇ ತಮಗೆ ಕೊಟ್ಟಿದ್ದೆ. ತಾವು ಉದ್ದುದ್ದ ವಿಚಾರ ಬರೆದಿದ್ದೀರಿ. ಅದರಿಂದ ಸರ್ಕಾರಕ್ಕೂ ಲಾಭವಾಗುತ್ತಿತ್ತು. ಹೈಕೋರ್ಟ್ ಆರ್ಡರ್ ಪ್ರಕಾರ ಸೊಸೈಟಿಗೆ ಹಣ ಕೊಡಬಹುದಿತ್ತು. ಆಗ ಏನೂ ಹಣದ ಅಭಾವ ಇರಲಿಲ್ಲ. ನೀವೇನೂ ಸೊಸೈಟಿಗೆ ಹಣ ಕೊಡಬೇಕಾಗಿರಲಿಲ್ಲ, ಅಲ್ಲಿಯೇ ಅಡ್ಜಸ್ಟ್ ಮಾಡಿಕೊಳ್ಳಿ ಎಂತಲೂ ಹೇಳಿದೆ. ಆದರೆ ಅಲ್ಲಿನ ಅಧಿಕಾರಿ ವರ್ಗದಿಂದ ಈ ಕೆಲಸ ನೆರವೇರಲಿಲ್ಲ. ಅವರಿಗೆ ರಾಷ್ಟ್ರದ ಹಿತ ಏಕೆ ಬೇಕು ? ರಾಜ್ಯದ ಹಿತ ಏಕೆ ಬೇಕು ? ಮಾನ್ಯ ರಾಮಕೃಷ್ಣಹೆಗಡೆಯವರು ಅಧಿಕಾರದಲ್ಲಿದ್ದರೂ ಪಗಾರ ಬರುತ್ತೆ, ಕೆ. ಹೆಚ್. ಪಾಟೀಲರು ಇದ್ದರೂ ಪಗಾರ ಬರುತ್ತೆ, ಜನರಿಗೆ ಗುಂಡು ಹಾಕಿದರೂ ಪಗಾರ ಬರುತ್ತದೆ ಎಂಬ ಭಾವನೆ ಬಂದಿದೆ. ತಮಗೆ ಗೊತ್ತಿದೆ. ತಮ್ಮನ್ನು ವಿರೋಧಿಸಿದ ಜನ, ತಮ್ಮ ಜಾಗದಲ್ಲಿದ್ದಾಗ, ಇದ್ದ ಅಧಿಕಾರಿಗಳು ಇವತ್ತು ನೀವು ಇದ್ದಾಗಲೂ ಅಧಿಕಾರದಲ್ಲಿದ್ದಾರೆ. ಆದ್ದರಿಂದ ನಾನು ಹೇಳುವುದು ಅಧಿಕಾರದ ದಕ್ಷತೆ ಬೇಕು. ಅಧಿಕಾರದಲ್ಲಿ ದಕ್ಷತೆ ಅಷ್ಟೇ ಅಲ್ಲ, ಜನರ ಹಿತರಕ್ಷಣೆ ಬಗ್ಗೆ ಆಸಕ್ತಿ ಇರಬೇಕು, ಅಂತಹ ಜನತೆಯನ್ನು ನಿಜವಾಗಿಯೂ ಹುಡುಕಬೇಕು, ಬರೀ ಬುದ್ಧಿವಂತರಿಂದಲೇ ದೇಶದ ಸುಧಾರಣೆಯಾಗುವುದಿಲ್ಲ, ಮಾನವೀಯತೆಯ ಧೋರಣೆಯುಬೇಕು. ಇಲ್ಲದೇಹೋದರೆ ಮನುಷ್ಯನ ಕಷ್ಟ ಸುಖಗಳ ಅರಿವು ಆಗುವುದಿಲ್ಲ. ಈ ದೃಷ್ಟಿಯಿಂದ ಈಗಲೂ ಸಹಿತ ವಿಚಾರಣೆ ಮಾಡಿ, ಯಾವ ರೀತಿಯಿಂದ ನಮ್ಮ ಅಧಿಕಾರ ವರ್ಗವನ್ನು ಬದಲಾವಣೆ ಮಾಡಬೇಕು ಎಂಬುದನ್ನು ನೋಡಬೇಕಾಗಿದೆ. ನಾನು ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ, ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಕರ್ನಾಟಕದ ಅಧಿಕಾರಿಗಳನ್ನು ಕೇಂದ್ರ ಸರ್ಕಾರದವರು ಒಬ್ಬೊಬ್ಬರನ್ನೇ ಆರಿಸಿ ತೆಗೆದುಕೊಳ್ಳುತ್ತಿದ್ದಾರೆ. ಅವರನ್ನು ಉಚ್ಚವಾದ ದರ್ಜೆಯಲ್ಲಿಟ್ಟಿದ್ದಾರೆ. ಚಲೋ ಅಧಿಕಾರಿಗಳು ಕೈಬಿಟ್ಟು ಹೋಗುತ್ತಿದ್ದಾರೆ. ಆದ್ದರಿಂದ ಇದರ ಕಡೆಗೆ ತಾವು ನಿಗಾ ವಹಿಸಬೇಕು.

ಇನ್ನು ಫೈನಾನ್ಷಿಯಲ್ ಬಜೆಟ್ ಪ್ರಾವಿಷನ್ ಮಾಡುವಾಗ, ಸಂಬಂಧಿಸಿದ ಖಾತೆಯವರು ನಿಗದಿಪಡಿಸಿದ ಹಣವನ್ನು ಖರ್ಚು ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನೀವು ಹೇಳಬಹುದು, ಎಲ್ಲಾ ಅವರೇ ಮಾಡುತ್ತಾರೆಂದು. ನನಗೆ ತಿಳಿದ ಮಟ್ಟಿಗೆ ನೀವು ಯಾವುದೋ ಒಂದು ಖಾತೆಗೆ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರೆ, ಆ ಹತ್ತು ಲಕ್ಷ ರೂಪಾಯಿನಲ್ಲಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಬೇಕಾದರೂ ಸಹ, ಯಾವ ರೀತಿ ಆಗುತ್ತದೆ ಎಂಬುದು ನಿಮ್ಮ ಜನರಿಗೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅದು ಬೇರೆ ಬೇರೆ ಖಾತೆಗಳಿಗೆ ಹೋಗುತ್ತದೆ. ಪ್ಲಾನಿಂಗ್ ಇಲಾಖೆಗೆ ಹೋಗುತ್ತದೆ. ಒಂದು ಖಾತೆಯ ಸೆಕ್ರೆಟರಿ ಆರ್ಡರ್ ಮಾಡಿದಮೇಲೆ, ತಿರುಗಿ ಅದು ಪ್ಲಾನಿಂಗ್ ಇಲಾಖೆಗೆ ಹೋಗಿ ಅಲ್ಲಿಯ ಒಬ್ಬ ಸೆಕ್ಷನ್ ಆಫೀಸರ್ ಹತ್ತಿರ ಹೋಗುತ್ತದೆ. ಆಮೇಲೆ ಅಲ್ಲಿಂದ ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಜಾಯಿಂಟ್ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಸೆಕ್ರೆಟರಿಯ ಹತ್ತಿರ ಹೋಗುತ್ತದೆ. ಅದೂ ಸುದೈವ ಇದ್ದರೆ ಹೋಗುತ್ತದೆ. ಕನ್‌ಸರ್ನ್ಡ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿ ಮಾಡಿದ ಫೈಲನ್ನು, ಕೆಳಗಿರತಕ್ಕಂಥ ಅಂಡರ್ ಸೆಕ್ರೆಟರಿ ಅಥವಾ ಸೆಕ್ಷನ್ ಆಫೀಸರ್ ರಿಜೆಕ್ಟ್ ಎಂದು ಬರೆದರೆ ಮುಗಿಯಿತು. ಅದು ನಮಗೆ ತಿಳಿಯುವಹಾಗೆಯೇ ಇಲ್ಲ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಮುಗಿದಿದೆ ಎಂದು ಒಳಗಿಡುತ್ತಾರೆ. ಅದರ ಪರಿಣಾಮ ಏನು ? ಏತಕ್ಕಾಗಿ ಕೆಲಸ ಮಾಡಬೇಕು. ಏನು ನಮ್ಮ ಮನೆಯ ಸಲುವಾಗಿ ನಾವು ಕೇಳುವುದಕ್ಕೆ ಬರುತ್ತೇವೆಯೇ? ಯಾವುದಾದರೂ ಒಂದು ಯೋಜನೆಯನ್ನು ಕಾರ್ಯಗತಗೊಳಿಸಬೇಕು. ಆ ಯೋಜನೆಯ ಸಂಪೂರ್ಣ ಲಾಭ ಜನತೆಗೆ ಮುಟ್ಟಬೇಕೆನ್ನತಕ್ಕಂಥ ವಿಚಾರ ನಮಗೆ ಇಲ್ಲದೇ ಹೋದರೆ ಹೇಗೆ ತಾನೆ ಸಾಧ್ಯ ?

ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣದ ವಿಷಯದ ಬಗ್ಗೆ ಬಹಳ ಆಸ್ತೆ ವಹಿಸಿದ್ದಾರೆ. ನನಗೂ ಗೊತ್ತಿದೆ ಅವರಲ್ಲಿ ನಿಜವಾಗಿಯೂ ಶಿಕ್ಷಣದ ಬಗ್ಗೆ ಪ್ರೇಮ ಇದೆ ಎಂದು,

ನಮ್ಮ ರಾಜೀವ್‌ಗಾಂಧಿಯವರಿಗೆ ಶಿಕ್ಷಣದ ಬಗ್ಗೆ ಎಷ್ಟು ಪ್ರೇಮ ಇದೆ, ಶಿಕ್ಷಣದ ವಿಸ್ತರಣೆ ಬಗ್ಗೆ ಎಷ್ಟು ಪ್ರೇಮ ಇದೆ ಅಷ್ಟೇ ಪ್ರೇಮ ಇವರಿಗೂ ಇದೆ ಅಥವಾ ಅದಕ್ಕಿಂತ ಹೆಚ್ಚಿನ ಪ್ರೇಮ ಹೆಗಡೆಯವರಿಗೆ ಇದೆ. ಆದರೆ ಅವರಿಗೆ ಸಮಯ ಇಲ್ಲ. ಎಲ್ಲಿ ಕೇಳಿದರೆ ಅಲ್ಲಿಗೆಲ್ಲಾ ಒಂದೊಂದು ಮೆಡಿಕಲ್ ಕಾಲೇಜು ಕೊಡುತ್ತಿದ್ದಾರೆ. ಹಿಂದೆ ಮಾಡಿದರು, ಹಿಂದೆ ಏನು ಮಾಡಿದರು ಇವರು ಎಂದರೆ, ಮೆಡಿಕಲ್ ಕಾಲೇಜುಗಳನ್ನು ಕೊಡುವವರನ್ನು ಉಗ್ರವಾಗಿ ಟೀಕೆ ಮಾಡಿದರು. ನಿಮ್ಮ ಟೀಕೆಗಳನ್ನು ಜನ ನಂಬಿದರು, ನಮ್ಮನ್ನು ಮನೆಗೆ ಕಳುಹಿಸಿದರು. ನಾವು ಇಲ್ಲಿ ಕುಳಿತೆವು, ನೀವು ಅಲ್ಲಿ ಕುಳಿತಿದ್ದೀರಿ. ಆದರೆ ನಮಗಿಂತ ಹೆಚ್ಚು ಕಾಲೇಜುಗಳನ್ನು ಕೊಟ್ಟಿದ್ದೀರಿ, ಕೊಡಿ. ಕೊಟ್ಟರೆ ಬೇಡ ಎನ್ನುವುದಿಲ್ಲ, ಆದರೆ ಎಲ್ಲೆಲ್ಲಿ ಯೋಗ್ಯ ಇದೆ ಅಲ್ಲಿಗೆ ಕೊಡಿರಿ, ಡಾಕ್ಟರ್ ಹರ್ಡಿಕರ್‌ರವರಂಥ ವಿದ್ವನ್ಮಣಿಗಳು ಮಾಡಿರುವಂತಹ ಸಂಸ್ಥೆ ಇದೆ. ಕರ್ನಾಟಕ ಆರೋಗ್ಯ ಧಾಮ ಎಂದು, ಅದಕ್ಕೆ ಕೊಡುತ್ತೇವೆ ಎಂದರೆ ಬೇಡ ಎಂದು ಹೇಳುತ್ತಾರೆಯೇ ? ಅಲ್ಲಿ ವೈದ್ಯರಾಗಿರತಕ್ಕಂಥವರು ತ್ಯಾಗಿಗಳು ಇದ್ದಾರೆ. ಅವರಿಗೆ ಕೇಳುವುದಕ್ಕೆ ಆಗುವುದಿಲ್ಲ, ಕೊಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ದೇವೇಗೌಡರಂಥ ಪ್ರಭಾವ ಶಾಲಿಗಳ ವಶೀಲಿ ಸಿಗುವುದಿಲ್ಲ, ಅವರು ಅಲ್ಲೇ ಕುಳಿತಿದ್ದಾರೆ. ನೀವು ಇಲ್ಲಿಂದ ಲೆಕ್ಕ ಮಾಡುತ್ತೀರಿ. ಧಾರವಾಡ ಜಿಲ್ಲೆ ಯಾವ ಜಾತಿಗೆ ಸಂಬಂಧಿಸಿದೆ, ಲಿಂಗಾಯಿತರಿಗೆ ಎಂದರೆ ಕೊಡಿರಿ ಎಂದು ಹೇಳುತ್ತೀರಿ, ಪ್ರಕಾಶ್‌ರವರೇ ಯಾರಿಗೆ ಕೊಡಬೇಕು ಹೇಳಿ ಎಂದು ಹೇಳುತ್ತೀರಿ. ಹಾಸನ ಜಿಲ್ಲೆ ಎಂದ ಕೂಡಲೇ ಒಕ್ಕಲಿಗರಿಗೆ, ಯಾರಿಗೆ ಕೊಡಬೇಕು ಹೇಳಿ, ಮಂಗಳೂರು-ಕ್ರಿಶ್ಚಿಯನ್ನರಿಗೆ ಯಾರಿಗೆ ಕೊಡಬೇಕು ಹೇಳಿ ಎನ್ನುವಂಥ ಸಂದರ್ಭದೊಳಗೆ ಹೇಗೆ ಮಾಡುತ್ತಿದ್ದೀರಿ. ಉಳಿದವರಿಗೆ ಶಿಕ್ಷಣ ಬಂದ್ ಆಗುತ್ತದೆ. ಉಳಿದವರಿಗೆ ಶಿಕ್ಷಣ ಕೊಡುವುದಕ್ಕೆ ಸಾಧ್ಯವೇ ? ನನಗೆ ಯಾರೂ ಕಲಿಯುವಂತಹ ಮಕ್ಕಳು ಇಲ್ಲ, ಆದರೆ ಮಕ್ಕಳಿರುವಂಥ ಜನ ಬಡವರು ಇವತ್ತಿನ ದಿವಸ ಶಿಕ್ಷಣ ಪಡೆಯುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಹೆಗಡೆಯವರು ವಿಚಾರ ಮಾಡಬೇಕು. ಪಾಲಿಟೆಕ್ನಿಕ್ ಎಷ್ಟು ಕೇಳಿ ಅಷ್ಟು ಕೊಡುತ್ತೇವೆ ಎಂದು ಹೇಳುತ್ತೀರಿ. ನೀವು ತಿಳಿದುಕೊಂಡಿದ್ದೀರಿ, ಮೂರ್ಖ ಶಿರೋಮಣಿ ರಾಜಕಾರಣಿಗಳು ನನ್ನ ಹತ್ತಿರ ಬರುತ್ತಾರೆ, ಇವರಿಗೆ ಎರಡೆರಡು ಎಷ್ಟು ಎಂದರೆ ಗೊತ್ತಿಲ್ಲ, ಎಂಜಿನಿಯರಿಂಗ್ ಕಾಲೇಜು ಪಾಲಿಟೆಕ್ನಿಕ್ ಕೇಳುತ್ತಾರೆ, ಕೊಡೋಣ, ಎಷ್ಟು ಬೇಕು ಅಷ್ಟು ಕೊಡಿರಿ ಎಂದು ನಿಮ್ಮ ಎಜುಕೇಷನ್ ಮಿನಿಸ್ಟರ್‌ಗೆ ಹೇಳಿದ್ದೀರಿ. ಒಂದು ಪಾಲಿಟೆಕ್ನಿಕ್ ಹಾಕಬೇಕಾದರೆ ಯಾವ ಯಾವ ಸಾಮಗ್ರಿಗಳು ಇರಬೇಕು, ಯಾವ ಯಾವ ಸಾಧನಗಳು ಇರಬೇಕು, ಎಂದು ಹೊಸದಾಗಿ ಒಂದು ಸರ್ಕ್ಯುಲರ್ ಮಾಡಿದ್ದೀರಿ. ಇದರ ಪ್ರಕಾರ ಸೌಲಭ್ಯಗಳು ಇರಬೇಕೆಂದು ಮಾಡಿರುತ್ತೀರಿ. ಅದನ್ನು ನೋಡಿದರೆ ಇವತ್ತು ನಮ್ಮ ರಾಜ್ಯದಲ್ಲಿ ಯಾವ ಒಂದು ಶಿಕ್ಷಣ ಸಂಸ್ಥೆಯೂ ಈ ರೀತಿಯಾಗಿ ಇಲ್ಲ, ಇರುವುದಕ್ಕೆ ಸಾಧ್ಯ ಇಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳು ಇರಲಿ, ಗೌರ್ನಮೆಂಟ್ ಶಿಕ್ಷಣ ಸಂಸ್ಥೆಗೂ ಸಹಿತ ಈ ರೀತಿ ಇರಲು ಸಾಧ್ಯ ಇಲ್ಲ. ಗೌರ್ನಮೆಂಟ್‌ನವರು ೨೦-೩೦-೪೦ ವರ್ಷಗಳಿಂದ ಇಂಥ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದೀರಿ. ಜೆ. ಜೆ. ಪಾಲಿಟೆಕ್ನಿಕ್‌ನಿಂದ ಹಿಡಿದು ಅವುಗಳನ್ನು ಮೆಷರ್‌ಮೆಂಟ್‌ಗೆ ತೆಗೆದುಕೊಂಡರೆ ಅವೆಲ್ಲಾ ಇವತ್ತು ಅಯೋಗ್ಯ ಶಿಕ್ಷಣಸಂಸ್ಥೆಗಳಾಗುತ್ತವೆ. ಅದನ್ನು ತಮ್ಮ ನಜರಿಗೆ ತಂದಿದ್ದಾರೆ. ಆ ಪತ್ರಕ್ಕೆ ಇನ್ನೂ ಉತ್ತರ ಬಂದಿಲ್ಲ. ಅದು ನಿಮ್ಮ ನಜರಿಗೆ ಬಂದಿರಬಹುದು, ಈಗ ಅದನ್ನು ರಿವೈಸ್ ಮಾಡುತ್ತಾರೆ. ಅದರ ಬಗ್ಗೆ ಕಡ್ಡಾಯವಾಗಿ ಒತ್ತಾಯ ಮಾಡುವುದಿಲ್ಲ, ಬೇಕಾದವರು ಹೇಗೂ ಮಾಡಬಹುದು, ಬೇಡವಾದವರು ಹೇಗೂ ಮಾಡಬಹುದು ಎಂದು ಹೇಳಿದ್ದೀರಿ. ಎಲ್ಲದಕ್ಕೂ ಒಂದು ನಿರ್ದಿಷ್ಟ ಧೋರಣೆ ಇರಬೇಕು. ಇನ್ನೊಂದು ಮಾತು ಬರುತ್ತದೆ. ಶಿಕ್ಷಣ ಸಂಸ್ಥೆಗಳನ್ನು ಕೊಡುವಾಗ ಖಾಸಗಿ ಜನರಿಗೆ ಕೊಡುವುದು ಹೇಗೆ ಸಾಧ್ಯ. ಖಾಸಗಿಯವರು ಬೇರೆ, ಖಾಸಗೀ ಸಂಸ್ಥೆಗಳು ಬೇರೆ. ಟ್ರಸ್ಟ್ ಮಾಡಲಿ, ಸೊಸೈಟಿ ಮಾಡಲಿ, ಬೇರೆ ಯಾವ ರೀತಿಯಿಂದ ಮಾಡಲಿ ಅದು ಬೇರೆ. ಈಗ ಒಕ್ಕಲಿಗರ ಸಂಘ ಇದೆ, ಅದು ಖಾಸಗಿ ಎಂದು ಹೇಳುವುದಕ್ಕೆ ಆಗುತ್ತದೆಯೇ, ಬಿಜಾಪುರದಲ್ಲಿ ಕೆ. ಎಲ್. ಇ ಸೊಸೈಟಿ ಇದೆ. ಅದು ಖಾಸಗಿ ಎಂದು ಹೇಳುವುದಕ್ಕೆ ಆಗುತ್ತದೆಯೇ, ದೇವರಾಜ್‌ಅರಸ್ ಸಂಸ್ಥೆ ಎಂದು ಮಾಡಿದ್ದಾರೆ, ಟ್ರಸ್ಟ್ ಮಾಡಿದ್ದಾರೆ. ಅದು ಖಾಸಗಿ ಎಂದು ಹೇಳುವುದಕ್ಕೆ ಆಗುತ್ತದೆಯೇ ? ಅಲ್ಲಿ ಯಾರಾದರೂ ಸತ್ತರೆ ಅದು ಪಬ್ಲಿಕ್‌ಗೆ ಹೋಗುತ್ತದೆ. ಕೆಲವು ಖಾಸಗಿ ವ್ಯಕ್ತಿಗಳು ಮಾಡಿದ್ದಾರೆ, ಕೆ. ಹೆಚ್. ಪಾಟೀಲ್‌ಗೆ ಸ್ಕೂಲ್‌ಗಳನ್ನು ಎಂಜಿನಿಯರಿಂಗ್ ಕಾಲೇಜನ್ನು ಕೊಟ್ಟರೆ, ನಿಜವಾಗಿಯೂ ತನ್ನ ಸ್ವಂತ ಉಪಯೋಗಕ್ಕಾಗಿ ಮಾಡುತ್ತಾರೆಯೇ

ಇವತ್ತು ಆ ಸಂಸ್ಥೆಗಳೆಲ್ಲಾ ಪಬ್ಲಿಕ್ ಸಂಸ್ಥೆಗಳಾಗುತ್ತವೆ. ಒಬ್ಬ ವ್ಯಕ್ತಿಯ ಸಂಸ್ಥೆಗಳಾಗುವುದಿಲ್ಲ. ಕೆ. ಹೆಚ್. ಪಾಟೀಲ್‌ರವರಿಗೆ ಒಂದು ಹೈಸ್ಕೂಲ್ ಅಥವಾ ಒಂದು ಇಂಜಿನೀಯರಿಂಗ್ ಕಾಲೇಜು ಕೊಟ್ಟರೆ ಅದನ್ನು ಒಳ್ಳೆಯತನದಿಂದ ಉಪಯೋಗ ಮಾಡಿಕೊಳ್ಳಬೇಕು, ಆದರೆ ತಾವು ಇವತ್ತು ಎಂತಹವರಿಗೆ ಇಂಜಿನೀಯರಿಂಗ್ ಕಾಲೇಜುಗಳನ್ನು ಕೊಟ್ಟಿದ್ದೀರಿ ಎಂದರೆ ಶಿಕ್ಷೆಗೆ ಯೋಗ್ಯನಾಗಿರತಕ್ಕಂಥ ವ್ಯಕ್ತಿಗೆ, ಕೋಟ್ಯಾಂತರ ರೂಪಾಯಿಗಳ ತೆರಿಗೆಯನ್ನು ಉಳಿಸಿಕೊಂಡಿರತಕ್ಕಂಥ ವ್ಯಕ್ತಿಗೆ ಅನ್ಯಾಯವಾಗಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಜನರ ಕಣ್ಣಿಗೆ ದಿಢೀರನೇ ಕಾಣಿಸಿಕೊಳ್ಳುವಂತಹ ವ್ಯಕ್ತಿಗಳಿಗೆ ರಾಜಕಾರಣಿಗಳಿಗೆ ಇವತ್ತು ನೀವು ಇಂತಹ ವಿದ್ಯಾ ಸಂಸ್ಥೆಗಳನ್ನು ಕೊಟ್ಟಿದ್ದೀರಿ. ನೀವು ಹೇಳಬಹುದು ನಿಮ್ಮ ಕಾಲದಲ್ಲಿ ಕೊಡಲಿಲ್ಲವೇ, ನೀವು ಮಾಡಲಿಲ್ಲವೇ, ಎಂದು ಆದರೆ ನಾವು ಮಾಡದ್ದನ್ನು ನೀವು ಮಾಡಬೇಡಿ ಎಂದು ನಾನು ಹೇಳುತ್ತಿದ್ದೇನೆ. ನೀವು ನಮಗಿಂತ ಹೆಚ್ಚು ಚಲೋ ಆಗಿ ಕೆಲಸ ಮಾಡಿ ಎಂದು ಜನ ನಿಮ್ಮನ್ನು ಅಲ್ಲಿ ಕೂಡಿಸಿದ್ದಾರೆ. ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ತಾವು ಲಕ್ಷ್ಯ ಕೊಡಿ. ಡಾಕ್ಟರ್ ಹುಲುಕೋಟೆಯವರು ಒಂದು ಮೆಡಿಕಲ್ ಕಾಲೇಜನ್ನು ಕೊಡಿ ಎಂದು ನಮ್ಮ ಸರ್ಕಾರವಿದ್ದಾಗಲೇ ಕೇಳಿದ್ದರು. ಆದರೆ ಇದುವರೆವಿಗೂ ಅವರ ಅರ್ಜಿ ಪೆಂಡಿಂಗ್ ಇದೆ. ಅನೇಕ ಯೋಜನೆಗಳು ಕೇಂದ್ರ ಸರ್ಕಾರದಲ್ಲಿ ಪೆಂಡಿಂಗ್ ಇವೆಯೆಂದು ಹೇಳುತ್ತೀರಿ ಅದೇ ರೀತಿಯಲ್ಲಿ ರಾಮಕೃಷ್ಣ ಹೆಗಡೆಯವರ ಗೌರ್ನಮೆಂಟಿನಲ್ಲಿ ಪೆಂಡಿಂಗ್ ಇಟ್ಟಿದ್ದೀರಿ. ಅಲ್ಲವೇ ? ಹೊಸದಾಗಿ ಮೆಡಿಕಲ್ ಕಾಲೇಜುಗಳನ್ನು ಮಾನ್ಯ ಜಾಲಪ್ಪನವರಿಗೆ ಕೊಟ್ಟರಿ ಅದೇ ಕೆ. ಹೆಚ್. ಪಾಟೀಲ್ ಮೆಡಿಕಲ್ ಕಾಲೇಜು ಕೇಳಿದರೆ ಕೊಡುವುದಿಲ್ಲ. ಈ ರೀತಿಯ ತಾರತಮ್ಯ ವೇತಕ್ಕೆ ಮಾಡುತ್ತೀರಿ ? ಇವೊತ್ತು ನನಗೆ ಮೆಡಿಕಲ್ ಕಾಲೇಜು ಕೊಡುತ್ತೇವೆ ತೆಗೆದು ಕೊಳ್ಳಿ ಎಂದು ಹೇಳಿದರೂ ಸಹ ನಾನು ಮೆಡಿಕಿಲ್ ಕಾಲೇಜು ತೆಗದುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಕಾರಣ ಹಣ ಬೇಕೆಲ್ಲ ನಾನು ಉದಾಹರಣೆಯಾಗಿ ಮಾತ್ರ ಮಾನ್ಯ ಜಾಲಪ್ಪನವರ ಹೆಸರು ಹೇಳಿದೆ ಅಷ್ಟೇ. ಆದರೆ ಜಾಲಪ್ಪನವರಂತೆ ಅನೇಕ ಜನರು ಇದ್ದಾರೆ. ಇವತ್ತು ಇಂಜಿನೀಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಕಾಲೇಜುಗಳು ಸಿಕ್ಕಾಪಟ್ಟೆಯಾಗಿವೆ ನಮ್ಮಲ್ಲಿಯೂ ಸಹ ಒಂದು ಪಾಲಿಟೆಕ್ನಿಕ್ ಕಾಲೇಜು ಇದೆ. ಅಲ್ಲಿ ಸುಮಾರು ೫೦–೬೦ ಜನ ಹುಡುಗರು ಟ್ರೈನಿಂಗ್‌ಗೆ ಬರುತ್ತಾರೆ, ಈ ಟ್ರೈನಿಂಗ್ ಏತಕ್ಕೆಂದರೆ ಆ ಹುಡುಗರು ಪರೀಕ್ಷೆಗೆ ಹೋಗುವ ಮುನ್ನ ಟ್ರೈನಿಂಗ್ ಬೇಕಂತೆ. ಈ ಒಂದು ದುರಾದೃಷ್ಟಮಾದಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇವತ್ತು ವಿದ್ಯಾ ಸಂಸ್ಥೆಗಳ ಗುಣಮಟ್ಟ ಯಾವ ರೀತಿ ಆಗಿದೆ ಎನ್ನುವುದನ್ನು ಗಮನಿಸಬೇಕು. ಇನ್ನು ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಕೊಟ್ಟಿದ್ದೀರಿ. ಮಾನ್ಯ ಹೆಗಡೆಯವರೇ ನಾನು ಒಂದು ಮಾತನ್ನು ಹೇಳುತ್ತಿದ್ದೇನೆ ದಯವಿಟ್ಟು ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ಅದೇನೆಂದರೆ ಪಬ್ಲಿಕ್ ಮೆಮೋರಿ ಇಸ್ ವೇರಿ ಶಾರ್ಟ್ಟ ನಾನು ಎಲ್ಲಾ ರೀತಿಯಲ್ಲೂ ಕೆಲಸ ಮಾಡಿ ಅನುಭವನನ್ನು ಹೊಂದಿ ಈ ಮಾತನ್ನು ಹೇಳುತ್ತಿದ್ದೇನೆ. ಅನೇಕ ವಿಚಾರಗಳು ನಮ್ಮ ಅನುಭವಕ್ಕೆ ಬಂದಿವೆ. ನಾವು ಅಧಿಕಾರದಲ್ಲಿದ್ದಾಗ ನಮ್ಮನ್ನು ಹೊಗಳಿ, ನಮ್ಮ ಜೊತೆಯಲ್ಲಿ ತಿಂಡಿ ತಿಂದಂತಹ ಜನ ನಮಗೆ ವೈರಿಗಳಾಗುತ್ತಾರೆ. ಆದರೆ ನಾವು ಏನೂ ಮಾಡದಿದ್ದಂತಹ ಜನ ನಮ್ಮ ಕಷ್ಟ ಕಾಲದಲ್ಲಿ ಪರಮ ಮಿತ್ರರಾಗುತ್ತಾರೆ. ನೀವು ಕೊಟ್ಟ ಪುಸ್ತಕವನ್ನು ಯಾರೂ ಜ್ಞಾಪಿಸಿಕೊಳ್ಳುವುದಿಲ್ಲ. ಬಡವರ ನಾಲ್ಕು ರೂಪಾಯಿಗೆಳು ಕೊಟ್ಟು ಪುಸ್ತಕ ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ ವೇನು ? ಪುಸ್ತಕ ಕೊಳ್ಳುವಷ್ಟು ತ್ರಾಸ ಅವನಿಗೆ ಇರುವುದಿಲ್ಲ. ಒಂದು ವೇಳೆ ಬಡವ ಕೂಳಿಗೆ ತ್ರಾಸ ಪಡಬಹುದು. ಅಥವಾ ಮನೆ ಇಲ್ಲದೆ ತ್ರಾಸಪಡಬಹುದು ಬಡವನಿಗೆ ಸಾಲ ಸಿಗದಿದ್ದಾಗ ತ್ರಾಸಆಗಬಹುದು ಅಥವಾ ಬಡವನ ಮಗನಿಗೆ ನೌಕರಿಸಿಗದಿದ್ದಾಗ ತ್ರಾಸ್‌ವಾಗಬಹುದು, ಅಂತಹಸಂದರ್ಭಗಳಲ್ಲಿ ತಾವು ಸಹಾಯ ಮಾಡಿ ಅದನ್ನು ಬೇಡವೆಂದು ನಾನು ಹೇಳುವುದಿಲ್ಲ. ಅದು ಬಿಟ್ಟು ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಕೊಟ್ಟು ಕೋಟ್ಯಾಂತರ ರೂಪಾಯಿಗಳ ಹಣವನ್ನು ಏತಕ್ಕೆ ಖರ್ಚು ಮಾಡಿ ತಮ್ಮ ಖಜಾನೆಯನ್ನು ಬರಿದು ಮಾಡಿಕೊಳ್ಳುತ್ತೀರಿ ? ತಾವೇನೆ ಇಂತಹ ಕೆಲಸ ಕಾರ್ಯಗಳನ್ನು ಮಾಡಿದರೂ ಸಹ ಜನತೆ ಜ್ಞಾಪಿಸಿಕೊಳ್ಳುವುದಿಲ್ಲ. ಆ ರೀತಿ ಜ್ಞಾಪಿಸಿಕೊಳ್ಳುವುದಾಗಿದ್ದರೆ ಒಂದು ಓಟು ಸಹ ನಮಗೆ ಬರಬಾರದಾಗಿತ್ತು, ತಾವು ತಾಳಿ ಕೊಟ್ಟಿದ್ದೀರಿ, ಸೀರೆ ಕೊಟ್ಟಿದ್ದೀರಿ ಪುಸ್ತಕ ಕೊಟ್ಟಿದ್ದೀರಿ ಕೆಲವು ಜನರಿಗೆ ಕೂಳು ಸಹ ಕೊಟ್ಟಿದ್ದೀರಿ. ಆದರೆ ಏನಾಯಿತು ? ಮಂಗಳೂರಿನಲ್ಲಿ ಕೂಡ ಕೊಟ್ಟಿದ್ದೀರಿ. ಅಲ್ಲಿ ನಿಮಗೆ ಒಂದು ಓಟು ಸಹ ಬರಲಿಲ್ಲ. ಅದಕ್ಕೆ ನಾನು ಆಗಲೇ ಹೇಳಿದ್ದುದು ಪಬ್ಲಿಕ್ ಮೆಮೋರಿ ಇಸ್ ವೇರಿ ಶಾರ್ಟ್ ಎಂದು. ತಾವು ಕೆ. ಎಚ್.

ಪಾಟೀಲ್‌ರವರಿಗೆ ಒಂದು ಶಿಲ್ಕು ಅಂಗಿ ಕೊಟ್ಟರೆ ಆಗುವುದಿಲ್ಲ. ಅವರು ನಿಮ್ಮನ್ನು ಜ್ಞಾಪಿಸಿ ಕೊಳ್ಳುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ತಾವೇನೆ ಕೆಲಸ ಮಾಡಿದರೂ ಸಹ ವಂಶಪಾರಂಪರ್ಯವಾಗಿ ಇರುವಂತಹ ಕೆಲಸ ಮಾಡಿ. ಈ ದೇಶ ಕಲ್ಯಾಣವಾಗತಕ್ಕ ಕೆಲಸ ಮಾಡಿ ರಾಷ್ಟ್ರ ಕಲ್ಯಾಣವಾಗತಕ್ಕ ಕೆಲಸ ಮಾಡಿ. ಈ ಬಗ್ಗೆ ತಮಗೆ ಆಸಕ್ತಿ ಇದೆ. ತಾವು ಚಲೋ ಬುದ್ಧಿವಂತರಿದ್ದೀರಿ. ಇವತ್ತು ನಿಮಗೆ ಪ್ರಭಲವಾದ ವಿರೋಧಪಕ್ಷದ ಕಾಟ ಸಹ ಇಲ್ಲ. ನಿಮ್ಮ ಪಕ್ಷದವರು ನೀವು ಹೇಳಿದ್ದಕ್ಕೆಲ್ಲಾ ಕೈ ಎತ್ತುವ ಜನ ಇದ್ದಾರೆ. ನಿಮಗೆ ಯಾವುದಕ್ಕೂ ಕೊರತೆ ಇಲ್ಲ. ಇಂತಹ ಸಂದರ್ಭದಲ್ಲಿ ತಾವು ಒಂದು ಮುಂದು ನೋಡದ ಒದಗಿ ಬಂದ ಕಾಲವನ್ನು ಸದುಪಯೋಗ ಮಾಡಿಕೊಳ್ಳಿ. ಹಿಂದೆ ಕೆ. ಹನುಮಂತಯ್ಯನವರು ಇದ್ದಾಗ ಎಂತಹ ಪರಿಸ್ಥಿತಿ ಇತ್ತು. ಆ ಪರಿಸ್ಥಿತಿ ಈಗ ಇಲ್ಲ. ಆದ್ದರಿಂದ ಅಭಿವೃದ್ಧಿ ಕೆಲಸ ಕಾರ್ಯಗಳ ಕಡೆ ನಿಮ್ಮ ಲಕ್ಷ್ಯ ಕೊಡಿ. ಕರ್ನಾಟಕದ ಭವನದಲ್ಲಿ ಸರ್ಕಾರಿ ಅಧಿಕಾರಿಗಳು ಹೋಗಿ (ಊಟ ಮಾಡಿದರೆ) ಅವರು ಮೂರು ರೂಪಾಯಿಗಳನ್ನು ಕೊಡುತ್ತಾರೆ. ಅದೇ ಎಂ. ಎಲ್. ಎ. ಗಳು ಉಂಡರೆ ೧೦ ರೂಪಾಯಿಗಳನ್ನು ಕೊಡಬೇಕು, ಎಂ. ಎಲ್. ಎ. ಗಳು ಅಫಿಶಿಯಲ್ ಕೆಲಸಕ್ಕೆ ಹೋದಾಗಲೂ ಇದೇ ತರಹ ಹೆಚ್ಚು ಹಣವನ್ನು ಕೊಡಬೇಕು. ಎಂ. ಎಲ್. ಎ. ಗಳು ರೂಮ್ ಪಡೆದರೆ ೫೫ ರೂಪಾಯಿಗಳು ಕೊಡಬೇಕು, ಅದೇ ಅಧಿಕಾರಿಗಳು ರೂಮ್ ಹಿಡಿದರೆ ಅವರು ೬ ರೂಪಾಯಿಗಳನ್ನು ಮಾತ್ರ ಕೊಡಬೇಕಾಗುತ್ತದೆ. ಈ ವಿಷಯವನ್ನು ಮಾನ್ಯ ಹೆಗಡೆಯವರ ಗಮನಕ್ಕೆ ತಂದ ಮೇಲೆ, ರೂಮಿನ ಬಾಡಿಗೆಯನ್ನು ೫೫ ರೂಪಾಯಿಗಳಿಂದ ಹನ್ನೆರಡೂವರೆ ರೂಪಾಯಿಗಳವರೆಗೆ ಮಾಡಿದ್ದಾರೆ. ಆದರೂ ೫ ದಿವಸಗಳ ಮೇಲೆ ಆ ರೂಮ್‌ನಲ್ಲಿ ಇರಬಾರದೆಂದು ರಿಸ್ಟ್ರಿಕ್ಷನ್ ಹಾಕಿದ್ದಾರೆ. ಅಧಿಕಾರಸ್ಥರು ಮಾತ್ರ ಸ್ವೇಚ್ಛಾಚಾರವಾಗಿ ಇರಬಹುದು. ಕಾರುಗಳನ್ನು ಸಹ ಅಧಿಕಾರಸ್ಥರು ಅವರಿಗೆ ಬೇಕಾದ ಹಾಗೆ ಉಪಯೋಗ ಮಾಡಿಕೊಳುವುದಕ್ಕೆ ಅಡ್ಡಿ ಇಲ್ಲ ನಾವು ರಾಷ್ಟ್ರ ಮತ್ತು ರಾಜ್ಯಗಳ ಹಿತದ ಕೆಲಸಕ್ಕೆ ಹೋದರೂ ನಮಗೆ ಕಾರುಗಳು ಸಿಗುವುದು ಕಷ್ಟವಾಗುತ್ತದೆ. ಕೆಲವು ಸಾರಿ ಕಾರುಗಳು ಸಿಗುವುದೇ ಇಲ್ಲ. ಈ ವಿಷಯ ಇವರಿಗೆ ಸಣ್ಣ ಮಾತು, ಆದರೆ, ಇದು ನಮಗೆ ದೊಡ್ಡ ಮಾತು. ರಾಜಕೀಯ ಜೀವನದಲ್ಲಿ ಇರುವವರಲ್ಲಿ ಅನೇಕ ಜನರಿಗೆ ತಮ್ಮ ಖರ್ಚನ್ನು ತಾವೇ ನಿಭಾಯಿಸಿಕೊಳ್ಳತಕ್ಕಂಥ ಶಕ್ತಿಯೂ ಇರುವುದಿಲ್ಲ ಇದು ತಮಗೂ ಗೊತ್ತಿರಬೇಕು. ಒಮ್ಮೊಮ್ಮೆ ಈ ತರದ ಅನುಭವ ತಮಗೂ ಬಂದಿರಲಿಕ್ಕೆ ಇರಬಹುದೆಂದು ಭಾವನೆ ಮಾಡುತ್ತೇನೆ, ಅಧಿಕಾರಿಗಳು ಅವರಿಗೆ ಇಷ್ಟ ಬಂದ ಹಾಗೆ ಖರ್ಚು ಮಾಡುತ್ತಾರೆ. ಅಧಿಕಾರಿಗಳಿಗೆ ಸಾರ್ವಜನಿಕ ಕೆಲಸ ಮಾಡಬೇಕೆಂದರೆ. ಅವರಿಗೆ ಅನೇಕ ಕಷ್ಟಗಳು ಬರುತ್ತವೆ. ಆ ಕಷ್ಟಗಳು ಅವರಿಗೆ ಬರದ ರೀತಿಯಲ್ಲಿ ತಾವು ನಿಗಾ ವಹಿಸಿ ಮಾಡಬೇಕಾಗಿದೆ. ತಾವು ದೇಶದ ನಾಯಕರಲ್ಲಿ ಒಬ್ಬರಾಗಿದ್ದೀರೆಂದು ತಮ್ಮಲ್ಲಿ ಈ ಈ ವಿಷಯವನ್ನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಸಭಾಧ್ಯಕ್ಷರೇ, ಇವತ್ತು, ಯಾರೂ ಮಾಡದೇ ಇರತಕ್ಕಂಥ ಕೆಲಸವನ್ನು ಮಾಡಿದ್ದೇವೆಂದು ಇವರು ಹೇಳಿದ್ದಾರೆ. ವ್ಯವಸಾಯದಲ್ಲಿ ಬಹಳಷ್ಟು ಸೌಲಭ್ಯಗಳನ್ನು ನಾವು ಪಡೆಯಬಹುದು ನಮ್ಮ ರಾಜ್ಯದಲ್ಲಿರುವ ಹಣ್ಣು ಹಂಪಲಿನ ಸಂಪನ್ಮೂಲ ಬೇರೆ ಎಲ್ಲಿಯೂ ಇಲ್ಲ. ಅಂಥ ನೈಸರ್ಗಿಕ ಸಂಪತ್ತನ್ನು ನಮ್ಮ ರಾಜ್ಯ ಪಡೆದುಕೊಂಡಿದೆ. ಈ ವಿಷಯಕ್ಕಾಗಿ ಶ್ರೀಮಾನ್ ಮರೀಗೌಡರನ್ನು ಸ್ಮರಿಸಬೇಕಾಗುತ್ತದೆ. ಅವರು ತೋಟಗಾರಿಕೆ ವಿಷಯದಲ್ಲಿ ಬಹಳಷ್ಟು ಸಲಹೆಯನ್ನು ಮಾಡಿದ್ದಾರೆ. ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ಬಹಳ ವಿಫಲವಾಗಿತ್ತು. ಆದರೆ ಈಗ ಇಲ್ಲ. ಅದನ್ನೆಲ್ಲಾ ಕಡಿದು ಹಾಳು ಮಾಡಲಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಡತವನ್ನು ತರಿಸಿ ನೋಡಬೇಕು. ನಾನು ಫಾರೆಸ್ಟ್ ಮಿನಿಸ್ಟರ್ ಆಗಿದ್ದಾಗ ಎಂದರೆ ಶ್ರೀಮಾನ್ ದೇವರಾಜ ಅರಸರ ಮಂತ್ರಿ ಮಂಡಲದಲ್ಲಿ. ದೇವರಾಜ ಅರಸರ ಜಿಲ್ಲೆಯವರೇ ಆದ ಏಳೆಂಟು ಮಂದಿ ಎಂ. ಎಲ್. ಎ.ಗಳು ಬಂದು ದೇವರಾಜ ಅರಸ್‌ರವರನ್ನು ಕಂಡು ನಮ್ಮ ತಾಲ್ಲೂಕಿನಲ್ಲಿ ಒಂದು ಆನೆಯು ಕಾಡಿನಿಂದ ಬಂದು ರೈತರು ಬೆಳೆದಿರುವ ಬೆಳೆಯನ್ನು ನಾಶ ಮಾಡುತ್ತಿದೆ. ಅದನ್ನು ಗುಂಡಿಕ್ಕಿ ಕೊಲ್ಲಿಸಬೇಕೆಂದು ಮನವಿ ಮಾಡಿಕೊಂಡಿದ್ದರು. ಈ ಗುಂಪಿನ ನೇತೃತ್ವವನ್ನು ಶ್ರೀಮಾನ್ ಕದಂರವರು ವಹಿಸಿಕೊಂಡಿದ್ದರು. ಈ ವಿಷಯದ ಮೇಲೆ ಇವರು ಮಾನ್ಯ ದೇವರಾಜ ಅರಸರಲ್ಲಿ ಮನವಿ ಮಾಡಿಕೊಂಡ ಮೇಲೆ ಅವರು ನನಗೆ ಇಮ್ಮಿಡಿಯಟ್‌ಲಿ ಸ್ಪೀಕ್ ಎಂದು ಬರೆದು ಕಳುಹಿಸಿಕೊಟ್ಟರು. ಆಗ ನಾನು ಅವರ ಕೋಣೆಗೆ ಹೋದೆ, ಅಲ್ಲಿಗೆ ಈ ಏಳು ಮಂದಿ ಎಂ. ಎಲ್. ಎ.ಗಳೂ ಬಂದಿದ್ದರು. ನಾನು, ಯಾರಿಗೂ ಪಕ್ಷಪಾತ ಆಗದಂತೆ ಮಾಡಬೇಕಾದರೆ ಆನೆಯನ್ನು ಕೊಲ್ಲಬಾರದು ಎಂದು ಹೇಳಿದೆ. ಅದಕ್ಕೆ ದೇವರಾಜ ಅರಸರಿಗೆ ಆಶ್ಚರ್ಯ,

ಹೋಯಿತು. ಆಮೇಲೆ, ನಾನು ಹೇಳಿದೆ ಆನೆಗಳು ಇರುವ ಕಾಡನ್ನೆಲ್ಲಾ ಇವರು ಕಡಿದು ಹಾಳು ಮಾಡಿದ್ದಾರೆ, ಆದ್ದರಿಂದ ಆನೆಗಳು ಎಲ್ಲಿ ಇರಬೇಕು ? ಅವುಗಳಿಗೆ ಇರುವುದಕ್ಕೆ ಸ್ಥಾನ ಇಲ್ಲದೆ ತಿನ್ನುವುದಕ್ಕೆ ಆಹಾರ ಇಲ್ಲದೆ ಅವುಗಳು ಬೆಳೆಗಳನ್ನು ನಾಶ ಮಾಡುತ್ತಿವೆ. ಆನೆಗಳು ವಾಸಿಸುವ ಕಾಡನ್ನು ಯಾರು ನಾಶ ಮಾಡಿದ್ದಾರೋ ಅವರನ್ನು ಕೊಲ್ಲಬೇಕು ಎಂದು ನಾನು ಹೇಳಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ಎಂ. ಎಲ್, ಎ. ಗಳನ್ನೂ ಕೊಲ್ಲಬೇಕೆಂದು ಹೇಳಿದಿರಾ ?

ಶ್ರೀ ಕೆ, ಹೆಚ್,ಪಾಟೀಲ್.—ಎಂ. ಎಲ್. ಎ. ಗಳು ಕಾಡನ್ನು ಕಡಿದು ನಾಶ ಮಾಡಿದರೂ ಸಹ ಅವರನ್ನೂ ಶಿಕ್ಷೆಗೆ ಗುರಿಪಡಿಸಬೇಕು. ಎಂ. ಎಲ್. ಎ. ಗಳು ತಪ್ಪು ಮಾಡಿದರೆ ಅವರನ್ನು ಬಿಡಿ ಎಂದು ಹೇಳುವವನು ನಾನಲ್ಲ. ಕೆಲವರು ಎಂ. ಎಲ್. ಎ. ಗಳು ಲೆಜಿಸ್ಲೇಟಿವ್ ಹೋಮ್‌ನಲ್ಲಿ ಜೂಜು ಆಡುತ್ತಾರೆಂದು ಹೇಳಿದ್ದಾರೆ. ಅವರನ್ನೂ ಹಿಡಿಯಿರಿ. ಎಂ. ಎಲ್. ಎ.ಗಳಿಗೆ ಹೆಚ್ಚಿನ ಜವಾಬ್ದಾರಿ ಇರುತ್ತದೆ, ಅವರು ನ್ಯಾಯವನ್ನು ಕೊಡುವವರು ನೀತಿಯನ್ನು ಹೇಳುವವರು, ನೀತಿಯನ್ನು ಮಾಡುವವರು ಅಂಥವರು ಕಾನೂನು ಬಾಹಿರ ಕೆಲಸವನ್ನು ಮಾಡಿದರೂ ಅವರಿಗೂ ಶಿಕ್ಷೆಯನ್ನು ವಿಧಿಸಬೇಕು. ಯಾರೇ ಆದರೂ ಹಿಡಿಯಿರಿ, ನಮ್ಮ ಪಕ್ಷದವರು, ನಿಮ್ಮ ಪಕ್ಷದವರೆಂದು ಅಲ್ಲ, ನಾಳೆಯೇ ಹಿಡಿಯಿರಿ ನಾನು ಅದಕ್ಕೆ ಬೇಡ ಎನ್ನುವುದಿಲ್ಲ. ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ, ಯಾರೇ ಅನ್ಯಾಯ ಮಾಡಲಿ ಅವರಿಗೆ ಶಿಕ್ಷೆ ಕೊಡಬೇಕು ಎನ್ನುವವನು ನಾನು. ನಾನು ಆನೆ ಹೊಡೆಯುವ ವಿಷಯದಲ್ಲಿ ಆಗಲೇ ಹೇಳಿದ ರೀತಿಯಲ್ಲೇ ಫೈಲ್‌ನಲ್ಲಿ ಬರೆದು ಬಿಟ್ಟಿದ್ದೆ.

4–30 P. M.

The encroachment by elephants is not an encroachment but if it is an encroachment of the people, it is definitely encroachment. ಎಂದು ಬರೆದಿದ್ದೇನೆ. ಅದನ್ನು ತಾವು ದಯವಿಟ್ಟು ತರಿಸಿ ನೋಡಿ. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಗ್ಗೆ ಅನೇಕ ಸಲಹೆಗಳನ್ನು ಮಾಡಲಾಗಿದೆ. ಅರಣ್ಯ ಮಂತ್ರಿ ಶ್ರೀ ದೇಶ್‌ಮುಖ್ ಅವರೂ ಇಲ್ಲಿಯೇ ಇದ್ದಾರೆ. ಈ ಫಾರೆಸ್ಟ್ ಗಾರ್ಡ್‌ಗಳು ನಮ್ಮ ರಾಜ್ಯದಲ್ಲಿರುವಷ್ಟು ಹಾನೆಸ್ಟಾಗಿ ಬೇರೆಲ್ಲೂ ಇಲ್ಲ. ತುಲನೆ ಮಾಡಿ ನೋಡಿ ಬೇಕಾದರೆ. ಫಾರೆಸ್ಟ್ ಗಾರ್ಡ್‌ಗೂ ಪೋಲೀಸರಿಗೂ ಹಚ್ಚಿದರೆ ಫಾರೆಸ್ಟ್ ಗಾರ್ಡ್ಸ್ ಬಹಳ ರೀತಿಯಲ್ಲಿ ಪ್ರಾಮಾಣಿಕರಾಗಿದ್ದಾರೆ. ಆದರೆ ಬಡತನ ಅದಕ್ಕಾಗೇ ನಾನು ಹೇಳಿದ್ದೆ, ಫಾರೆಸ್ಟ್‌ನಲ್ಲಿ ಅವರು ಎಲ್ಲೆಲ್ಲಿ ಹೋಗುತ್ತಾರೆ ಅಲ್ಲೆಲ್ಲ ಹಣ್ಣಿನ ಗಿಡಗಳನ್ನು ಹಾಕಿಸಿ, ಜೇನಿನ ಗೂಡುಗಳನ್ನು ಇಡಿ, ಅವುಗಳನ್ನು ಅವರಿಗೆ ಬೇಕಾದಾಗ ತಿನ್ನುವುದಕ್ಕೆ ಅವಕಾಶ ಕೊಡಿ ಎಂದು. ಈಗಲಾದರೂ ತಾವು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಗಳೇ, ಪಂಚಾಯತ್‌ರಾಜ್ ಬಗ್ಗೆ ಹೆಗಡೆಯವರು ಒಂದು ಮಾತು ಹೇಳಿದ್ದಾರೆ. ''ನಾನು ಗ್ರಾಮೀಣ ಕರ್ನಾಟಕದ ಈ ನವಪ್ರಭುಗಳ ಕಣ್ಣಲ್ಲಿ ಉತ್ಸಾಹ ಹಾಗೂ ನಿರೀಕ್ಷೆಗಳು ಮಿಂಚುತ್ತಿದ್ದುದನ್ನು ಕಂಡೆ'' ಎಂದು. ಬರಗಾಲದಲ್ಲೂ ಅರ್ಧಂಬರ್ಧ ಜೀವ ಇಟ್ಟುಕೊಂಡು ಕಳೆಗುಂದಿದ ಕಣ್ಣುಗಳನ್ನು ಹೊಂದಿದ್ದ ಅವರನ್ನು ನೋಡಿಯೂ ನಿಮಗೆ ಹೀಗೆ ಅದು ಹೇಗೆ ಅನ್ನಿಸಿತೋ ಗೊತ್ತಿಲ್ಲ. ಇದೇನೂ ಹೊಸದಲ್ಲ. ರಾವ್ ಬಹದ್ದೂರ್ ಪಾಟೀಲ್, ಸಿದ್ದಪ್ಪ ಮುಂಶಾದವರು ೩೦ ವರ್ಷಗಳ ಕಾಲ ಡಿಎಲ್‌ಬಿ ಪ್ರೆಸಿಡೆಂಟರಾಗಿದ್ದರು. ಹಾಗೆಯೇ ಹಳ್ಳಿಕೇರಿಯವರು ಎಷ್ಟೊಂದು ವರ್ಷ ಅಧ್ಯಕ್ಷರಾಗಿದ್ದರು. ಇನ್ನೊಂದು ಸಂದರ್ಭದಲ್ಲಿ ಇಂಥದೇ ಪ್ರಾಮುಖ್ಯವಾದ ಸ್ಥಾನಕ್ಕೆ ಚುನಾವಣೆ ನಡೆದಾಗ ಆ ಚುನಾವಣೆ ಇಡೀ ರಾಷ್ಟ್ರದ ಗಮನಸೆಳೆದಿತ್ತು. ಆಗ ಒಬ್ಬ ಸಾಮಾನ್ಯ ಹರಿಜನ ವೋಟುದಾರನಿಗೆ ೧೦, ೧೫ ಸಾವಿರ ಬೇಕಾದರೆ ಕೊಡುತ್ತೇವೆ, ಇಂಥವರಿಗೇ ವೋಟು ಕೊಡು ಎಂದು ಆಮಿಷ ತೋರಿದಾಗಲೂ ಆತ ಅದಕ್ಕೆ ಬಲಿಯಾಗಲಿಲ್ಲ. ಗದುಗಿನ ಫಕೀರಪ್ಪ ಮುಳುಗುಂದ ಅವರ ಹೆಸರನ್ನು ಯಾರು ಕೇಳಿಲ್ಲ. ಇದೇ ರೀತಿ ಡಿಎಲ್‌ಬಿ ಮತ್ತು ಟಿಎಲ್‌ಬಿಗಳೂ ಇದ್ದೇ ಇದ್ದುವು.

ಮೊನ್ನೆ ಧಾರವಾಡದ ಜಿಲ್ಲಾ ಪರಿಷತ್ ಚುನಾವಣೆ ಸಂದರ್ಭದಲ್ಲಿ ಬೊಮ್ಮಾಯಿಯವರು ಅದರ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನದ ಚುನಾವಣೆಯಾದಾಗ ನಿಮ್ಮ ಪಕ್ಷದ ಬಾವುಟವನ್ನು ಅನಗತ್ಯವಾಗಿ ಹಾರಿಸಿ

ಕೊಂಡರು. ಆ ಸಂದರ್ಭದಲ್ಲಿ ಅಲ್ಪಸಂಖ್ಯಾತರಾಗಿದ್ದ ನಾವು ಯಾವುದೋ ವಿಷಯದ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಮೇಲೆ ಎದ್ದು ಹೊರಬಂದೆವು. ನೀವು ಇಲ್ಲಿರುವವರು. ಹಳ್ಳಿಯವರು, ಹಳ್ಳಿಯ ವಿಷಯ ನಿಮಗೆ ಗೊತ್ತಿರುವುದಿಲ್ಲ. ನಾವು ಮೀಟಿಂಗಿಂದ ಎದ್ದು ಬಂದ ಮೇಲೆ ಅವರ ಜನಗಳನ್ನು ಆಯ್ಕೆ ಮಾಡಿಸಿಕೊಂಡ ಬೊಮ್ಮಾಯಿಯವರು ಈಚೆ ಪಟಾಕಿ ಹೊಡೆಸಿದರು. ಆದರೆ ಈ ವ್ಯವಸ್ಥೆಗಳೆಲ್ಲಾ ಮೊದಲೇ ಇದ್ದುವು. ಇವತ್ತೇನು ಹೊಸದಾಗಿ ಬಂದವಗಳಲ್ಲ. ಆದರೆ ಒಂದು ಮಾತು ನಿಜ. ಇವತ್ತಿನ ಕಾಲಕ್ಕೂ ಆವತ್ತಿನ ಕಾಲಕ್ಕೂ ಏನಾಗಿದೆ ಎಂದರೆ ನೀವು ತಂದಿರುವ ಈ ವ್ಯವಸ್ಥೆಯಲ್ಲಿ ಎರಡು ದೃಷ್ಟಿಕೋನಗಳನ್ನು ನೋಡಬಹುದಾಗಿದೆ. ತಾವು ಕೊಟ್ಟಿರುವ ಈ ಬಾಣವನನ್ನು ಅವರು ಹೇಗೆ ಬಳಸಬಹುದು ಎನ್ನುವುದು ಒಂದು. ಏಕೆಂದರೆ ಅವರ ಸಂಸ್ಕೃತಿ ಎಂಥಾದ್ದು ಎಂಬುದರ ಮೇಲೆ ಅದು ಅವಲಂಬಿಸಿರುತ್ತದೆ. ಇಲ್ಲೇ ಎಷ್ಟೋ ಸಲ ಎಂಥೆಂಥ ಸಂಸ್ಕೃತಿಯನ್ನು ನಾವು ನೋಡುತ್ತಿರುತ್ತೇವೆ. ಪಾಪ ಎಲ್ಲೋ ಇರತಕ್ಕಂಥ ಮುಗ್ಧ ಜನತೆಯನ್ನು ಇವೊತ್ತಿನ ದಿವಸ ಪಂಚಾಯತಿ ಕಮಿಟಿ ಚೇರ್ಮನ್ ಮಾಡಿ ನಿನಗೂ ನನ್ನ ಹಾಗೆ ಕಾರು ಕೊಟ್ಟಿದ್ದೇನೆ ನಿನ್ನ ಕೈಯ್ಯಲ್ಲಿ ಐ.ಎ.ಎಸ್. ಅಧಿಕಾರಿಗಳಿದ್ದಾರೆ ನೀನು ಆಡಳಿತ ಮಾಡು ಎಂದು ಹೇಳಿದರೆ ಅವನಿಗೆ ಮಾಡುವುದಕ್ಕೆ ಬರುತ್ತದೆಯೇ ಅದು ನನಗೂ ಆಗುವುದಿಲ್ಲ ನಿಮಗೂ ಆಗುವುದಿಲ್ಲ ಅವರ ಕೈಯ್ಯಲ್ಲಿ ಅಧಿಕಾರವನ್ನು ಕೊಟ್ಟರೆ ಹೇಗೆ ನಡೆಸುತ್ತಾರೆಂಬ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಇದನ್ನು ಸೂಕ್ಷ್ಮ ರೀತಿಯಿಂದ ಪರಿಶೀಲನೆ ಮಾಡಬೇಕು ಒಂದು ವೇಳೆ ನೀವು ಈ ಅಧಿಕಾರವನ್ನು ಅವರಿಗೆ ಕೊಡದಿದ್ದರೆ ನೀವು ಕೊಟ್ಟ ಭಾಷೆಗೆ ತಪ್ಪಿದ್ದೀರಿ ಎಂದು ಹೇಳಬೇಕಾಗುತ್ತದೆ. ಐ.ಎ.ಎಸ್. ಅಧಿಕಾರಿಗಳನ್ನು ಇದಕ್ಕೆ ನೇಮಕ ಮಾಡುತ್ತೀರಿ, ಅವರನ್ನು ಏತಕ್ಕೆ ನೇಮಕ ಮಾಡಿದ್ದೀರಿ ? ಕನ್ನಡ ನಾಡಿನ ಬಗ್ಗೆ ಇಷ್ಟು ಅಭಿಮಾನವಿರುವವರು ಕನ್ನಡದ ಬಗ್ಗೆ ಅತ್ಯುತ್ಸಾಹ ತುಂಬಿ ತಳುಕುತ್ತಿರವವರು, ಕನ್ನಡದ ಸಲುವಾಗಿ ಕಾವಲು ಸಮಿತಿಯನ್ನು ನೇಮಿಸಿ ನಾವು ಕನ್ನಡದಲ್ಲಿ ಮಾತನಾಡದಿದ್ದರೆ ಹೊಡೆಯಿರಿ ಎಂದು ಪುಟ್ಟಪ್ಪನವರಿಗೆ ಹೇಳಿದಂತಹವರು, ನಮ್ಮಲ್ಲಿ ಕೆ.ಎ.ಎಸ್. ಅಧಿಕಾರಿಗಳು ಇರಲಿಲ್ಲವೇ ಐ.ಎ.ಎಸ್ ಅಧಿಕಾರಿಗಳನ್ನು ಏಕೆ ಇವುಗಳಿಗೆ ನೇಮಿಸಿದ್ದೀರಿ. ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಕೆ.ಎ.ಎಸ್. ಅಧಿಕಾರಿಗಳನ್ನು ಇದಕ್ಕೆ ನೇಮಿಸಬೇಕೆಂದು ನಾನು ತಮ್ಮಲ್ಲಿ ಈ ಮೂಲಕ ವಿನಂತಿಸುತ್ತೇನೆ. ನಮ್ಮ ಕರ್ನಾಟಕ ಚೆಂದವಾದ ಸ್ಥಿತಿಯೋಪಾದಿಯಲ್ಲಿ ಇರುವುದರಿಂದ ಎಲ್ಲರೂ ಕರ್ನಾಟಕವೇ ಬೇಕೆಂದು ಹೇಳುತ್ತಾರೆ, ಹೊರಗಿನವರು ಎಲ್ಲರೂ ಇಲ್ಲಿಯೇ ಇರಲಿ ಎಂದು ಹೇಳುತ್ತಾರೆ ನಾನು ಬೇಡವೆಂದು ಹೇಳುವುದಿಲ್ಲ ಇದು ನಮ್ಮ ರಾಷ್ಟ್ರ, ನಮ್ಮ ರಾಜ್ಯ ಅದರ ಒಂದು ವಿಭಾಗವಾಗಿದೆ. ಆದರೆ ನಮ್ಮ ರಾಜ್ಯದ ಜನ ಉಪವಾಸ ಬೀಳುವಾಗ ಇವರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವುದು ಬೇಡ ಎಷ್ಟು ಬೇಕೋ ಅಷ್ಟನ್ನು ಕೊಡೋಣ. ಐ.ಎ.ಎಸ್ ಅಧಿಕಾರಿಗಳಲ್ಲಿ ಹೆಚ್ಚು ಜನ ಇರತಕ್ಕಂತಹವರು ಹೊರಗಿನವರೇ, ನಮ್ಮ ಕರ್ನಾಟಕದವರು ಕೆಲವಾರು ಜನರಿದ್ದರೂ ಕೂಡ ಅವರನ್ನು ಮೇಲಕ್ಕೆ ಕಳಿಸಿದ್ದೇವೆ ಆ ದೃಷ್ಟಿಯಿಂದ ಆಲೋಚನೆ ಮಾಡುವ ಪ್ರಸಂಗ ಈಗ ಬಂದಿದೆಯೆಂದು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ ಇನ್ನು ಉದ್ದಿಮೆ ಬಗ್ಗೆ ಮಾತನಾಡುವುದಾದರೆ ಕಣ್ಣಿನಲ್ಲಿ ನೀರು ಬರುವುದಿಲ್ಲ ರಕ್ತ ಬರುತ್ತದೆ, ಉದ್ಯಮಗಳೆಲ್ಲಾ ಮಣ್ಣು ಪಾಲಾಗುತ್ತಿವೆ. ಆದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇವೆ. ಅವುಗಳಿಗೆ ಪ್ರೋತ್ಸಾಹ ಕೊಡುವುದರ ಬದಲಾಗಿ ಆ ಉದ್ಯಮಗಳನ್ನು ಹತ್ತಿಕ್ಕುವಂತಹ ರೀತಿ ಇವರ ಪ್ರಯತ್ನ ನಡೆದಿದೆ. ಎಲೆಕ್ಟ್ರಿಸಿಟಿ ಇಲ್ಲದೆ ಉದ್ಯಮಗಳು ಹೇಗೆ ನಡೆಯಬೇಕು ? ವಿದ್ಯುಚ್ಛಕ್ತಿ ಇಲ್ಲದಿದ್ದರೂ ಇದ್ದುದರಲ್ಲೇ ಆದಕ್ಕೆ ವ್ಯವಸ್ಥೆ ಮಾಡಬಹುದು ಆದರೆ ಅದರಲ್ಲಿ ಬಹಳ ಲೋಪದೋಷ ಇದೆ ಅದನ್ನು ತಿದ್ದುವಂತಹ ಜನ ಇಲ್ಲಿ ಸುಮಾರು ೮೦ ಪರ್ಸೆಂಟ್ ವಿದ್ಯುಚ್ಛಕ್ತಿಯನ್ನು ಕಟ್ ಮಾಡಿದ್ದಾರೆ, ಇದನ್ನು ಮಾಡಿದಾಗಲೂ ಸಹ ಕಬ್ಬಿಣದ ಕಾರ್ಖಾನೆಗಳು ನಡೆಯುತ್ತಿವೆ ಹೇಗೆ ನಡೆಯುತ್ತಿವೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅದಕ್ಕೆ ಒಂದು ಪರ್ಸೆಂಟ್ ವಿದ್ಯುತ್‌ಚ್ಛಕ್ತಿಯನ್ನು ಕಟ್ ಮಾಡಿದರೂ ಸಹ ಕಾರ್ಖಾನೆ ನಡೆಯುವುದಕ್ಕೆ ಸಾಧ್ಯವಿಲ್ಲ, ಜನರೇಟರ್ ಇಲ್ಲದೇ ನಡೆಸುವುದಕ್ಕಾಗುವುದಿದಲ್ಲ, ಅದಕ್ಕೆ ವಿದ್ಯುಚ್ಛಕ್ತಿ ಬೇಕು, ಈ ವ್ಯವಸ್ಥೆ ಹೇಗೆ ನಡೆಯುತ್ತಿದೆ ಎಂದರೆ ಈ ಕಾರ್ಖಾನೆಗಳಿಗೆ ಮೀಟರುಗಳು ಇಲ್ಲ ಯಾರದೋ ಮೀಟರ್‌ನಿಂದ ಯಾರಿಗೋ ವಿದ್ಯುಚ್ಛಕ್ತಿ ಸಿಗುತ್ತದೆ ಇದರಿಂದಾಗಿ ಅವನು ನಡೆಸುತ್ತಾನೆ. ಇನ್ನು ಟೆಲಿಫೋನ್ ಸಹ ಹಾಗೇ ನಡೆಯುತ್ತಿವೆ. ಯಾರದೋ ಟೆಲಿಫೋನ್ ಬಿಲ್ ಇನ್ನಾರದ್ದೋ ಟೆಲಿಫೋನ್‌ಗೆ ಹೋಗುತ್ತದೆ ೫-೬ ಸಾವಿರ ರೂಪಾಯಿಯ ಬಿಲ್ ಬರುತ್ತದೆ ನಾವು ಅದನ್ನು ಉಪಯೋಗ ಮಾಡಿರುವುದೇ ಇಲ್ಲ, ಈ

ಬಿಲ್‌ಗಳು ಒಬ್ಬರದ್ದು ಒಬ್ಬರಿಗೆ ಹೋಗಿ ತುಂಬಾ ತೊಂದರೆಯಾಗಿ ಅನೇಕ ಜನರು ಎಸ್.ಟಿ.ಡಿ. ಸೌಲಭ್ಯವನ್ನೇ ಬಂದ್ ಮಾಡಿಸಿಕೊಂಡಿದ್ದಾರೆ. ವಿದ್ಯುಚ್ಛಕ್ತಿ ಇಲ್ಲದೇ ಇಂಡಸ್ಟ್ರೀಗಳು ಬಂದ್ ಆಗುತ್ತಿವೆ. ಇದನ್ನೆಲ್ಲಾ ನಾನು ಹೇಳದೆ ಗತ್ಯಂತರವಿಲ್ಲ. ಸಮಯವನ್ನು ನೋಡುವ ಹಾಗೆಯೇ ಇಲ್ಲ ಇದನ್ನೆಲ್ಲಾ ಅವರ ಗಮನಕ್ಕೆ ತಂದರೆ ತಿದ್ದುತ್ತಾರೆಂದು ನನಗೆ ಗೊತ್ತಿದೆ ಅದಕ್ಕೋಸ್ಕರ ಇದನ್ನೆಲ್ಲಾ ಅವರ ಗಮನಕ್ಕೆ ತರುತ್ತಿದ್ದೇನೆ. ಕೆಲವು ಇಂಡಸ್ಟ್ರೀಗಳಲ್ಲಿ ಕೋಟಿ ಗಟ್ಟಲೆ ಹಣವನ್ನು ಬಡ್ಡಿ ರಹಿತವಾದ ಸಾಲವನ್ನಾಗಿ ಕೊಟ್ಟಿದ್ದಾರೆ ನೀವು ಕೊಟ್ಟಿಲ್ಲ ನಾವು ಇದ್ದಾಗ ಕೊಟ್ಟಿದ್ದುದು, ಅದನ್ನು ವಸೂಲು ಮಾಡುವಂತಹ ಕೆಲಸವನ್ನು ನೀವು ಮಾಡಿಲ್ಲ ಅದನ್ನು ಮಾಡಬೇಕು. ಇಂಡಸ್ಟ್ರಿಯಲ್ ಇಂಟರೆಸ್ಟ್ ಫ್ರೀ ಲೋನ್ ಅನ್ನು ವಸೂಲು ಮಾಡಿಲ್ಲ, ಸಹಕಾರ ಸಂಘಗಳಿಗೆ ಹಣ ಕೊಡದಿದ್ದರೆ ಮಾನ್ಯ ಜಾಲಪ್ಪ ನವರು ಅವರನ್ನು ಡಿಫಾಲ್ಟರ್ ಮಾಡುತ್ತಾರೆ.

ಮಾನ್ಯ ಸಭಾಧ್ಯಕ್ಷರೇ, ಇದಾದ ನಂತರ ಕೆಲವು ಯೋಗ್ಯವಾದ ಯೋಜನೆಗಳನ್ನು ಸಹಾ ರಾಮಕೃಷ್ಣ ಹೆಗಡೆಯವರು ಹಾಕಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಲೇಬೇಕು ಎಲ್ಲೆಲ್ಲಿ ಟೀಕೆಗಳನ್ನು ಮಾಡಿದ್ದೇನೋ, ಅದು ಬರೀ ಟೀಕೆಗಳು ಅಲ್ಲ. ಈ ೨೦ ಅಂಶಗಳ ಕಾರ್ಯಕ್ರಮ ಎಂದೂ ಅಂದಿರಲಿಲ್ಲ. ಈ ಸಲ ೨೦ ಅಂಶಗಳ ಕಾರ್ಯಕ್ರಮ ಎಂದು ಅಂದಿದ್ದಾರೆ ಅವರು ಇಲ್ಲಿಯತನಕ ಆ ರೀತಿ ಎನ್ನದೇ ಬೇರೆ ಯಾವುದೋ ಹೆಸರು ಕೊಡುತ್ತಿದ್ದರು. ನನಗೆ ಇದರಿಂದ ಸಂತೋಷವಾಯಿತು ರಾಜೀವ್ ಗಾಂಧಿ ಅಂದಿದ್ದರು ನಮ್ಮ ಮಾನ್ಯ ಮುಖ್ಯಮಂತ್ರಿಗಳು ರಾಷ್ಟ್ರದ ನಿಲುವಿಗೆ ಹೊಂದಾಣಿಕೆಯಾಗಿ ಈ ವರ್ಗವನ್ನು ಮಾಡುತ್ತಿದ್ದಾರೆ ಎಂದು......

ಶ್ರೀ ರಾಮಕೃಷ್ಣ ಹೆಗಡೆ.—ಇಂದಿರಾಗಾಂಧಿಯವರು ೨೦ ಅಂಶಗಳ ಕಾರ್ಯಕ್ರಮವನ್ನು ರಾಷ್ಟ್ರದ ಕಾರ್ಯಕ್ರಮ ಎಂದು ಹೇಳಿದ ಮೇಲೆ ಅದನ್ನು ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಹೋದ ವರ್ಷ ಅವರು ಅಂದಿದ್ದರು, ಆಗ ಈ ವಿಷಯ ಬಂದಿರಲಿಲ್ಲ ನನಗೆ ಸಂತೋಷ. ಇರಲಿ, ನಮ್ಮ ಸಂತೋಷಕ್ಕೋಸ್ಕರ ಅಂದಿದ್ದೇನೆ ಎಂದು ಇಟ್ಟುಕೊಳ್ಳಿ. ಮಾನ್ಯ ಹೆಗಡೆಯವರು ಜನರನ್ನು ನಂಬಿಸುವುದರಲ್ಲಿ ಬಹಳ ಬುದ್ಧಿವಂತರು ಅವರಿಗೆ ಚುರುಕು ಇದೆ. ಆ ಬುದ್ಧಿಯೆಲ್ಲಾ ಅವರಿಗೆ ಒಬ್ಬರಿಗೇ ಹೋಗಿಬಿಟ್ಟಿದೆ ಈ ಸಮಾಜದಲ್ಲಿ ಎಂದು ನನಗೆ ಅನಿಸುತ್ತದೆ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನಾ ಘಟಕ ಕೆಲಸದ ಪ್ರಾರಂಭ ಇದನ್ನು ಯಾವಾಗ ಮುಗಿಸುತ್ತೀರಿ ಎಂದು ಕೇಳಿದಾಗ ಏನು ಹೇಳಲಿಲ್ಲ ನಾವು ಫೌಂಡೇಷನ್ ಹಾಕಿಲ್ಲವೇನು ? ಒಂದು ಲಕ್ಷ ಫೌಂಡೇಷನ್ ಹಾಕಿದ್ದೇವೆ. ಹಾಕಿದವರು ಹಾಕಿಸಿದವರು ಸತ್ತಿದ್ದಾರೆ ಕರ್ನಾಟಕ ವಿದ್ಯುತ್ ನಿಗಮದಿಂದ ಇಂಡಿ, ಜಮಖಂಡಿ, ಕೋಲಾರ ಇಲ್ಲಿ ಡೀಸೆಲ್ ಜನರೇಟರ್‌ಗಳ ಪ್ರಾರಂಭದಿಂದ ಬಿರ್ಲಾ ಟಾಟಾದವರಿಗೆ ಹೇಳಿದ್ದರೆ ನಾಳೆ ಮುಂಜಾನೆ ಅವುಗಳನ್ನು ಸ್ಥಾಪನೆ ಮಾಡುತ್ತಾರೆ. ನೀವು ಆ ರೀತಿಯಾಗಿ ಕೈಹಾಕಿ ತೆಗೆದು ಕೊಳ್ಳಿ ತಮಗೆ ಒಂದು ನೆನಪು ಮಾಡಿಕೊಡುತ್ತೇನೆ, ಅನಿಲಸಂಪತ್ತು ಹಳ್ಳಿಗಳಲ್ಲಿರತಕ್ಕಂಥ ಎಲ್ಲಾ ಕೆಟ್ಟವಸ್ತುಗಳನ್ನು ಸಂಗ್ರಹಿಸಿ ಅನಿಲ ಸಂಪತ್ತನ್ನು ಉಪಯೋಗ ಮಾಡಿ ಎಲೆಕ್ಟ್ರಿಸಿಟಿ ಹೆಚ್ಚು ಮಾಡಿ. ಅದಕ್ಕೆ ನಿಜವಾಗಿಯೂ ಸ್ವಲ್ಪ ಹಣವನ್ನು ಸಹಾಯ ಮಾಡಿದರೆ, ಸ್ವಲ್ಪ ಗ್ಯಾರಂಟಿ ಕೊಟ್ಟರೆ ನಾವು ಎಕ್ಸಪಿರಿಮೆಂಟ್ ಮಾಡುತ್ತೇವೆ ಎಂದು ಹೇಳಿದಾಗ ನೀವು 'ಹೂಂ' ಎಂದು ಹೇಳಿದರೂ ಆಗಿಲ್ಲ. ಕೇಂದ್ರ ಸರ್ಕಾರದ ಒಂದು ಕಮಿಟಿ ಮಾಡಿ ಅದರ ರಾವ್ ಚೌದುರಿಯವರು ಹುಲುಕೋಟಿ ಕಡೆಗೆ ಒಂದು ಕೇಳಿದರು ಇದು ಬೆಳೆದು ಬಂದಿದೆ, ಮಾಡುವುದು ಬೇಡ, ಪಾವಗಡಕ್ಕೆ ಹೋಗಿ ಎಂದು ಪಾವಗಡದ ಶೇಂಗಾ ಬೆಳೆಯಲು ಬಹಳ ಉತ್ತಮವಾಗಿದೆ ಎಂದು ಆ ಸಮಿತಿಯವರನ್ನು ಕರೆದುಕೊಂಡು ಹೋಗಿದ್ದೆನು. ನಿಮಗೂ ಸಹಾ ಫೋನ್ ಮಾಡಿದಾಗ ನೀವು ದೆಹಲಿಗೆ ಹೋಗಿದ್ದಿರಿ. ಪಾವಗಡಕ್ಕೆ ನನ್ನ ಕಾರಿನಲ್ಲಿ ಹೋಗಿದ್ದೆವು. ಅಲ್ಲಿ ಅವರು ಅದನ್ನು ನೋಡಿ ರಿಪೋರ್ಟನ್ನು ಸಬ್‌ಮಿಟ್ ಮಾಡಿದ್ದಾರೆ. ಪಾವಗಡ ಉತ್ತಮವಾದಂಥ ಸ್ಥಳ ಇದೆ. ೧೦–೧೫ ಕೋಟಿ ರೂಪಾಯಿಗಳ ವೆಚ್ಚದಿಂದ ಒಂದು ಯೋಜನೆಯನ್ನು ಮಾಡಬೇಕು ಎಂದು ಹೇಳಿದ್ದಾರೆ. ಇದನ್ನು ಪೂರ್ಣವಾಗಿ ತಯಾರು ಮಾಡಿದಂಥ ನಂತರ ಕೋ–ಆಪರೇಟಿವ್ ಸೊಸೈಟಿಗೆ ಟ್ರಾನ್ಸ್‌ಫರ್ ಮಾಡಬೇಕು ಎಂದು ಅವರ ಇಚ್ಛೆ. ಆ ದೃಷ್ಟಿಯಿಂದ ಅವರಿಗೆ ಹೇಳಿದ್ದೇವೆ, ನೀವು ಇವತ್ತಿನ ದಿವಸ ಇರತಕ್ಕಂಥ ಅನೇಕ ಸೈಂಟಿಸ್ಟ್‌ಗಳು ನಮ್ಮಲ್ಲಿ ಇದ್ದಾರೆ, ಕೆಲಸ ಇಲ್ಲದೆ ಹಾಗೆಯೇ ಇದ್ದಾರೆ, ೩೧ನೇ ತಾರೀಖು ಆಗುತ್ತಿದ್ದಂತೆಯೇ ಪಗಾರವನ್ನು ಎಲ್ಲಿಂದಲಾದರೂ ತಂದು ಕೊಡಲೇಬೇಕು ಯಾವುದಾದರೂ ಬಿಲ್ಲನ್ನು ಹಿಡಿದಾದರೂ ಸಹಾ ಕೊಡಲೇಬೇಕು. ಅಂಥ ಸೈಂಟಿಸ್ಟ್‌ಗಳಿಗೆ ಈ ಕೆಲಸವನ್ನು ಹಚ್ಚಿ ಇದರಿಂದ ಎಲೆಕ್ಟ್ರಿಸಿಟಿಯನ್ನು ಊರು ಊರಿಗೂ ಕೊಡಿ. ಎಲೆಕ್ಟ್ರಿಸಿಟಿಯ ತೊಂದರೆ

ಯನ್ನು ನಿರ್ಮೂಲನ ಮಾಡಿ ಈ ಎಲೆಕ್ಟ್ರಿಸಿಟಿಯಿಂದ ಸಣ್ಣ ಸಣ್ಣ ಉದ್ಯಮಗಳು ನಡೆಯಲಿ. ಹೆಚ್ಚಾದ ಎಲೆಕ್ಟ್ರಿಸಿಟಿಯನ್ನು ನಿಮ್ಮ ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಕೊಡಲಿ. ಇದರ ಬಗ್ಗೆ ನೀವೇ ವಿಚಾರ ಮಾಡಿ. ಇದರ ಬಗ್ಗೆ ವಿಚಾರಣೆ ಮಾಡಲಿಕ್ಕೆ ಒಂದು ಸಮಿತಿಯನ್ನಾದರೂ ಇಡುತ್ತೀರಾ ? ಅದೂ ಇಲ್ಲ. ಅವರಲ್ಲಿ ಒಂದು ತಪ್ಪು ಕಲ್ಪನೆ ಇದೆ ಅದೇನೆಂದರೆ ಈ ಕಾಂಗ್ರೆಸ್‌ನವರು ನಂಬಲಿಕ್ಕೆ ಅನರ್ಹವಾದ ಜನ ಎಂದು ತಿಳಿದುಕೊಂಡಿದ್ದಾರೆ ಏತಕ್ಕೆ ಈ ರೀತಿ ಆಗಿದೆ ಎಂದರೆ ಅವರನ್ನು ಜೈಲಿನಲ್ಲಿ ಹಾಕಿದರೂ ಎನ್ನುವ ದೃಷ್ಟಿಯಿಂದ ಈ ರೀತಿ ತಿಳಿದುಕೊಂಡಿದ್ದಾರೆ. ನಾವು ಆ ರೀತಿ ನಿಮ್ಮನ್ನು ಜೈಲಿನಲ್ಲಿ ಹಾಕದಿದ್ದರೆ ನಿಮಗೆ ಕೀರ್ತಿ ಬರುತ್ತಿರಲಿಲ್ಲ, ನಿಮ್ಮ ಮನೆಯವರಿಗೆ ನೀವು ಏನೆಂದು ಹೇಳುತ್ತಿದ್ದಿರಿ ನೀವು ಏನು ಉತ್ತರ ಹೇಳುತ್ತಿದ್ದೀರಿ?

ಈ ದೃಷ್ಟಿಯಿಂದ ತಾವು ವಿಚಾರಣೆ ಮಾಡಬೇಕು ಈವೊತ್ತು ಈ ಅನಿಲ ಯೋಜನೆ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ಹೇಳುತ್ತೇನೆ ಮಾನ್ಯ ಸಭಾಧ್ಯಕ್ಷರೇ. ಹೊಟೇಲ್‌ನ ಕೊಠಡಿಗಳಿಗೆ ಹೆಚ್ಚು ಹಣ ಹಾಕಿದ್ದೀರಿ. ಅವರಿಗೆ ಎಷ್ಟು ಹಾಕಿದರೂ ಒಳ್ಳೆಯದು ಎಂದು ಹೇಳುತ್ತೇನೆ. ಏತಕ್ಕೆಂದರೆ ಅಲ್ಲಿ ಲಕ್ಷ್ರುರಿಯಾಗಿ ಬರುವವನು ೫೦ ಕೊಡುವುದಕ್ಕೆ ೧೦೦ ರೂಪಾಯಿ ಕೊಡುತ್ತಾರೆ, ೧೦೦ ರೂಪಾಯಿ ಕೊಡುವುದಕ್ಕೆ ೧೫೦ ರೂಪಾಯಿ ಕೊಡುತ್ತಾನೆ. ಅದರಿಂದ ಅವರಿಗೆ ಹೆಚ್ಚು ತೆರಿಗೆ ಹಾಕುವುದು ಒಳ್ಳೆಯದು.

ಇನ್ನು ಕಡ್ಲೆಕಾಯಿ ಎಣ್ಣೆಗೆ ತೆರಿಗೆಯನ್ನು ಕಡಿಮೆ ತೋರಿಸಿದ್ದೀರಿ ಇದು ಒಂದು ರೀತಿಯಲ್ಲಿ ಒಳ್ಳೆಯದು, ಹಿತವಾಗಿದ್ದರೂ ಕೂಡ ಇದು ಎಲ್ಲರಿಗೂ ಗೊತ್ತಿದೆ ಕೆಲವರು ರಾಮ ಕೃಷ್ಣ ಲೆಕ್ಕ ಇಡುತ್ತಾರೆ. ಇದರಲ್ಲಿ ರಾಮನ ಲೆಕ್ಕ ಇಟ್ಟವರು ಟ್ಯಾಕ್ಸ್ ಕೊಡುತ್ತಾರೆ, ಕೃಷ್ಣನ ಲೆಕ್ಕ ಇಟ್ಟವರು ಟ್ಯಾಕ್ಸ್ ಕೊಡುವುದಿಲ್ಲ. ಮತ್ತು ಇದರಲ್ಲಿ ನಿಮಗೆ ಯಾರು ಟ್ಯಾಕ್ಸ್ ಹೆಚ್ಚಿಗೆ ಕೊಡುತ್ತಾರೆ ಎಂದರೆ ಈ ಸಹಕಾರಿ ರಂಗದಲ್ಲಿರುವವರು ೧/೧೦ ಯಾರು ಇದ್ದಾರೋ ಅವರು ಟ್ಯಾಕ್ಸ್ ಕೊಡುತ್ತಾರೆ, ಇನ್ನು ೧/೯ ಭಾಗ ಎಂದರೆ ೧೦೦ ಕ್ಕೆ ೯೦ ಭಾಗ ಖಾಸಗಿ ವಲಯದವರು ಏನು ಇರುತ್ತಾರೋ ಅವರು ಟ್ಯಾಕ್ಸ್ ಕೊಡುವುದಿಲ್ಲ. ಅವರು ಟ್ಯಾಕ್ಸ್ ಕೊಡದಿದ್ದರೆ ನಿಮ್ಮ ಮನೆ ಜಫ್ತಿ ಮಾಡುತ್ತೇವೆಂದು ಹೇಳುತ್ತಾರೆ. ಅವರು ಬಂದಾಗ ಮಾಮೂಲಿ ಕೊಟ್ಟುಬಿಡುತ್ತಾರೆ ಅಲ್ಲಿಗೆ ಟ್ಯಾಕ್ಸ್ ವಸೂಲಾಗುವ ಹಾಗಿಲ್ಲ. ಇದರಿಂದ ಡಿಫಿಸಿಟ್ ಆಗದೆ ಮತ್ತೇನಾಗುತ್ತದೆ ಆದುದರಿಂದ ಇದರ ಬಗ್ಗೆ ಫೈನಾನ್ಸ್ ಸೆಕ್ರೆಟರಿಗೂ ಮತ್ತು ಡೆಪ್ಯೂಟಿ ಸೆಕ್ರೆಟರಿಗೂ ಸರಿಯಾಗಿ ನಿರ್ದೇಶನ ಕೊಡಿ. ಯಾವ್ಯಾವ ಕಡೆಯಲ್ಲಿ ಏನೇನು ಮಾಮೂಲು ಇವೆ, ಎಲ್ಲೆಲ್ಲಿ ಯಾವಯಾವ ಅಧಿಕಾರಿಗಳಿಗೆ ಯಾವರೀತಿಯಾಗಿ ಅವರಿಗೆ ಕಿಸೆಗೆ ಹೋಗುತ್ತದೆ ಅದನ್ನು ಸರಿಯಾಗಿ ಲೆಕ್ಕ ಮಾಡಿ ತೆಗೆದರೆ ಗೊತ್ತಾಗುತ್ತದೆ. ರಾಮನ ಲೆಕ್ಕ ಇಡುವವರು ಯಾರು, ಕೃಷ್ಣನ ಲೆಕ್ಕ ಇಡುವವರು ಯಾರು ಎನ್ನುವುದು ಹಿಂದೆ ಯಾವುದೋ ಒಬ್ಬ ಬ್ಯಾಂಕಿಗೆ ವಂಚನೆ ಮಾಡಿ ಅವನ ಮೇಲೆ ಸಿಬಿಓ ಎನ್‌ಕ್ವೈರಿ ನಡೆದಿದ್ದರೂ ಸಹ ಆ ವ್ಯಕ್ತಿಯನ್ನು ಒಂದು ಜಿನ್ನಿಂಗ್ ಫ್ಯಾಕ್ಟರಿಗೆ ನಾಮಕರಣ ಮಾಡಿದ್ದೀರಿ. ಇದು ದುರ್ದೈವ ಏತಕ್ಕೆ ಹೀಗೆ ಮಾಡಿದ್ದೀರಾ ಎನ್ನುವುದು ನನಗೆ ಗೊತ್ತಿಲ್ಲ. ಶಿಕ್ಷೆ ಆಗಬೇಕಾದಂಥ ವ್ಯಕ್ತಿಗೆ ಈ ಒಂದು ಕ್ವಾಲಿಫಿಕೇಷನ್ ಕೊಟ್ಟು ಅವನನ್ನು ಅಲ್ಲಿಗೆ ನಾಮಕರಣ ಮಾಡಿದ್ದೀರಿ ಇದನ್ನು ತಾವು ಗಮನಿಸಲಿಲ್ಲವೇ ? ಅವನು ನಿಮ್ಮ ಜಾತಿಯವನಾದರೆ, ನಿಮ್ಮ ಬಂಧು ಆಗಿದ್ದರೆ ಅವನಿಗೆ ನಿಮ್ಮ ಮನೆಯಲ್ಲಿ ಬೇಕಾದ ಪುರಸ್ಕಾರ ಕೊಡಿರಿ. ಆದರೆ ಇಂತಹ ಅನೀತಿವಂತರನ್ನು ನೀತಿವಂತರನ್ನಾಗಿ ತಮ್ಮ ಆಡಳಿತದಲ್ಲಿ ಮಾಡಬೇಡಿರಿ ಎಂದು ಹೇಳುತ್ತೇನೆ.

ಇನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಜನರಲ್ ಅಡ್ಮಿನಿಸ್ಟ್ರೇಷನ್ ಖಾತೆ ವಹಿಸಿಕೊಂಡಿರುವುದರಿಂದ ಇವರ ಬಗ್ಗೆ ಒಂದು ಮಾತು ಹೇಳುವುದಕ್ಕೆ ಬಯಸುತ್ತೇನೆ.

ನಮ್ಮ ಶಿರಹಟ್ಟಿ ತಾಲ್ಲೂಕಿನಲ್ಲಿ ಒಂದು ಘಟನೆ ಬಗ್ಗೆ ಪೋಲೀಸ್ ಅಧಿಕಾರಿಯನ್ನು ಎನ್‌ಕ್ವೈರಿ ಮಾಡುವುದಕ್ಕೆ ಕಳುಹಿಸಿದರು. ಆ ಮನುಷ್ಯ ಸತ್ತು ಹೋಗಿ ಎರಡೂವರೆ ವರ್ಷವಾಗಿದೆ. ಈ ಅಧಿಕಾರಿ ಬದುಕಿದ್ದಾನೆಂದು ಅತನಿಂದ ಹೇಳಿಕೆ ತೆಗೆದುಕೊಂಡಿದ್ದೇನೆಂದು, ಅತನು ಈ ರೀತಿ ಹೇಳಿದ ಎಂದು ರಿಪೋರ್ಟ್ ಕೊಟ್ಟಿದ್ದಾರೆ. ಇದು ಎಲ್ಲಾದರೂ ಉಂಟೇ ? ಆಮೇಲೆ ಈ ವಿಷಯವನ್ನು ಮಾನ್ಯ ರಾಮಯ್ಯನವರ ಗಮನಕ್ಕೆ ತಂದಾಗ ಅವರು ನಾನು ಟೆಲಿಫೋನ್ ಮಾಡುತ್ತೇನೆಂದರು. ಅವರ ಮಾತು ಎಸ್.ಪಿ. ಕೇಳಬೇಕಲ್ಲ ಇದು ದುರ್ದೈವ. ಇನ್ನು ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಧ್ಯಕ್ಷರು ನನ್ನ ಬಗ್ಗೆ ಬಹಳಷ್ಟು ಸೌಜನ್ಯ ತೋರಿಸಿದ್ದಾರೆ, ಆ ಸೌಜನ್ಯ ಮಿತಿ

ಮೀರಿದರೆ ಅದು ದುಷ್ಪರಿಣಾಮವಾಗುತ್ತದೆ. ನನಗೆ ತಾವು ಟೈಂ ಲಿಮಿಟ್ ಹಾಕಿದ್ದೀರಿ. ಅದೂ ಕೊಡ ಹದ್ದು ಮೀರಿದೆ ಎಂದು ನನಗೆ ಅನ್ನಿಸಿದೆ. ಆದುದರಿಂದ ನಾನು ಇನ್ನು ಕೇವಲ ೨-೩ ನಿಮಿಷ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಇನ್ನು ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಮುಖ್ಯವಾಗಿ ತೋಟಗಾರಿಕೆ ಮತ್ತು, ಪ್ಲಾಂಟೇಷನ್ ಬೆಳೆಗಳಲ್ಲಿ ತೊಡಗಿರುವಂತಹ ಜನರ ಮೇಲೆ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಇದನ್ನು ನೋಡಿದಾಗ ಕೃಷಿಗೆ ಹೆಚ್ಚಿನ ಆದ್ಯತೆಯನ್ನು ತೋರಿಸಿಲ್ಲ ಎಂದು ಕಂಡುಬರುತ್ತದೆ. ಇದು ಸರಿಯಾದ ಕ್ರಮವಲ್ಲ. ಇದನ್ನು ಕಡಿಮೆ ಮಾಡುವುದರ ಮೂಲಕ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ನೋಂದಣಿ ಬಗ್ಗೆ ಶುಲ್ಕ ತೆಗೆದುಕೊಂಡಿರುವಂತಹ ತೀರ್ಮಾನ ಬಹಳ ಯೋಗ್ಯವಾಗಿದೆ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಕ್ಯಾಂಪ್‌ಕೋ ಪ್ರಾರಂಭವಾಗುವುದಕ್ಕೆ ಮತ್ತು ಅದರ ಅಭಿವೃದ್ಧಿಗೆ ಶ್ರೀ ಸಿಂಧ್ಯಾ ಅಣ್ಣಾ ಸಾಹೇಬರು ಕಾರಣವೆಂದು ಹೇಳಬಹುದು. ಅವರು ಇದಕ್ಕೆ ಬಹಳಷ್ಟು ಸಹಾಯ ಮಾಡಿದ್ದಾರೆ. ಅವರು ಸಹಾಯ ಮಾಡದಿದ್ದರೆ ಇದು ಇವೊತ್ತು ಈ ಸ್ಥಿತಿಗೆ ಬರುತ್ತಿರಲಿಲ್ಲ. ಕೋಕೋ ಖರೀದಿ ಮಾಡುವವರಿಗೆ ೩ ವರ್ಷಗಳ ಕಾಲ ಕೆಲವೊಂದು ಸೌಲಭ್ಯವನ್ನು ತೋರಿಸಿದ್ದಾರೆ. ಇದು ಎಲ್ಲಾ ಸಹಕಾರಿಗಳಿಗೂ ಅಭಿಮಾನಪ್ರಾಯವಾದುದೆಂದು ಹೇಳುತ್ತೇನೆ. ಈ ಒಂದು ಸೌಲಭ್ಯವನ್ನು ಇನ್ನುಳಿದ ಎಲ್ಲಾ ಪ್ರೊಸೆಸಿಂಗ್ ಯುನಿಟ್‌ಗಳಿಗೂ ತೋರಿಸಿದ್ದರೆ ನಮ್ಮ ಸಹಕಾರಿಸಂಘಗಳು ಇನ್ನಷ್ಟು ಬೆಳೆಯುವುದಕ್ಕೆ ಅನುಕೂಲವಾಗುತ್ತಿತ್ತು. ಇವೊತ್ತಿನದಿವಸ ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಮತ್ತು ಎಣ್ಣೆ ಅಭಿವೃದ್ಧಿ ಸಂಸ್ಥೆಗಳಲ್ಲಿ ಸರ್ಕಾರದ ಷೇರು ಹಣ ಹೇರಳವಾಗಿದೆ. ಗದಗ್‌ನಲ್ಲಿರುವ ಕೋಆಪರೇಟಿವ್ ಟೆಕ್ಸ್‌ಟೈಲ್ ಮಿಲ್‌ನಲ್ಲಿ ಸರ್ಕಾರದ್ದು ಹತ್ತು ಲಕ್ಷದಷ್ಟು ಮಾತ್ರ ಷೇರು ಹಣವಿದೆ. ಇದನ್ನು ಬಿಟ್ಟರೆ ಇನ್ನುಳಿದ ಎಲ್ಲ ಕೋಆಪರೇಟಿವ್ ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಸರ್ಕಾರದ್ದು ಶೇಕಡ ೫೦ಕ್ಕೂ ಹೆಚ್ಚು ಷೇರು ಹಣವಿದೆ. ಈ ಸಂಸ್ಥೆಗಳ ಬೆಳವಣಿಗೆಗೆ ಏನೇನು ಅನುಕೂಲಗಳು ಸರ್ಕಾರದ ಕಡೆಯಿಂದ ಬೇಕಾಗಿದೆ ಎಂಬುದನ್ನು ತಿಳಿದುಕೊಳ್ಳಲು ನಿಮ್ಮ ಅಧಿಕಾರವರ್ಗ ಮುಂದೆ ಬರಬೇಕು. ಎಲ್ಲವನ್ನೂ ಸಹಕಾರ ಮಂತ್ರಿಗಳೇ ನೋಡುವುದಕ್ಕಾಗುವುದಿಲ್ಲ. ಈ ಹಿಂದೆ ತಮಗೆ ತಿಳಿದಂತೆ ಅಧಿಕಾರಿಗಳು ಎಲ್ಲಾ ಕಡೆಗೂ ಹೋಗಿ ನಿಮಗೆ ಏನೇನು ಸೌಲಭ್ಯಗಳು ಬೇಕು ಮತ್ತು ಯಾವಯಾವ ಯೋಜನೆಗಳು ಆಗ ಬೇಕಾಗಿದೆ ಎಂದು ಕೇಳುತ್ತಿದ್ದರು. ಆದರೆ ಇವೊತ್ತಿನದಿವಸ ಈ ಸಹಕಾರಿ ಕ್ಷೇತ್ರದ ಬಗ್ಗೆ ಮಾತನಾಡುವುದೇ ಕಷ್ಟವಾಗಿದೆ. ಸಹಕಾರಿ ಕ್ಷೇತ್ರ ಎಂದು ಕೂಡಲೇ ಅಲ್ಲಿ ಯಾರೋ ಏನೋ ತಿಂದಿದ್ದಾರೆ ಎಂದು ಅರ್ಥ ಕಲ್ಪಿಸುತ್ತಾರೆ. ಎಲ್ಲೋ ಕೆಲವು ಕಡೆಗಳಲ್ಲಿ ನಷ್ಟವಾಗಿದೆ, ಲುಕ್ಸಾನಾಗಿದೆ ಎಂದುಕೊಂಡು ಇಡೀ ಸಹಕಾರ ಚಳುವಳಿಯನ್ನೇ ನಿಂದಿಸುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವೊತ್ತು ಶೇಕಡ ೯೦ರಷ್ಟು ಸಹಕಾರಸಂಘಗಳು ಸರಿಯಾಗಿ ನಡೆಯುತ್ತಿಲ್ಲ.

ಶ್ರೀ ಕೆ. ಎಚ್. ಪಾಟೀಲ್.— ಇಲ್ಲಿ ಕೆಲಸ ಮಾಡುವವರ ಪೈಕಿ ಶೇಕಡ ೯೦ರಷ್ಟು ಜನರು ಹಣ ತಿಂದುಹಾಕಿರಬಹುದು. ಆದರೆ ಹಣ ತಿಂದವರು ಯಾರೂ ಸಹ ಊರು ಬಿಟ್ಟು ಹೊರಗಡೆ ಹೋಗಿಲ್ಲ. ಇಲ್ಲಿ ೯೦ ಜನರು ತಿಂದುಹಾಕುವುದನ್ನು ಖಾಸಗಿ ಕ್ಷೇತ್ರದಲ್ಲಿ ಒಬ್ಬರೇ ತಿಂದುಹಾಕುತ್ತಾರೆ. ಇಲ್ಲಿ ಯಾರಾದರೂ ಹಣ ದುರುಪಯೋಗ ಪಡಿಸಿಕೊಂಡು ಅದನ್ನು ಕಟ್ಟದಿದ್ದರೆ ಇಲ್ಲವೇ ಸತ್ತು ಹೋದರೆ ಅವರ ಮಕ್ಕಳ ಕಡೆಯಿಂದಲಾದರೂ ವಸೂಲಿ ಮಾಡಲಾಗುತ್ತದೆ. ಆದ್ದರಿಂದ ಈ ಸಹಕಾರಿ ಕ್ಷೇತ್ರಗಳ ಬಗ್ಗೆ ಜನರಲ್ಲಿರುವಂತಹ ತಪ್ಪು ಅಭಿಪ್ರಾಯವನ್ನು ಮೊದಲು ತೆಗೆದುಹಾಕಬೇಕು, ಈ ಸಹಕಾರಿ ಚಳುವಳಿ ಎಂಬುದು ಜನರ ಅಭಿವೃದ್ಧಿಗಾಗಿ ಹಾಗೂ ಸಾಮಾನ್ಯ ಜನರ ಕಲ್ಯಾಣಕ್ಕಾಗಿ ಇದೆ. ಸಮಾಜವಾದ ಜಾರಿಗೆ ಬರಬೇಕಾದರೆ ಈ ಸಹಕಾರಿ ಚಳುವಳಿ ಬೆಳೆಯಬೇಕು. ಅಷ್ಟೇ ಅಲ್ಲ, ಇದರ ಅಡಿಪಾಯವನ್ನು ಗಟ್ಟಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಮಧ್ಯದ ಮಾರಾಟದ ಬಗ್ಗೆ ಹೇಳಬೇಕಾಗಿದೆ.

ಶ್ರೀ ಕೆ. ಮಲ್ಲಪ್ಪ.— ಇದನ್ನು ನಮ್ಮ ಕಾಲದಲ್ಲಿಯೇ ರದ್ದು ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಕೆಲವೊಂದು ಸಲ ನಾನು ಮಾಡದೇ ಇದ್ದುದನ್ನು ನನ್ನ ಮಂಗ ಮಾಡು ಬೇಕಾಗುತ್ತದೆ ಈ ಕಾರಣದಿಂದ ಈಗ ಆಡಳಿತ ನಡೆಸುತ್ತಿರುವವರು ಏನು ಮಾಡಬೇಕು ಎಂಬುದನ್ನು ಹೇಳುತ್ತಿದ್ದೇನೆ. ಶ್ರೀಮಾನ್ ಹೆಗಡೆಯವರಿಗೆ. ನಾನು ಮಾತನ್ನು ಮುಕ್ತಾಯ ಮಾಡುವ ಮೊದಲು ಕೈ ಮುಗಿದು ಕೇಳುತ್ತಾ ಇದ್ದೇನೆ. ಇಡಿ ಹಿಂದೂಸ್ಥಾನದಲ್ಲಿ ಮೊಟ್ಟ ಮೊದಲಿಗೆ ಸಹಕಾರರಂಗ ಕರ್ನಾಟಕ ದಲ್ಲಿ ಹುಟ್ಟಿದದ್ದು. ಮೊದಲು ಸಹಕಾರಸಂಘ ಕರ್ನಾಟಕದಲ್ಲಿ ಉಗಮವಾದದ್ದು. ವಿಕ್ರಂ ಎಂಬ ರಿಜಿಸ್ಟ್ರಾರ್ ರವರ ನೇತೃತ್ವದಲ್ಲಿ ಗದಗ್ ತಾಲ್ಲೂಕಿನ ಕಣಗಿನಹಾಳ ಗ್ರಾಮದಲ್ಲಿ. ಅದು ಮೊದಲು ಬಾಂಬೆ ಯಲ್ಲಿತ್ತು ಇಂದು ಕರ್ನಾಟಕದಲ್ಲಿದೆ. ನಾವೆಲ್ಲರೂ ಅಭಿಮಾನದಿಂದ ಇಡೀ ದೇಶಕ್ಕೆ ಒಂದು ಕೊಡುಗೆಯನ್ನು ಕೊಟ್ಟದ್ದು ಅದರಿಂದ ಕರ್ನಾಟಕವನ್ನು ಮಾದರಿಯಾಗಿ ನಾವು ಮಾಡಬೇಕಾಗಿದೆ. ಆದಕ್ಕಾಗಿ ಸಹಕಾರ ಚಳುವಳಿ ಮುಖಾಂತರ ಸಾರಾಯಿ ಹಂಚುವ ಯೋಜನೆಯನ್ನು ಕೈಬಿಡಿ. ಮುಂದಿನ ಭಾಷಣದಲ್ಲಿ ತಾವು, ಸ್ಪಷ್ಟವಾಗಿ ಹೇಳಿ ಯಾರಾದರೂ ಈ ಬಗ್ಗೆ ಅರ್ಜಿ ಕೊಟ್ಟರೆ ಕೊಡುವುದಿಲ್ಲ ಎಂದು. ಮಾನ್ಯ ಚಾಲಪ್ಪನವರು ಒತ್ತಾಯ ಮಾಡಿದರೆ ಆಗ ವುದಿಲ್ಲ ಎಂದು ಹೇಳಿ ಅಲ್ಲದೇ ಸಾರಾಯಿ ತಯಾರು ಮಾಡುವ ಕಾರ್ಖಾನೆಗಳನ್ನು ಸಹಕಾರ ರಂಗಕ್ಕೆ ಕೊಡಬಾರದು. ಸಹಕಾರರಂಗ ಪವಿತ್ರವಾದ ದೇವಸ್ಥಾನವಾಗಿರಬೇಕು. ರಾಮದೇವರ ಗುಡಿಯಲ್ಲಿ ಶೆರೆ ಮಾಡಬಹುದೇ, ಎಷ್ಟೇ ಲಾಭವಾದರೂ ಇದು ಸರಿಯಾದುದಲ್ಲ. ನಾನು ಕೆಲವು ವಿಷಯಗಳಿಗಾಗಿ ತಮ್ಮನ್ನು ಅಭಿನಂದನೆ ಮಾಡಿದ್ದೇನೆ, ಇನ್ನು ಕೆಲವು ವಿಷಯಗಳಿಗೆ ವಿರೋಧ ಮಾಡಿದ್ದೇನೆ. ಒಟ್ಟಾರೆ ಈ ಬಡ್ಜೆಟ್ ಜನರಿಗೆ ಮಾರಕಪ್ರಾಯವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೊನೆಗೆ ದಿಕ್ಕು ತಪ್ಪಿಸುವ ಬಡ್ಜೆಟ್ ಎಂದು ಹೇಳಿದರು.

ಶ್ರೀ ಕೆ. ಹೆಚ್. ಪಾಟೀಲ್.— ಇದು ದೇಶದ ಅಭಿವೃದ್ಧಿಗೆ ಕುಂಠಿತವಾಗಿದೆ. ನಿಮಗೆ ಹೆಚ್ಚು ಹಣ ಬೇಕಾದರೆ ನಮ್ಮನ್ನು ಕೇಳಿರಿ. ಯಾವ ಯಾವ ಐಟಮ್ಸ್‌ಗೆ ಹೆಚ್ಚು ಹೆಚ್ಚು ಹಣ ಬೇಕು ಎನ್ನುವುದರ ಬಗ್ಗೆ ನಿಮ್ಮ ಬಡ್ಜೆಟ್‌ನಲ್ಲಿ ಒಂದು ತಿದ್ದುಪಡಿ ತನ್ನಿ.

ಶ್ರೀ ಎಂ. ರಘುಪತಿ.— ಮಾನ್ಯ ಪಾಟೀಲರು ಅಭಿನಂದನೆ ಮಾಡುತ್ತಾ ಇದ್ದಾರೆ, ಒಳ್ಳೆಯ ಬಡ್ಜೆಟ್‌ನ್ನು ರಾಮಕೃಷ್ಣ ಹೆಗಡೆಯವರು ಕೊಟ್ಟಿದ್ದಾರೆ ಎಂದರು. ಅವರು ನಮ್ಮ ಗುರುಗಳು, ಅವರ ಸ್ವಭಾವ ಗೊತ್ತಿದೆ. ಅವರು ಸಂಪೂರ್ಣವಾಗಿ ಈ ಬಡ್ಜೆಟ್‌ನ್ನು ಮೆಚ್ಚಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ಡ್ರಾಪ್ ಆಗುತ್ತಾಗೆ ಎಂದು ನೀವು ತಿಳಿದು ಕೊಂಡಿರಾ ?

ಶ್ರೀ ಕೆ. ಹೆಚ್. ಪಾಟೀಲ್.— ನಾನು ಈಗಾಗಲೇ ಹೇಳಿದ್ದೇನೆ. ೨೦ ಅಂಶಗಳ ಕಾರ್ಯಕ್ರಮ ಎಂದು ಕರೆದಾಗ ಎಷ್ಟು ಸಂತೋಷವಾಯಿತೋ ಹಾಗೆ ರಘುಪತಿಯವರಿಗೆ ಸಂತೋಷವಾದರೆ ನಾನು ಅಡ್ಡ ಬರುವುದಿಲ್ಲ. ನಾನು ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ಅಭಿನಂದನೆ ಅಥವಾ ತಿರಸ್ಕಾರ ಮಾಡುವುದು ದೊಡ್ಡದಲ್ಲ. ಜನರ ಕಲ್ಯಾಣ ದೃಷ್ಟಿಯಿಂದ ಮಾನ್ಯ ರಾಮಕೃಷ್ಣ ಹೆಗಡೆ ಯವರು ತಮ್ಮ ಭಾಷಣವನ್ನು ಪುನರ್ಪರಿಶೀಲಿಸಿ ಅಧಿಕಾರಿಗಳನ್ನು ಕರೆಯಿಸಿ, ತಿದ್ದುಪಡಿಯನ್ನು ಮಾಡಿ ಮಂಡನೆಮಾಡಬೇಕು. ಸಹಕಾರಿ ಮಿಲ್ಲುಗಳನ್ನು ಹೊಸದಾಗಿ ಪ್ರಾರಂಭ ಮಾಡುವುದನ್ನು ಮಂಡನೆ ಮಾಡಿದ್ದಾರೆ. ಹೇಳಿದ್ದಾರೆ. ಕೆಲವು ಮಿಲ್ಲುಗಳು ಕೇಂದ್ರಸರ್ಕಾರದ ಮನ್ನಣೆಗೆ ಹೋಗಿವೆ ಅವರು ಮನ್ನಣೆ ಕೊಟ್ಟರೆ ಸಾಕು ನಮಗೆ ರೊಕ್ಕ ಬೇಕಾಗಿಲ್ಲ. ಅದಕ್ಕೆ ಬಡ್ಜೆಟ್‌ನಲ್ಲಿ ತಿದ್ದುಪಡಿ' ಮಾಡಬೇಕು ಎಂದು ಹೇಳುತ್ತಾ, ಮತ್ತೊಮ್ಮೆ ಅನಿವಾರ್ಯವಾಗಿ ಇದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಭೆ ಮೇಲೆದ್ದು ಪುನಃ ನಾಳೆ ಬೆಳಿಗ್ಗೆ ೧೧ ಗಂಟೆಗೆ ಸೇರುವುದು.

(ಸಭೆಯು ೪ ಗಂಟೆ ೪೮ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೩ನೇ ಮಾರ್ಚಿ ೧೯೮೭ರ ಮಂಗಳವಾರದಂದು ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು).

W D 4861